ಶಿವಾದ್ವೈತ-ಸಿದ್ಧಾಂತ

ಮೊಗ್ಗೆಯ ಮಾಯಿದೇವಕೃತ

'ಶಿವಾನುಭವ ಸೂತ್ರ'ದ ಗದ್ಯಾನುವಾದ

▲

ಲಕ್ಕಪ್ಪ ಅ. ಶಿರಹಟ್ಟಿ

▲

ಅರುಣೋದಯ ಪ್ರಕಾಶನ ವಿಜಾಪುರ

‘ಕ್ರಾಂತಿ ಗಂಗೋತ್ರಿ’ಯ ಬಗೆಗೆ

‘ಕ್ರಾಂತಿಗಂಗೋತ್ರಿ’, ಪರಿಪಕ್ವಕೃತಿ

ಬಸವಣ್ಣನ ಅಕ್ಕರೆಯ ಅಕ್ಕನಾಗಿ ಅವನ ಯಶೋದುಂದುಭಿ ಎಲ್ಲೆಡೆಗೂ ಮೊಳಗುವಂತೆ ಮಾಡಲು ತನ್ನ ಪ್ರಾಣವನ್ನೇ ಪಣವಾಗಿಟ್ಟ ಸ್ತ್ರೀರತ್ನ ಅಕ್ಕನಾಗಮ್ಮ. ತ್ಯಾಗ, ಸೇವೆ, ಸಹನೆ, ನಮ್ರತೆ, ಜ್ಞಾನ, ಕಾಯಕನಿಷ್ಠೆ, ವೈರಾಗ್ಯ ಇವೇ ಮೊದಲಾದ ಸದ್ಗುಣಗಳ ಆಗರವಾಗಿದ್ದಳು ಆ ಶರಣೆ! ಎಲೆಯ ಮರೆಯ ಹೂವಿನಂತೆ ಬಾಳಿದ ಈಕೆ ಬಸವತತ್ವದ ಸೌರಭವನ್ನು ಧಾರ್ಮಿಕ ಪ್ರಪಂಚದಲ್ಲಿ ಹರಡಿದಳು. ಬತ್ತಿ ತಾನುರಿದು ಲೋಕಕ್ಕೆ ಬೆಳಕನ್ನೀಯುವಂತೆ ಶರಣತತ್ವಜ್ಯೋತಿ ಪ್ರಜ್ವಲನೆಗಾಗಿ, ಅಕ್ಕನಾಗಮ್ಮ ತನ್ನ ಬಾಳನ್ನು ಬತ್ತಿಯಾಗಿಸಿದಳು. ಈ ಮಹಾಮಾತೆಯ ಸಮಗ್ರ ಜೀವನ ಚಿತ್ರಣವೇ ಕ್ರಾಂತಿಗಂಗೋತ್ರಿ.

ಕ್ರಾಂತಿಗಂಗೋತ್ರಿಯು, ಬಾಗೇವಾಡಿಯಲ್ಲಿ, ಸಂಗಮದಲ್ಲಿ, ಕಲ್ಯಾಣದಲ್ಲಿ, ವಿಪ್ಲವಕಾಲದಲ್ಲಿ, ಉಳವಿ ಮತ್ತು ಎಣ್ಣೆಹೊಳೆಯಲ್ಲಿ ಎಂಬುದಾಗಿ ಐದು ಭಾಗಗಳಲ್ಲಿ ಸುಲಲಿತವಾಗಿ ಅಕ್ಕನಾಗಮ್ಮನ ಜೀವನವನ್ನು ಹೇಳುತ್ತ ಹರಿದುಬಂದಿದೆ. ....ಇವಿಷ್ಟು ವಿಷಯಗಳನ್ನು ಲೇಖಕರಾದ ಶ್ರೀ ಲಕ್ಕಪ್ಪ ಶಿರಹಟ್ಟಿ ಅವರು ಕಾದಂಬರಿಯ ರೂಪದಲ್ಲಿ ಹೆಣೆದಿದ್ದಾರೆ. ಅಂದರೆ ಇದನ್ನು ಕಾಲ್ಪನಿಕ ಎಂದು ಯಾರೂ ಭಾವಿಸಬಾರದು. ಕಷ್ಟಪಟ್ಟು ಸಂಶೋಧಿಸಿದ ಸತ್ಯ ಸಂಗತಿಗಳ ತಳಹದಿಯ ಮೇಲೆ ಈ ಕೃತಿ ರಚಿಸಲ್ಪಟ್ಟಿದೆ. ಲೇಖಕರು ಲೇಖನಕಲೆಯಲ್ಲಿ ನುರಿತವರೆಂಬುದಕ್ಕೆ ಸಾಕ್ಷಿಯಾಗಿದೆ ಈ ಕೃತಿ! ಓದಿಸಿಕೊಂಡು ಹೋಗುವಂತಹ ಆಕರ್ಷಕ ಶೈಲಿಯಲ್ಲಿ ಈ ಕೃತಿಯನ್ನು ರಚಿಸಿದ್ದಾರೆ ಲೇಖಕರು. ಅಸಹಜತೆ ಶಿಥಿಲತೆ ಎಲ್ಲಿಯೂ ಕಂಡುಬರುವದಿಲ್ಲ. ಕ್ರಾಂತಿಗಂಗೋತ್ರಿಯನ್ನು ಓದುತ್ತಿದ್ದರೆ ನಾವು ೧೨ನೆಯ ಶತಮಾನದಲ್ಲಿ ನಮಗರಿಯದಂತೆ ಸಮರಸವಾಗಿಬಿಡುತ್ತೇವೆ. ಅಕ್ಕನಾಗಮ್ಮನ ಬಗ್ಗೆ ಸಾಹಿತ್ಯವೇ ಇಲ್ಲವಲ್ಲ, ಎಂಬ ಕೊರತೆಯನ್ನು ಹೋಗಲಾಡಿಸಿ ಕ್ರಾಂತಿಗಂಗೋತ್ರಿಯಂತಹ ಪರಿಪಕ್ವ ಕೃತಿಯನ್ನು ಶರಣಸಾಹಿತ್ಯಪ್ರೇಮಿಗಳಿಗೆ ಅರ್ಪಿಸಿದ ಶ್ರೀ ಲಕ್ಕಪ್ಪ ಶಿರಹಟ್ಟಿಯವರಿಂದ ಹೆಚ್ಚಿನ ಕಾಣಿಕೆಯನ್ನು ನಿರೀಕ್ಷಿಸಬಹುದು.

(ಎಂ. ಆರ್. ಶಿವಣ್ಣ) ಕಲ್ಯಾಣ ಕಿರಣ, ಧಾರವಾಡ

............ಈ ದೃಷ್ಟಿಯಲ್ಲಿ ಕ್ರಾಂತಿಗಂಗೋತ್ರಿ ಪರಿಶೀಲನಾರ್ಹವಾದ ಒಂದು ಉತ್ಕೃಷ್ಟ ಚಾರಿತ್ರಿಕ ರೂಪಕವೆಂದು ಧಾರಾಳವಾಗಿ ಹೇಳಬಹುದು.

ಈಗಾಗಲೇ ಬಸವರಾಜದೇವರು ಮೊದಲಾದ ಚಾರಿತ್ರಿಕ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿರುವ ಶ್ರೀ ಲಕ್ಕಪ್ಪ ಶಿರಹಟ್ಟಿಯವರು ಪ್ರಸ್ತುತ ಗ್ರಂಥದ ಲೇಖಕರು. ಉಪಲಬ್ಧವಿದ್ದ ಶರಣಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದವರು. ಅಂತೆಯೇ ಇಲ್ಲಿ ಮಹಾಯೋಗಿಣಿ ಅಕ್ಕನಾಗಮ್ಮನವರ ಜೀವನ ಚಿತ್ರ ರಮ್ಯವಾಗಿ ಮೂಡಿಬಂದಿದೆ.....................

ಶಿವಯೋಗಿಣಿ ಅಕ್ಕನಾಗಮ್ಮನವರು ಲೋಕಕ್ಕೆ ನೀಡಿದ ಕಾಣಿಕೆ ಬಹುದೊಡ್ಡದು. ಭಾರತದ ಪ್ರಥಮ ಸ್ವತಂತ್ರ ವಿಚಾರವಾದಿಯೆಂದೂ, ವೀರಶೈವ

(ಕವ್ಹರ ೩ನೇ ಪುಟ ನೋಡಿರಿ.

ಶಿವಾದ್ವೈತ ಸಿದ್ಧಾಂತ

ಮೊಗ್ಗೆಯ ಮಾಯಿದೇವ ಕೃತ

'ಶಿವಾನುಭವ ಸೂತ್ರ'ದ ಸರಳ ಗದ್ಯಾನುವಾದ

ಅನುವಾದ-ಲೇಖನ :

ಲಕ್ಕಪ್ಪ ಅ. ಶಿರಹಟ್ಟಿ

ಇವರಿಂದ

ಪ್ರಕಾಶಕರು :

ಶಶಿಧರ ಶಿ. ಶಿರಹಟ್ಟಿ, ಅರುಣೋದಯ ಪ್ರಕಾಶನ

ರಾಮಪ್ರಸಾದಗಲ್ಲಿ, ವಿಜಾಪುರ

ಪ್ರತಿಗಳು–ಪ್ರತ್ಯೇಕವಾಗಿ ೨೦೦ ಮಾತ್ರ

ಬೆಲೆ ೭೫ ಪೈಸೆ.

ಅಚ್ಚು ಮಾಡಿದವರು:

ಶ್ರೀ ಶಿವಯೋಗೀಶ್ವರ ಮುದ್ರಣಾಲಯ

ವಿಜಾಪುರ.

ಪ್ರಸ್ತಾವನೆ

ಸಂಕ್ಷಿಪ್ತವಾಗಿ ಸಂಪೂರ್ಣವಾಗಿ ಷಟ್‌ಸ್ಥಲ ಸಿದ್ಧಾಂತವನ್ನು ನಿರೂಪಿಸುವ ಗ್ರಂಥವೆಂದರೆ, ಶ್ರೀ ಮೊಗ್ಗೆಯ ಮಾಯಿದೇವ ವಿಭುವಿನ ಸಂಸ್ಕೃತ ಕೃತಿ 'ಶಿವಾನುಭವಸೂತ್ರ'! ಅದರ ಸರಳ ಗದ್ಯಾನುವಾದಕೃತಿ ಈ 'ಶಿವಾದ್ವೈತ ಸಿದ್ಧಾಂತ'! ಚಿಕ್ಕ ಹೊತ್ತಿಗೆ.

ನಾನು ತತ್ತ್ವಜ್ಞಾನಿಯಲ್ಲ; ಪಂಡಿತನಲ್ಲ; ಅನುಭಾವಿಯೂ ಅಲ್ಲ; ಕೆಳಮಟ್ಟದ ಒಬ್ಬ ಶಬ್ದ ಶಿಲ್ಪಿ! ಈ ಶಿಲ್ಪ ವಿರಚಿತ ಪಾತ್ರೆಯಲ್ಲಿ ಆ ಶಿವಾನುಭವ ಅನ್ಮೃತದ ಪಾಕವನ್ನು ಬಳಸಿಕೊಂಡು ಕನ್ನಡಿಗರಿಗೆ ಎಡೆಮಾಡಿದ್ದೇನೆ ಅಷ್ಟೇ!

ವಂಶಪರಂಪರೆಯ ಕಟ್ಟಳೆಯ ಸಾಂಪ್ರದಾಯಿಕ ಗುರು-ಶಿಷ್ಯ ಸಂಬಂಧದಲ್ಲಿರುವ ಭಕ್ತನಿಗೆ ಷಟ್‌ಸ್ಥಲಶಾಸ್ತ್ರವು ಪೂರ್ಣವಾಗಿ ಬೋಧಿಸಲ್ಪಡದಿರುವ ಸಮಸ್ಯೆಯು, ಲಿಂಗವಂತಿಕೆ ಸತ್ವಹೀನವಾಗಲು ಕಾರಣವಾಗಿದೆ. ಇಂತಹ ಸಂದರ್ಭದಲ್ಲಿ ಧರ್ಮಾಸಕ್ತ ಭಕ್ತನಿಗೆ ಮಾಯಿದೇವ ವಿಭುವಿನ ಶಿವಾನುಭವ ಸೂತ್ರವು ಅಭ್ಯಾಸಕ್ಕೆ ನೆರವಾಗಲೆಂದು ಅದರ ಅನುವಾದದ ಊಳಿಗವನ್ನು ಕೈಕೊಂಡಿದ್ದೇನೆ. ಕಿಂಚಿತ್ತಾದರೂ ಪ್ರಯೋಜನವಾದರೆ ಸೇವೆ ಸಾರ್ಥಕ!

ಆಸ್ಥಾನವಿದ್ವಾನ ಪಂಡಿತ ವೈ.ನಾಗೇಶಶಾಸ್ತ್ರಿಗಳವರು ೪೨ ವರ್ಷಗಳ ಹಿಂದೆ ಮಾಯಿದೇವರ 'ಶಿವಾನುಭವ ಸೂತ್ರ'ಕ್ಕೆ ಟೀಕೆಯನ್ನು ಬರೆದು ವಿಜಾಪುರದ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿದರು. ಆ ಧಾರಾವಾಹಿ ಪ್ರಕಟನೆಯು ನನಗೆ ಮುಖ್ಯವಾಗಿ-ವಿಶೇಷವಾಗಿ-ಈ ಅನುವಾದಕ್ಕೆ ಸಹಾಯಕವಾಯಿತು. ಆದ್ದರಿಂದ ಪೂಜ್ಯ ವೈ. ನಾಗೇಶಶಾಸ್ತ್ರಿಗಳವರಿಗೂ ಶಿವಾನುಭವ ಪತ್ರಿಕೆಯ ಸಂಪಾದಕರಾಗಿದ್ದ ಲಿಂ. ಡಾ. ಫ. ಗು. ಹಳಕಟ್ಟಿಯವರ ಸ್ಮೃತಿಗೂ ನನ್ನ ವಂದನೆಗಳು.

ಈ ಅನುವಾದವನ್ನು ವಿಜಾಪುರ ಗುರುಕುಲ ಪ್ರಕಾಶನದ 'ಅನುಭವ ಮಂಟಪ' ಪತ್ರಿಕೆಯ ಏಳು ಸಂಚಿಕೆಗಳಲ್ಲಿ ಕ್ರಮವಾಗಿ ಪ್ರಕಟಿಸಿ, ಪ್ರತಿಯೊಂದು ಸಲ ನಮ್ಮ ಹೆಚ್ಚಿನ ಹಾಳೆಗಳಲ್ಲಿ ಮುದ್ರಣಮಾಡಿಕೊಳ್ಳುತ್ತ ಕೊನೆಗೆ ಕೂಡಿಸಿ ಇದನ್ನು ಪ್ರಕಟಿಸಲಾಗಿದೆ. ಆದ್ದರಿಂದ ಆ ಪತ್ರಿಕೆಯ ಸಂಯೋಜನ ಮಂಡಳಿಗೆ ನಾನು ಉಪಕೃತನು.

ಶರಣಸಾಹಿತ್ಯದಲ್ಲಿ ವಿಹರಿಸಲು ಸೂಚಿಸಿ ನನ್ನನ್ನು ಪ್ರೋತ್ಸಾಹಿಸಿದವರು ಶ್ರೀ ಸದ್ಗುರು ಪೂಜ್ಯ ಶಾಂತವೀರ ಮಹಾಸ್ವಾಮಿಗಳವರು. ಈ ಅನುವಾದ ಕುಸುಮವನ್ನು ಅವರ ಅಡಿದಾವರೆಗೆ ಅರ್ಪಿಸಲು ದಯವಿಟ್ಟು ಅನುಮತಿ ನೀಡಿದ್ದಾರೆ. ಅವರ ಅಡಿಯಲ್ಲಿ ನನ್ನ ಪ್ರಣಾಮಂಗಳು.

ವಿಜಯದಶಮಿ — ಸುಜನ ವಿಧೇಯ

೧೭-೧೦-೭೨ — ಲಕ್ಕಪ್ಪ ಅ. ಶಿರಹಟ್ಟಿ

ಷಟ್‌ಸ್ಥಲ ಜ್ಞಾನಸ್ವರೂಪ-ಶ್ರೀ ಸದ್ಗುರು
ಪೂಜ್ಯ ಶಾಂತವೀರ ಮಹಾಸ್ವಾಮಿಗಳು
ಅವರ ಅಡಿದಾವರೆಗೆ ಈ ಕೃತಿಕುಸುಮ ಮುಡಿಪು.

ಕೃ. ಕ.

ಪರಿವಿಡಿ

೧ **ಸಿದ್ಧಾಂತದ ಸ್ಥೂಲ ಪರಿಚಯ** ೧

೨ **ಸ್ಥಲನಿರೂಪಣೆ** ೪
ಲಿಂಗಾಂಗಸ್ಥಲಗಳು, ಶಕ್ತಿ-ಭಕ್ತಿಗಳು.

೩ **ಲಿಂಗಸ್ಥಲ ನಿರೂಪಣೆ** ೬
ತ್ರಿವಿಧಲಿಂಗ, ಷಡ್ವಿಧ ಲಿಂಗಗಳು, ಷಡ್ವಿಧ ಶಕ್ತಿಗಳು, ಶಕ್ತಿವಿಶಿಷ್ಟ ಷಡ್ವಿಧಲಿಂಗಸ್ವರೂಪ (ಪ್ರವೃತ್ತಿಕ್ರಮದಿಂದ), ಷಡ್ವಿಧ ಲಿಂಗಗಳ ಉತ್ಪತ್ತಿಕ್ರಮ

೪ **ಅಂಗಸ್ಥಲನಿರೂಪಣೆ** ೧೪
ತ್ರಿವಿಧ ಅಂಗಸ್ಥಲಗಳು, ಷಡ್ವಿಧ ಅಂಗಸ್ಥಲಗಳು. ಷಡ್ವಿಧ ಭಕ್ತಿಗಳು, ಷಡ್ವಿಧಭಕ್ತಿಯುಕ್ತಷಡಂಗಸ್ಥಲಗಳ ಸ್ವರೂಪ (ನಿವೃತ್ತಿಕ್ರಮ), ಆತ್ಮಾದಿ ಷಡಂಗಗಳು, ಕ್ರಿಯಾಜ್ಞಾನಾತ್ಮಕ ವಿಭಾಗಗಳು.

೫ **ಲಿಂಗಾಂಗಸಂಯೋಗ ವಿಧಿ ನಿರೂಪಣೆ** ೧೯
ಲಿಂಗಾಂಗಸಂಯೋಗ, ಜೀವಾತ್ಮನ ಶಿವತ್ವ, ಜೀವಾತನು ಶಿವನ ಅಂಗವು, ಲಿಂಗಾಂಗಸ್ಥಲಗಳ ಸಂಬಂಧಸ್ವರೂಪ, ಸಂಯೋಗಪ್ರಾದುರ್ಭಾವ, ಭಕ್ತಿಪ್ರಾಶಸ್ತ್ಯ, ಲಿಂಗಾಂಗ ಸಂಯೋಗವಿಧಿ ದೀಕ್ಷೆ, ತ್ರಿವಿಧದೀಕ್ಷೆ, ಲಿಂಗದರ್ಶನ, ಅಂಗದಲ್ಲಿ ಲಿಂಗಸಂಯೋಜನ, ತ್ರಿವಿಧ ಜೀವನು, ದೀಕ್ಷೆಯ ಮಹಿಮೆ, ಮೂರು ಮಲಗಳು, ಉಪಾಸನ, ಭಕ್ತಿವೈಭವ, ಆರುವಿಧಭಕ್ತಿ, ನಿವೃತ್ತಿಮಾರ್ಗದಿಂದ ಷಡ್ವಿಧಲಿಂಗಗಳು, ನಿವೃತ್ತಿಮಾರ್ಗದಿಂದ ಷಡಂಗಸ್ಥಲಗಳು.

೬ **ಸರ್ವಾಂಗ ಲಿಂಗಸಾಹಿತ್ಯ ನಿರೂಪಣೆ** ೩೧

ಲಿಂಗಮುಖಗಳು, ಅಂಗನ ಷಡ್ವಿಧ ಹಸ್ತಗಳು, ಮಂತ್ರವಿದ್ಯಾ ಸಾಹಿತ್ಯ, ಲಿಂಗಾಂಗ ಸಂಯೋಗಬೋಧಕವು, ಪ್ರಣವಗಳು ಲಿಂಗರೂಪಗಳು, ಸಪ್ತಧಾತುಗಳಲ್ಲಿ ಷಡಕ್ಷರಿ, ಮಂತ್ರ ಶರೀರ,

೭ **ಅರ್ಪಣ ಸದ್ಭಾವ ನಿರೂಪಣೆ.** ೩೭

ದ್ವಿವಿಧ ಅರ್ಪಣ, ೧) ಕ್ರಿಯಾರ್ಪಣ ಅದರಭೇದಗಳು, ತ್ರಿವಿಧದ್ರವ್ಯಗಳು, ಪ್ರಸಾದ, ಭಕ್ತನ ಪದಾರ್ಥಕಾಯ ಮತ್ತು ಪ್ರಸಾದಕಾಯ, ಪ್ರಸಾದಕಾಲ, ತ್ರಿವಿಧಪ್ರಸಾದ, ಲಿಂಗಭೋಗೋಪಭೋಗಿಯು ನಿರ್ಲೇಪನು, ೨) ಜ್ಞಾನಾರ್ಪಣ ಮತ್ತು ಆದರ ಪ್ರಕಾರಗಳು, ಷಟ್‌ಸ್ಥಲ ಮಾರ್ಗದಿಂದ ಪ್ರಸಾದ ಭೋಗ, ಷಡಕ್ಷರ ಮಂತ್ರದಲ್ಲಿ ಅರ್ಪಣಸದ್ಭಾವ, ಲಿಂಗಾರ್ಪಿತವಾಗುವ ಆರು ಪದಾರ್ಥಗಳು, ಸಚ್ಚಿದಾನಂದಸ್ವರೂಪ, ಗಾಯತ್ರಿ ಮಂತ್ರವು ಲಿಂಗಾಂಗಸಂಯೋಗಪರವು. ಅರ್ಪಣದಲ್ಲಿ ಜೀವ ಶಿವರ ತಾದಾತ್ಮ್ಯ, ಕರ್ಮದ ನಿರ್ಲೇಪತ್ವ, ದಾಸೋಹಂ ಭಾವವು, ದಾಸೋಹಂಭಾವದಿಂದ ಶಿವನೊಡನೆ ಭೋಗ,

೮ **ಕ್ರಿಯಾವಿಶ್ರಾಂತಿ ನಿರೂಪಣ,** ೪೬

ಕ್ರಿಯಾ ವಿಶ್ರಾಂತಿಸ್ವರೂಪ, ಸಮ್ಯಗ್‌ಜ್ಞಾನ–ಅದರ ಸ್ವರೂಪ, ಆಪ್ತಕಾಮನಾದ ಶರಣನ ಲಕ್ಷಣ, ಶರಣನಭಕ್ತಿ, ಭಕ್ತಿಯಪ್ರಶಸ್ತಿ, ಕಾಂಡತ್ರಯ, ಲೇಖಾತ್ರಯದ ಇನ್ನೊಂದು ದೃಷ್ಟಾಂತ, ಕರ್ಮ ಚತುಷ್ಟಯ, ಪ್ರಸಾದವೂ ಭಕ್ತಿಯೂ, ಜ್ಞಾನ ಭಕ್ತಿಗಳು, ಭಕ್ತಿಯ ಕಾರ್ಯ, ಅದ್ವೈತಭಕ್ತಿ, ಶಿವಪ್ರಸಾದದ ಕುರುಹು, ದ್ವೈತಭಕ್ತಿ,–ಅದ್ವೈತಭಕ್ತಿ, ಅದ್ವೈತಭಕ್ತಿಯುಕ್ತನಾದ ಯೋಗಿಯು, ಕ್ರಿಯಾಫಲವಿಲ್ಲದಿದ್ದರೂ ನಿಷ್ಫಲತೆಯಿಲ್ಲ, ಅದ್ವೈತಭಕ್ತಿದೇವತೆಯ ಲೀಲೆ, ಕರ್ಮಮತ–ಭಕ್ತಿಮತ, ಶಿವಭಕ್ತಿಯು ಪಂಚಮ ಪುರುಷಾರ್ಥವು. ಷಟ್‌ಸ್ಥಲಜ್ಞನಾದ ವೀರಶೈವನು,

---

ಪುಟ ೫೭ ರಲ್ಲಿಯ ತಿದ್ದುಪಡಿಯನ್ನು ಅವಶ್ಯವಾಗಿ ನೋಡಬೇಕು.

ಓಂ

ಶಿವಾದ್ವೈತ ಸಿದ್ಧಾಂತ

ಮೊಗ್ಗೆಯ ಮಾಯಿದೇವಕೃತ ಶಿವಾನುಭವ ಸೂತ್ರದ ಕನ್ನಡ ಗದ್ಯಾನುವಾದ

೧. ಸಿದ್ಧಾಂತದ ಸ್ಥೂಲ ಪರಿಚಯ

ಶಿವಜೀವರೈಕ್ಯದಲ್ಲಿ ಅಂದರೆ ಏಕತ್ವದಲ್ಲಿ ಲಿಂಗಾಂಗ ಸಾಮರಸ್ಯ ಜ್ಞಾನದ ಪರಿಪೂರ್ಣತೆಯಿದೆ. ಈ ತತ್ವದ ಮತವು ಅದ್ವೈತವಾದರೂ ಕೇವಲಾದ್ವೈತವಲ್ಲ; ದ್ವೈತಾದ್ವೈತವು! ದ್ವೈತವನ್ನು ಹಿಡಿದು ಅದ್ವೈತವನ್ನು ಸಾಧಿಸುವದು! ಇದು ವೀರಶೈವವು. ಇದಕ್ಕೆ ಶಕ್ತಿ ವಿಶಿಷ್ಟಾದ್ವೈತವೆಂತಲೂ ಶಿವಾದ್ವೈತವೆಂತಲೂ ವಿಶೇಷಾದ್ವೈತವೆಂತಲೂ ಕರೆಯುವರು. ದ್ವೈತ ಹಾಗು ಅದ್ವೈತ ಮತಗಳಿಗಿಂತ ವೀರಶೈವರ ಈ ಶಿವಾದ್ವೈತತತ್ವ ವಿಚಾರವು ಬಹಳ ಮುಂದುವರಿದಿರುವದು. ಅಜ್ಞಾನ ವಶದಿಂದ ಬೇರೆಬೇರೆಯಾಗಿ ತೋರುವ ಜೀವ ಶಿವರ ಐಕ್ಯವನ್ನು ಸಾಧಿಸುವದೇ ವೀರಶೈವ ಮತದ ಮೂಲ ತತ್ವವು. ಬೀಜದಲ್ಲಿ ಗಿಡವಾಗುವ ಸ್ವಭಾವ ಅಥವಾ ಶಕ್ತಿಯು ಅಡಗಿರುವದು. ಗಿಡದಿಂದಲೇ ಬೇರೆಯಾದ ಬೀಜದಲ್ಲಿ ಇಡಿಯ ಗಿಡವೇ ಹುದುಗಿಕೊಂಡಿರುವದು. ಈ ಬೀಜವೃಕ್ಷಗಳ ತಾದಾತ್ಮ್ಯಸಂಬಂಧವೇ ಜೀವಶಿವರಲ್ಲಿರುವದು. ಬೀಜವು ಮೊಳೆತು ವಿಕಸನಗೊಂಡು ಮರವಾಗುವದಕ್ಕೆ ಭೂಮಿ ನೀರು ಇತ್ಯಾದಿ ಸಾಧನಗಳೂ ಕೆಲವೊಂದು ಕೃಷಿಯೂ ಕಾಲವೂ ಬೇಕಾಗುತ್ತದೆ. ಹಾಗೆಯೇ ಜೀವವು ಆವರಣವನ್ನು ಭೇದಿಸಿ ವಿಕಾಸಹೊಂದಿ ಶಿವನಾಗುವದಕ್ಕೆ ಜ್ಞಾನ ವಿಚಾರಗಳ ಸಾಧನಗಳೂ ಕೆಲವೊಂದು ಕ್ರಿಯೆಯೂ ಅವಧಿಯೂ ಬೇಕು. ಇಂತಹ ಅತ್ಯವಶ್ಯಕ ಕ್ರಿಯಾ ಜ್ಞಾನಗಳ ಮೊತ್ತವೇ ಮತತತ್ವವು. ವೀರಶೈವರ ಮತತತ್ವಗಳು ಹಲವು ಬಗೆಯಿಂದ ಪರಿಷ್ಕರಣ ಹೊಂದಿ ಪರಿಪೂರ್ಣತೆ ಪಡೆದವುಗಳಾಗಿವೆ.

ವೀರಶೈವರು, ಶಂಕರಮತದವರೆನ್ನುವಂತೆ ಜೀವ ಜಗತ್ತುಗಳು ಮಿಥ್ಯವಾದವುಗಳೆಂದು ಹೇಳುವದಿಲ್ಲ. ದೇಹವನ್ನು ಹೀನಾಯವಾಗಿ ಕಾಣುವದಿಲ್ಲ. ವೃತ್ತಿ-ಉದ್ಯೋಗಗಳನ್ನು ಅಲ್ಲಗಳೆಯುವದಿಲ್ಲ. ಭೋಗಗಳು ತ್ಯಾಜ್ಯವಾದವುಗಳೆಂದು ಭಾವಿಸುವದಿಲ್ಲ. ಇವುಗಳ ವಿಷಯವಾಗಿ ಇವರ ವಿಚಾರಗಳು ನಮರ್ಪಕವಾಗಿ, ಪರಿಪಕ್ವವಾಗಿ ಬೇರೆಯೇ ಇರುವವು. ಪರಶಿವನ ಅಧಿಷ್ಠಾನದಲ್ಲಿ ಆತನ ಪ್ರಕಾಶದಲ್ಲಿ ತೋರಿ ಬರುತ್ತಿರುವ ಜೀವಜಗತ್ತುಗಳು ಆತನ ಅಂಶಗಳೇ! ದೇಹವು ಜೀವ

ನಿಗೆ ದೇವಾಲಯವು. ಜೀವನು ವಿಕಾಸಗೊಳ್ಳಲು ತನ್ನ ವಿಕಾಸ ಸ್ವರೂಪನಾದ ದೇವರನ್ನು ಉಪಾಸಿಸುವದಕ್ಕೆ ದೇಹವು ಆಧಾರಭೂತವಾಗಿರುವದು. ಅಂದರೆ ಜೀವಬೀಜವು ಪರಮವೃಕ್ಷವಾಗುವದಕ್ಕೆ ನಡೆಯುಬೇಕಾಗಿದ್ದ ಕೃಷಿಗೆ ದೇಹವು ಭೂಮಿಯಾಗಿರುವದು, ಜೀವನು ಪರಮಾತ್ಮಸ್ವರೂಪ ಸಾಧನೆಗೆ, ಆ ಭಾವದಿಂದ ಕೈಕೊಳ್ಳುವ ನಡಿಸುವ ವೃತ್ತಿಗಳೆಲ್ಲ ಶಿವಪೂಜೆಯೇ ಆಗಿರುವವು. ಅಂತಹ ವೃತ್ತಿಯಿಂದ ಬಂದ ಭೋಗಗಳೆಲ್ಲ ಶಿವಪ್ರಸಾದವಾಗಿರುವವು. ಇಂತಹ ಪ್ರಸಾದಭೋಗಿಯಾದ ಜೀವನು ಜೀವನಲ್ಲ ಶಿವನಾಗಿಬಿಡುವನು.

ಪರಶಿವನಲ್ಲಿ ಅಭಿನ್ನವಾಗಿರುವ ಶಕ್ತಿಯ ಸ್ಫುರಣದಿಂದ ಜೀವಜಗತ್ತುಗಳು ತೋರಿದವು. ಬಹುರೂಪಗಳು ಉಂಟಾದವು. ಆದರಿಂದ ಪ್ರವೃತ್ತಿಪರವಾದ ಶಕ್ತಿಯೇ ಅವುಗಳಿಗೆ ಬಾಧಕವಾಯಿತು. ಶಿವನ ಅಂಶವಾದ ಜೀವನಲ್ಲಿಯೂ ಶಿವಸಂಬಂಧವಾದ ಶಕ್ತಿಯ ಅಂಶವು ಇದ್ದೇ ಇರುವದು. ಆತ್ಮವಿಕಾಸದಿಂದ ಶಿವನಾಗಲಿರುವ ಜೀವನಲ್ಲಿಯ ಆ ಶಕ್ತಿಯು, ಇಚ್ಛಾ-ಜ್ಞಾನ-ಕ್ರಿಯೆಗಳ ಸ್ವರೂಪದಿಂದ ಜೀವನನ್ನು ಶಿವನಾಗಿಸುವದರಲ್ಲಿ ತೊಡಗುವದು. ಇಂತಹ ಜೀವನ ಶಕ್ತಿಗೆ ಭಕ್ತಿಯೆನ್ನುವರು. ಭಕ್ತಿಯು ಜೀವನ ಬಂಧಮೋಚಕವೂ ನಿವೃತ್ತ್ಯುನ್ಮುಖಿಯೂ ಆಗಿರುವದು. ಭಕ್ತಿಯ ಕೊನೆಯ ಹಂತವೇ ಅಂದರೆ ಅದರ ಪರಿಪೂರ್ಣತೆಯೇ ಮುಕ್ತಿಯಾಗಿರುವದು. ಇಂತಹ ಭಕ್ತಿಯ ಮಾರ್ಗದಲ್ಲಿ ನಡೆಯುತ್ತಿರುವವನೇ ವೀರಶೈವಕ್ಕೆ ಅಧಿಕಾರಿಯು. ವೀರಶೈವಮತವು ಇಂತಹ ಪ್ರಕಾಶಮಯ ಧಾರ್ಮಿಕ ತತ್ವಗಳಿಂದ ಕೂಡಿದೆ. ಇದು ಪ್ರವೃತ್ತಿಯಲ್ಲಿ ದ್ವೈತವೂ, ನಿವೃತ್ತಿಯಲ್ಲಿ ಅದ್ವೈತವೂ ಆಗಿರುವದು. ನಿವೃತ್ತಿಯಿಂದ ಜೀವನು ಶಿವಸ್ವರೂಪನಾದಾಗ ಸರ್ವವೂ ಶಿವಸ್ವರೂಪವೇ! ಇದೇ ಶಿವಾದ್ವೈತ!

ಈ ಬಗೆಯಾದ ವೀರಶೈವರ ಶಿವಾದ್ವೈತ ಸಿದ್ಧಾಂತವನ್ನು ಮೊಗ್ಗೆಯ ಮಾಯಿದೇವಪ್ರಭುಗಳು 'ಶಿವಾನುಭವ ಸೂತ್ರ' ಎಂಬ ಸಂಸ್ಕೃತ ಗ್ರಂಥದಲ್ಲಿ ವಿಶದವಾಗಿ ವರ್ಣಿಸಿದ್ದಾರೆ. ಇದರಲ್ಲಿ ೮ ಅಧಿಕರಣಗಳು ೪೭೬ ಶ್ಲೋಕಗಳೂ (ಸೂತ್ರಗಳೂ) ಇರುವವು. ಮೊದಲನೆಯ ಅಧಿಕರಣದಲ್ಲಿ ಗ್ರಂಥದ ಆದಿಮಂಗಲವೂ ಗ್ರಂಥಕಾರರ ವಿಷಯವೂ ವಿಷಯಾನುಕ್ರಮಣಿಕೆಯೂ ಇರುವವು. ನಾವಿಲ್ಲಿ ೨ನೆಯ ಅಧಿಕರಣದಿಂದ ಆರಂಭವಾಗುವ ಮುಖ್ಯ ವಿಷಯಗಳನ್ನೇ ಅನುವಾದಿಸುವೆವು.

ಕವಿ ವಿಷಯ : ಮೊಗ್ಗೆಯ ಮಾಯಿದೇವರು ಮಲಪ್ರಭಾ ತೀರದ ಐಹೊಳೆಯವರು. ಸಂಸ್ಕೃತ-ಕನ್ನಡ ಭಾಷಾಪಂಡಿತರೂ ಶ್ರೇಷ್ಠ ತತ್ವಜ್ಞಾನವೇತ್ತರೂ ಮಹಿಮಾವಂತರೂ ಆದ ಶಿವಯೋಗಿಯಾಗಿದ್ದರುಸರು. ಕಾಲ ಸುಮಾರು ೧೪೩೦

ಕ್ರಿ. ಶ. ಸಂಸ್ಕೃತದಲ್ಲಿ ಶಿವಾನುಭವ ಸೂತ್ರ, ವಿಶೇಷಾರ್ಥಪ್ರಕಾಶಿಕೆ ಇವೆರಡು ಕೃತಿರತ್ನಗಳು, ಕನ್ನಡದಲ್ಲಿ ಪ್ರಭುಗೀತೆ, ಏಕೋತ್ತರ ಶತಸ್ಥಲಷಟ್ಪದಿ, ಶತಕ ತ್ರಯ ಷಟ್‌ಸ್ಥಲಗದ್ಯ, ವಚನಗಳು ಇವೈದು ಕೃತಿಗಳು ಇವರ ಅಮೂಲ್ಯ ಗ್ರಂಥಗಳು ಪ್ರಸ್ತುತ ಗ್ರಂಥವು ಶಿವಾನುಭವ ಸೂತ್ರದ ಕನ್ನಡ ಗದ್ಯಾನುವಾದ ವಾಗಿದೆ.

೨. ಸ್ಥಲ ನಿರೂಪಣೆ

ಅದ್ವೈತ ಮತದಲ್ಲಿ ಸತ್ಯವಾದುದೆಂದು ಹೇಳಲ್ಪಟ್ಟಿರುವ ಪರಬ್ರಹ್ಮವನ್ನು ವೀರಶೈವರ ಷಟ್‌ಸ್ಥಲಸಿದ್ಧಾಂತವನ್ನು ಪ್ರತಿಪಾದಿಸುವ ಆಗಮಗಳಲ್ಲಿ 'ಸ್ಥಲ' ವೆಂದು ಕರೆಯಲಾಗಿದೆ. ಸ್ಥಲದ ಅರ್ಥವು ಗೂಢವಾಗಿದೆ. ಅದನ್ನು ಮಾತು ಮತ್ತು ಬರಹಗಳಿಂದ ತಿಳಿಯುವದು ಅಸಾಧ್ಯವು. ಇಂತಹ ಇದರ ನಿರ್ದೇಶ ವನ್ನು ದೇವದೇವನಾದ ಶಿವನು ಆಗಮಗಳಲ್ಲಿ ಉಮೆಗೆ ಹೇಳಿರುವನು. ಶಿವಾಗ ಮಗಳಲ್ಲಿ ಕೊನೆಯದಾದ ವಾತುಲಾಗಮದಲ್ಲಿ ಸ್ಥಲ ವಿಲಾಸ ವಿವರಣೆಯಿದೆ. ಅದುವೇ ಶಿವಾದ್ವೈತ ಸಿದ್ಧಾಂತ.

ತನ್ನಂತೆ ಇನ್ನೊಂದಿಲ್ಲದ, ಎಲ್ಲೆಲ್ಲಿಯೂ ಯಾವಕಾಲದಲ್ಲಿಯೂ ತಾನೊಂದೇ ಒಂದಾಗಿರುವ, ಪರಬ್ರಹ್ಮದೆಂದು ಕರೆಯಿಸಿಕೊಳ್ಳುವ, ಸತ್+ಚಿತ್+ಆನಂದ ಲಕ್ಷಣಗಳಿಂದ ಕೂಡಿದ ತತ್ವವೇ ಸ್ಥಲವು. ಸ್ಥಲವೇ ಶಿವತತ್ವವು. ಶಿವ ಶಬ್ದದ ಉತ್ಪತ್ತಿಯಾದರೂ ಸಕಲಲೋಕಗಳಿಗೆ ಆಧಾರಭೂತವಾದ ವಸ್ತುವೆಂಬ ಅರ್ಥ ವನ್ನು ಸೂಚಿಸುತ್ತಿದೆ. ಸರ್ವಕ್ಕೂ ಶಿವನು ಕಾರಣನೆಂಬುದಕ್ಕೆ ಬ್ರಹ್ಮಸುತ್ರಾದಿ ಗಳು ಪ್ರಮಾಣಗಳಾಗಿವೆ. ಸರ್ವತತ್ವಗಳಿಗೂ ಚೇತನಾಚೇತನಾತ್ಮಕ ಪ್ರಪಂಚಕ್ಕೂ ಶಿವತತ್ವವು ಸ್ಥಾನ ಭೂತವೂ ಲಯಭೂತವೂ ಆಗಿದೆ. ಅದರಿಂದ ಮೊದಲು ಅವೆ ಲ್ಲವು ಯಾವದರಲ್ಲಿ ತೋರಿ, ಇದ್ದು (ಸ್ಥಿತಿಯನ್ನು ಹೊಂದಿ) ಕೊನೆಗೆ ಯಾವ ದರಲ್ಲಿ ಅಡಗುವವೋ (ಲಯವಾಗುವವೋ) ಅದೇ ಸ್ಥಲವಾಗಿರುವದು. ಸ್ಥಲ ಶಬ್ದದಲ್ಲಿ 'ಸ್ಥ' ವು ಸ್ಥಾನವಾಚಕವೂ 'ಲ' ವು ಲಯವಾಚಕವೂ ಆಗಿವೆ. ಈ ಸ್ಥಿತಿಲಯಗಳಿಗೆ ಅಭಿನ್ನನಿಮಿತ್ತಕಾರಣವೂ ಅಭಿನ್ನಉಪಾದಾನಕಾರಣವೂ ಆಗಿದ್ದುದು ಸ್ಥಲವು. ಈ ಸ್ಥಲ ಸ್ಥಾವರ ಜಂಗಮಾತ್ಮಕ ಸಕಲ ಜಗತ್ತಿಗೆ ಅಧಿಷ್ಠಾನ (ಆಶ್ರಯ) ವಾಗಿರುವದು. ಅಂದರೆ ವಿಶ್ವವೆಲ್ಲವೂ ಇದರಲ್ಲಿಯೇ ಇದರ ಆಶ್ರಯದಲ್ಲಿಯೇ ತೋರುವದು. ಸ್ಥಲದ ಆಧಾರದಲ್ಲಿಯೇ ಸರ್ವಶಕ್ತಿಗಳೂ ತೇಜಃಪ್ರಕಾಶಗಳೂ ಸರ್ವಾತ್ಮ ವ್ಯವಹಾರಗಳೂ ಪ್ರಕಟವಾಗುವವು. ಈ ಸ್ಥಲವೇ ಜೀವ-ಜಗತ್ತುಗಳಿಗೆ ಮನೆ. ಸಂಸಾರದ ನಾಶಕ್ಕೂ ನಿರ್ಮಾಣಕ್ಕೂ ಅಂತಿಮಸ್ಥಾನವು. ಅಂತಹದು ಬೇರೊಂದಿಲ್ಲ ದಂತಿದ್ದುದೂ ಸ್ಥಲವು.

೧. ಶಿವಾದ್ವೈತ ಸಿದ್ಧಾಂತ

ಹುಟ್ಟು ಇರವು ಅಳಿವುಗಳೆಂಬ, ಹಾಗೂ ನಾಮರೂಪಾತ್ಮಕ ಜಗತ್ತೆಂಬ ಚಿತ್ರಗಳಿಗೆ ಸ್ಥಲವು ಚಿತ್ರೀಕರಿಸಲ್ಪಟ್ಟ ಕಾಗದದಂತೆ ಆಧಾರವಾಗಿರುವದು. ಸ್ಥಲ ಶಬ್ದದಿಂದ ಸೂಚಿತವಾಗುವ ಶಿವನು ಸಚ್ಚಿದಾನಂದ ಸ್ವರೂಪನಾಗಿರುವನು. ಆತನು ಸಮಸ್ತ ಪ್ರಪಂಚಕ್ಕೆ ಕಾರಣನು. ಅವನಿಗೆ ಬೇರೆ ಕಾರಣವಾದುದಿಲ್ಲ. ಅದರಿಂದ ಸದ್ರೂಪನಾಗಿರುವನು. ಎಲ್ಲ ತೋರಿಕೆಗಳಿಗೆ ಹೇತು (ಕಾರಣಧ್ಯೇಯ) ವಾಗಿ ತನ್ನ ತೋರಿಕೆಗೆ ಬೇರೆ ಆಧಾರಗಳನ್ನು ಅಪೇಕ್ಷಿಸದೆ ಇರುವದರಿಂದ ಚಿದ್ರೂಪನಾಗಿದ್ದಾನೆ. ಪ್ರಪಂಚವು ಅನುಭವಿಸುವ ಆನಂದಕ್ಕೆಲ್ಲ ಮೂಲನಿಧಿಯಾಗಿರುವದರಿಂದ ಆನಂದ ರೂಪನೂ ಆಗಿದ್ದಾನೆ.

ಶಿವನಿಗೆ ಸಚ್ಚಿದಾನಂದ ಸ್ವರೂಪದ ಎಚ್ಚರವು (ಅರಿವು) ಸ್ವತಃ ಸಿದ್ಧವಾಗಿದೆ. ಈ ಎಚ್ಚರವೇ ವೀರಶೈವಶಾಸ್ತ್ರದಲ್ಲಿ 'ವಿಮರ್ಶ' ಎಂದು ಹೇಳಲ್ಪಟ್ಟಿರುವದು. ಇದುವೇ ಶಕ್ತಿಯು. ಈ ವಿಮರ್ಶಾ ಶಕ್ತಿಯ ಮೂಲಕವೇ 'ಅಸ್ಮಿ' ಎಂಬ ಸದ್ರೂಪದ ಅನುಭವವೂ 'ಪ್ರಕಾಶೇ' ಎಂಬ ಚಿದ್ರೂಪದ ಅನುಭವವೂ 'ನಂದಾಮಿ' ಎಂಬ ಆನಂದದ ಅನುಭವವೂ ಶಿವನಿಗುಂಟಾಗುತ್ತಿರುವದು. ಅನುಭವವಿಲ್ಲದ ವಸ್ತುವು ಜಡವೆನಿಸುವದು. ಅನುಭವಶಕ್ತಿ ಇಲ್ಲದಿದ್ದರೆ ಶಿವನು ಜಡವಾಗುತ್ತಿದ್ದನು. ಸ್ಫಟಿಕ. ಮಾಣಿಕಗಳು ಅರಿವು ಇಲ್ಲದೆ ಹೊಳೆಯುತ್ತಿರುವವು. ಅಂದರೆ ಅವುಗಳಿಗೆ ತಮ್ಮ ಪ್ರಕಾಶದ ವಿಮರ್ಶೆ ಇರುವದಿಲ್ಲ. ಅವು ಜಡವಾದವು. ಚೇತನಯುಕ್ತವಾದವುಗಳಲ್ಲ. ಚೇತನಪರನಾದ ಶಿವನ ಅನುಭವ ಸ್ವಭಾವದ ಸ್ಫುರಣದಿಂದ ಅಂದರೆ ವಿಮರ್ಶಾ ಶಕ್ತಿಯ ವಿಲಾಸದಿಂದ ಸೃಷ್ಟಿಯುಂಟಾಗುವದು. ಅರ್ಥಾತ್ ತನ್ನಲ್ಲಿ ಬೇರಿಲ್ಲದಂತಿರುವ ಶಕ್ತಿಯ ಮೂಲಕವಾಗಿ ಸಮಸ್ತ ಪ್ರಪಂಚವಾಗಿರುವನು; ಅಂದರೆ ಅಭಿನ್ನ ಉಪಾದಾನ ಕಾರಣನಾಗಿದ್ದಾನೆ. ಸಮಸ್ತ ಪ್ರಪಂಚವನ್ನು ಉಂಟುಮಾಡಿದ್ದಾನೆ; ಅಂದರೆ ಅಭಿನ್ನ ನಿಮಿತ್ತ ಕಾರಣನಾಗಿದ್ದಾನೆ. ಇದಕ್ಕೆ ಬಲವಾದ ಪ್ರಮಾಣಗಳನ್ನು ಶಿವಾದ್ವೈತಮಂಜರಿಯಲ್ಲಿಯೂ ಕಾಣಬಹುದು.

ಶಿವನೇ ಜಗತ್ಕಾರಣನೆಂಬುದಕ್ಕೆ ಇನ್ನಿಷ್ಟು ಸ್ಪಷ್ಟೀಕರಣ ಅವಶ್ಯವೆಂದು ತೋರುತ್ತದೆ. ಏಕೆಂದರೆ, ಅಬಾಧಿತ ತತ್ವಕ್ಕೂ ಶಂಕೆಗಳು ತಲೆಯೆತ್ತುವವು. ಮೊದಲೇ ಅವುಗಳನ್ನು ಎತ್ತಿಕೊಂಡು, ಅವುಗಳಿಗೆ ಸಮಾಧಾನ ಹೇಳಲೇ ಬೇಕು.

“ಕಾರಣಗಳು ಮೂರು : ಉದಾ; ಕೊಡವನ್ನು ಮಾಡುವದಕ್ಕೆ ಕುಂಬಾರ ನಿಮಿತ್ತ: ಮಣ್ಣು ಉಪಾದಾನ; ಕೋಲು ಗಾಲಿ ಸಹಕಾರಿ. ಇವುಗಳಲ್ಲಿ ಶಿವನು ಜಗತ್ತಿಗೆ ಯಾವ ತರದ ಕಾರಣನಾಗಿದ್ದಾನೆ ? ೧) ಶಿವನು ನಿಮಿತ್ತ ಕಾರಣನಾಗಿದ್ದರೆ ಕೊಡಕ್ಕೆ ಮಣ್ಣು ಬೇಕಾದಂತೆ ಜಗತ್ತಿಗೆ ಮತ್ತೊಂದು ವಸ್ತುವು ಉಪಾದಾನವಾಗಿ ಬೇಕಾಯಿತು. ಹಾಗೆ ಬೇರೆ ವಸ್ತು ಇರುವದಾದರೆ ಶಿವನಿಲ್ಲದ ವಸ್ತುವಿಲ್ಲೆಂಬ

'ಸರ್ವಂ ಖಲ್ವಿದಂ ಬ್ರಹ್ಮ' 'ಸರ್ವೋವೈರುದ್ರಃ' ಇತ್ಯಾದಿ ಶೃತಿಗೆ ಬಾಧೆಯಲ್ಲವೇ ? ೨) ಶಿವನು ಉಪಾದಾನ ಕಾರಣನಾಗಿದ್ದರೆ, ಮಣ್ಣು ಮೊದಲಾದವುಗಳಂತೆ ಶಿವನಿಗೂ ವಿಕಾರಗಳ ದೋಷವನ್ನು ಒಪ್ಪಬೇಕಾಗುವದು. ಅಲ್ಲದೇ ನಿಮಿತ್ತ ಕಾರಣನಾದ ಬೇರೊಬ್ಬ ಅಧಿಷ್ಠಾತೃವನ್ನು ಒಪ್ಪಬೇಕಾಗುವದು. ಇವೆರಡೂ ಶೃತಿ ಪ್ರಮಾಣಗಳಿಗೆ ವಿರುದ್ಧವಾಗಿವೆ. ಆದ್ದರಿಂದ ನಿಮಿತ್ತೋಪಾದಾನವೆಂಬ ಎರಡು ಕಾರಣಗಳನ್ನು ಶಿವನಿಗೆ ಹೇಳಲಿಕ್ಕೆ ಬರುವದಿಲ್ಲ." ಎಂಬ ಶಂಕೆ ತೋರುವದು. ಇದಕ್ಕೆ ಸಮಾಧಾನವಿದೆ.

ಶಿವನಿಗೆ ಈ ಎರಡರಲ್ಲಿ ಒಂದು ಕಾರಣವನ್ನು ಮಾತ್ರ ಹೇಳಿದರೆ ಮೇಲಿನ ಶೃತಿವಾಕ್ಯಗಳಿಗೆ ಭಂಗ ಬರುವದು. ಆದರೆ ಶಿವನು ಜಗತ್ತಿಗೆ ಅಭಿನ್ನ ನಿಮಿತ್ತೋಪಾದಾನ ಕಾರಣನಾಗಿದ್ದಾನೆ. ಈ ಮಾತು ತೈತರೀಯ ಶೃತಿ, ಬ್ರಹ್ಮಸೂತ್ರಗಳಿಂದ ಸಿದ್ಧವಿದೆ. ಆದ್ದರಿಂದ ಶಿವನಿಗೆ ಉಭಯ ಕಾರಣತ್ವವು ವಿರುದ್ಧವಲ್ಲ. ವಿಕಾರದೋಷವೂ ಸಂಭವಿಸುವದಿಲ್ಲ.

ಇದಲ್ಲದೇ ಇನ್ನು ಕೆಲವು ಶಂಕೆಗಳುಃ

ಅವಯವವಿಲ್ಲದುದಕ್ಕೆ ಪರಿಣಾಮವಿಲ್ಲ. ಮಣ್ಣು ಕೊಡವಾದಂತೆ ಶಿವನು ಜಗತ್ತಾಗಿ ಪರಿಣಮಿಸಿದರೆ ಅವನು ನಿರವಯವಿ ಹೇಗೆ ?

೨. ಶಿವನೇ ಜಗತ್ತಾಗಿ ಪರಿಣಮಿಸಿದರೆ, ಹಾಲು ಹುಳಿಯಾಗಿ ಮೊಸರಾದಾಗ ಹಾಲು ಇಲ್ಲದಂತಾದಂತೆ ಶಿವನು ಇಲ್ಲದಂತಾಗುವನು. ಜಗತ್ತಿನ ನಿಯಂತ್ರಕನಾರು ?

೩. ತನ್ನ ಕೆಲಭಾಗದಿಂದ ಜಗತ್ತಾಗಿ ಪರಿಣಮಿಸಿ, ಕೆಲಭಾಗ ಶಿವನು ಪ್ರಭುವಾಗಿ ಉಳಿಯುವನೆಂದು ಹೇಳಿದರೆ ಶಿವನಿಗೆ ಖಂಡತ್ವವನ್ನು ಹೇಳಿದಂತಾಗುವದು.

ವಿವರ್ತವಾದಿಗಳು ಈ ಶಂಕೆ ಎತ್ತುತ್ತಾರೆ. ಅವರು- 'ಅವಿದ್ಯೆಯು ಪರಿಣಾಮವಾಗಿ ಇಲ್ಲದೆ ಇದ್ದ ಜಗತ್ತು ಬ್ರಹ್ಮದಲ್ಲಿ ತೋರುತ್ತದೆ. ಬ್ರಹ್ಮ (ಶಿವ) ಜಗತ್ಕಾರಣವಲ್ಲ' ಎನ್ನುತ್ತಾರೆ. ಆದರೆ ಇದು ಸರಿಯಲ್ಲ. ಅವರ ಮೇಲಿನ ಶಂಕೆಗಳಿಗೆ ಸ್ಥಾನವೇ ಇಲ್ಲ. ಹಾಲು ಮೊಸರಾಗಿ ಪರಿಣಮಿಸಿದಂತೆ ಶಿವನು ಜಗತ್ತಾಗಿ ಪರಿಣಮಿಸುವದಿಲ್ಲ; ಬಂಗಾರವು ಆಭರಣವಾಗಿ ಪರಿಣಮಿಸುವದು. ಹಾಲು ಮೊಸರಾದ ಬಳಿಕ ಮೊಸರಿನಲ್ಲಿ ಹಾಲಿಲ್ಲ; ಹಾಲಿನ ಸ್ವರೂಪವಿಲ್ಲ, ಹೀಗೆ ಪೂರ್ವರೂಪವನ್ನು ಬಿಟ್ಟು ರೂಪಾಂತರ ಹೊಂದುವದೇ ಪರಿಣಾಮವೆಂದು ತಿಳಿಯಬಾರದು. ಇಂತಹ ವಿಕೃತವಾದ ಪರಿಣಾಮವಲ್ಲದೆ. ಅವಿಕೃತವಾದ ಪರಿಣಾಮದ ಬಗೆಯೂ ಇದೆ. ಚಿನ್ನದಾಭರಣಗಳಲ್ಲಿ ಚಿನ್ನದ ಸ್ವರೂಪಕ್ಕೆ ಚ್ಯುತಿಯಿಲ್ಲ. ಇದು ಅವಿಕೃತ ಪರಿಣಾಮ. ಚಿನ್ನದಲ್ಲಿಯೇ ಅದಕ್ಕೆ ಬೇರೆಯಾಗಿ ತೋರುವ ಬಳೆ, ಪದಕ ಮುಂತಾದ ವಸ್ತುಗಳಲ್ಲಿ ಚಿನ್ನವೂ ಇರುತ್ತದೆ. ಇಲ್ಲಿ ಉಪಾದಾನ ಕಾರಣದ ಸ್ವರೂಪವು ನಾಶ

ವಾಗುವದಿಲ್ಲ. ಹಾಗೆಯೇ ಶಿವನಲ್ಲಿ ಶಿವಸ್ವರೂಪವು ನಾಶವಾಗದೆ. ಜಗದುತ್ಪತ್ತಿಯಾಗುವದು. ಬಂಗಾರ ಒಡಿವೆಯಾದಂತೆ ವ್ಯವಹಾರಕ್ಕೆ ತಕ್ಕಕಾರ್ಯೋತ್ಪತ್ತಿ ಪರಿಣಾಮವೆನಿಸುವದು. ಜಗತ್ತು ಶಿವನ ಅವಿಕೃತ ಪರಿಣಾಮವಾದ್ದರಿಂದ ಶಿವನೇ ಜಗತ್ತಿಗೆ ಅಭಿನ್ನ ನಿಮಿತ್ತೋಪಾದಾನ ಕಾರಣನೆಂಬುದು ಸ್ಪಷ್ಟವು! ಇದರಿಂದ ಅಂಶತಃ ನಿಮಿತ್ತ ಕಾರಣನೆನ್ನಲಿಕ್ಕೂ ಆಸ್ಪದವಿಲ್ಲ. ಆದ್ದರಿಂದ ಶಾಂಕರಮತದ ವಿವರ್ತವಾದವು ವೀರಶೈವರ ಲಿಂಗಾಂಗಸಾಮರಸ್ಯದಲ್ಲಿ ಸಂಗತವಾಗದು. ಅದನ್ನು ತ್ಯಜಿಸಬೇಕು. ಜಗತ್ತು ಶಿವನ ಸ್ವರೂಪ ಎಂದು ಆಗಮ ಸೂತ್ರಗಳು ದೃಢಪಡಿಸುತ್ತವೆ.

ಶಿವನಲ್ಲಿ ತನ್ನ ಸ್ವರೂಪದ ಎಚ್ಚರವೆಂಬ ಸ್ವಾನುಭವ ಶಕ್ತಿಯಿರುವದರಿಂದ ಅವನು ಸ್ವತಃ ಸಿದ್ಧನೆನಿಸುವನು. ಸ್ವಸ್ವರೂಪದ ಅನುಭವವಿಲ್ಲದ ಪದಾರ್ಥಗಳು ಜಡವಾದವು. ಅವುಗಳನ್ನು ತಿಳಿಯಲಿಕ್ಕೆ ಬೇರೆ ಪ್ರಮಾಣಗಳು ಬೇಕು. ಶಿವನ ಸ್ವಾನುಭೂತಿಯು ತನಗೆ ಆಶ್ರಯವಾದ ಅವನಂತೆ ಆನಂದಮಯವಾಗಿದೆ. ಶಿವನ ಈ ಸ್ವಭಾವದಲ್ಲಿ (ಶಕ್ತಿಯಲ್ಲಿ) ವಿನೋದ ಅಂದರೆ ಪೂಜ್ಯಪೂಜಕ ಭಾವಲೀಲೆ- ಉಂಟಾಗಲು, ಶಾಂತಸಾಗರದಲ್ಲಿ ತರಂಗ ಉತ್ಪತ್ತಿಗೆ ಉಲುಕು ಉಂಟಾದಂತೆ, ಶಕ್ತಿಯುಕ್ತನಾದ ಶಿವನಲ್ಲಿ ಕಿಂಚಿತ್ ಚಲನೆ ಉಂಟಾಗುವದು. ಇದೇ ವಿಮರ್ಶಾ ಶಕ್ತಿಯ ಕ್ಷೋಭೆಯಾಯಿತು. ಕ್ಷೋಭೆಯೆಂದರೆ- ಸ್ಫುರಣ, ಚಲನವಲನ, ಘನೀಭೂತಗೊಳ್ಳೋಣ, ಕಾಣಿಸಿಕೊಳ್ಳೋಣ, ಬಹುರೂಪ ಬಹುಪ್ರಜೆಯಾಗೋಣ, ಪಸರಿಸೋಣ, ಸಂಘಟನ-ವಿಘಟನ, ಮೇಲಾಗು, ಕೀಳಾಗು ಇತ್ಯಾದಿ, ಕಾರ್ಯೋತ್ಪತ್ತಿಯ ಪ್ರವೃತ್ತಿ ಎಂದು ತಿಳಿಯಬೇಕು. ಇದುವೇ ಶಿವನನ್ನು ಆಶ್ರಯಿಸಿದ ಅವನ ಸ್ವಭಾವವಾದ ಶಕ್ತಿಯ ಸ್ವರೂಪವು.

ಲಿಂಗಾಂಗ ಸ್ಥಲಗಳು

ಸ್ಥಲವು (ಶಿವತತ್ವವು) ಈ ತನ್ನ ವಿಮರ್ಶಾ ಶಕ್ತಿಯ ಕ್ಷೋಭೆಯಿಂದ ಮೊದಲು ಲಿಂಗ, ಅಂಗ ಎಂದು ಎರಡು ವಿಧವಾಯಿತು. ಬಯಲು ಅಖಂಡವಾಗಿದ್ದರೂ ಕೊಡದಲ್ಲಿ ಸೇರಿದ ಬಯಲು ಕೊಡದ ಉಪಾಧಿಯಿಂದ ಘಟಾಕಾಶ (ಕೊಡದ ಬಯಲು) ಎಂತಲೂ, ಕೊಡವನ್ನು ಬಿಟ್ಟು ಉಳಿದ ಬಯಲು ಮಹಾಕಾಶ (ದೊಡ್ಡ ಬಯಲು) ಎಂತಲೂ ಎರಡು ತೆರನಾದಂತೆ ಸ್ಥಲವು ಲಿಂಗಸ್ಥಲ ಅಂಗಸ್ಥಲವಾಯಿತು.

ಪೂಜ್ಯ-ಪೂಜಕ ಭಾವಲೀಲೆಯಂತೆ ಸ್ಥಲವು ಉಪಾಸ್ಯವೂ ಉಪಾಸಕವೂ ಆಗಲು, ಮಹಾಕಾಶದಂತಿರುವ ಲಿಂಗಸ್ಥಲವು ಉಪಾಸ್ಯವೂ, ಘಟಾಕಾಶದಂತಿರುವ ಅಂಗಸ್ಥಲವು ಉಪಾಸಕವೂ ಆಗಿರುವವು. ಈ ಉಪಾಸ್ಯತ್ವ-ಉಪಾಸಕತ್ವಗಳಿಗೂ ಭೇದವಿಲ್ಲ. ಎರಡನ್ನೂ ಪರಶಿವನೆಂದು ತಿಳಿಯಬೇಕು. ಎರಡರಲ್ಲಿಯೂ ಆತನು

ವಿಕಾರವಾಗದ ರೀತಿಯಲ್ಲಿ ಚೇತನ ಸ್ವರೂಪದಿಂದ ಅಭೇದಕ್ರಮದಿಂದ ಇದ್ದು ಉಪಾಧಿಯಿಂದ ಮಾತ್ರ ಬೇರೆ ಕಾಣುವನು. ಹೊರಗುಳಿದ ಬಯಲು ಕೊಡದಲ್ಲಿಯ ಬಯಲು ಒಂದೇ ಇದ್ದು ಕೊಡದ ಮೂಲಕ ಬೇರೆ ಇದ್ದಂತಾಗಿದೆ. ಉಪಾಸ್ಯ–ಉಪಾಸಕತ್ವಗಳೆರಡರಲ್ಲಿ ಶಿವನು ತನ್ನ ಪರಮಾತ್ಮ ಭಾವಕ್ಕೆ ಚ್ಯುತಿಯಿಲ್ಲದೆ ಇರುವನು. ಅಂದರೆ ಉಪಾಸಕನೂ ಶಿವಸ್ವರೂಪನೇ! ಶಿವನಲ್ಲದವನಿಂದ ಶಿವೋಪಾಸನೆ ಘಟಿಸದು. ಆದ್ದರಿಂದ ಜಗದ ಅಧಿಷ್ಠಾನ ಸೂಚಕವಾದ ಸ್ಥಲ ಶಬ್ದವನ್ನು ಲಿಂಗದೊಡನೆ ಕೂಡಿಸಿ ಲಿಂಗಸ್ಥಲವೆಂದಂತೆ ಅಂಗದೊಡನೆ ಕೂಡಿಸಿ ಅಂಗಸ್ಥಲವೆನ್ನಲು ಬಾಧಕವಿಲ್ಲ.

‘ಅಂಗನೆಂದರೆ ಜೀವನು. ಜೀವನಿಗೆ ಜಗದಧಿಷ್ಠಾನವಿಲ್ಲ. ಆದ್ದರಿಂದ ಜೀವನಿಗೆ ಅಂಗಸ್ಥಲವೆಂದು ಹೇಳುವದು ತಪ್ಪು’ ಎಂದು ಆಕ್ಷೇಪಿಸಬಹುದು. ಈ ಆಕ್ಷೇಪದಲ್ಲಿ ಹುರುಳಿಲ್ಲ. ಶಿವನಲ್ಲಿಯ ವಿಮರ್ಶಾ ಶಕ್ತಿಯ ಸ್ವಭಾವ-ಸ್ಫುರಣದಲ್ಲಿ ಪ್ರವೃತ್ತಿಗನುಗುಣವಾಗಿ ಅಧಿಕ, ನೂನ (ಹೆಚ್ಚು, ಕಡಿಮೆ) ಭಾವವು ಸಹಜವಾದದ್ದು. ಅಧಿಕಭಾವಾತ್ಮಕ ಶಕ್ತಿಯು ಶಿವನನ್ನು ಲಿಂಗವನನ್ನಾಗಿಯೂ ನೂನಭಾವಾತ್ಮಕ ಶಕ್ತಿಯು ಶಿವನನ್ನು ಲಿಂಗನನ್ನಾಗಿಯೂ ಮಾಡಿತು. ಬಂಗಾರದ ಗಟ್ಟಿಯಲ್ಲಿಯ ಕೆಲಭಾಗ ಆಭರಣವಾದರೇನು ಅದೂ ಬಂಗಾರವೇ! ಹೀಗೆ ಲಿಂಗ ಅಂಗಗಳೆರಡೂ ಸ್ಥಲಗಳೇ! ಬಂಗಾರದ ಸಾಕ್ಷಾತ್ಕಾರದಂತೆ ಲಿಂಗತತ್ತ್ವವಿದೆ. ಆಭರಣಗಳು ತಾವೂ ಕೂಡ ಬಂಗಾರವೇ ಎಂಬ ಅನುಭವಪಡುತ್ತಿರುವಂತಹದೇ ಅಂಗತತ್ತ್ವವು! ಇಲ್ಲಿ ತಾನೂ ಸ್ಥಲ (ಶಿವ) ನೆಂದು ಅಂಗನು ಅನುಭವಪಡುತ್ತಿರಬೇಕೆಂಬದು ಮುಖ್ಯವು. ಹಾಗೆ ಅನುಭವಪಡದಿರುವವನು ಅಂಗನಲ್ಲ; ಅವನು ಬದ್ಧ ಜೀವನು. ಬದ್ಧ ಜೀವನಿಗೆ ಸ್ಥಲದೊಡನೆ ಹೇಳಬಾರದು. ಅಂಗನು ಶುದ್ಧ ಜೀವನು, ಅವನನ್ನು ಅಂಗಸ್ಥಲವೆನ್ನಬಹುದು. ಬದ್ಧ ಜೀವನು ಅಂದರೆ ಮಲಬದ್ಧ ಜೀವನು ಸಂಸಾರಿಯಾದವನು. ಅವನು ಗುರುಗಳಿಂದ ತ್ರಿವಿಧದೀಕ್ಷೆ ಹೊಂದಿ ತ್ರಿಮಲರಹಿತನಾಗಿ ಶುದ್ಧ ಜೀವನಾಗುವನು. ಆಗ ಅವನು ಅಂಗನಾಗುವನು, ಅಂಗಸ್ಥಲನೆನಿಸುವನು. ಬದ್ಧ ಜೀವಿ ಅಂಗನಲ್ಲ. ಶುದ್ಧ ಜೀವನಿಗೂ ಶಿವನಿಗೂ ಭೇದವಿಲ್ಲ. ಆದ್ದರಿಂದ ಉಪಾಸಕನಾದ ಶುದ್ಧ ಜೀವನಿಗೆ ಅಂದರೆ ಅಂಗತತ್ತ್ವಕ್ಕೆ ಸ್ಥಲವನ್ನು ಹೇಳುವದು ದೋಷವಲ್ಲ.

ಶಕ್ತಿ ಭಕ್ತಿಗಳು

ಶಿವಶಕ್ತಿಯು ಅಘಟಿತಘಟನಾ ಸಾಮರ್ಥ್ಯವುಳ್ಳದ್ದು. ಅದರಿಂದ ಅಸಮಾನವೂ, ಸರ್ವಸಾಕ್ಷಿಣಿಯೂ, ಸತ್ಯಸಂಪೂರ್ಣೆಯೂ ಆಗಿದೆ (ಮಾಯಾವಾದಿ ಹೇಳುವಂತೆ ಮಿಥ್ಯೆಯಲ್ಲ.) ವಿಕಲ್ಪರಹಿತೆಯೂ ಆಗಿದೆ. ಶಿವನೊಡನೆ ತಾದಾತ್ಮ್ಯ ಸಂಬಂಧ ಹೊಂದಿರುವದರಿಂದ ಶಿವನ ಸಹಧರ್ಮಿಣಿ, ಮಾಹೇಶ್ವರಿ ಆಗಿದೆ.

ಮಣ್ಣು ಕೊಡವಾಗಿರದೆ, ಮೃಚ್ಛಕ್ತಿಯು (ಅಂದರೆ ಮಣ್ಣಿನ ಶಕ್ತಿಯು) ಮಣ್ಣಿನ ಆಶ್ರಯದಲ್ಲಿ ಕೊಡವಾಗಿರುವದು. ಹಾಗೆ ಶಿವನ ಆಶ್ರಯದಲ್ಲಿ, ಶಿವಶಕ್ತಿ ಜಗತ್ತಾಗಿದೆ. ಹೀಗೆ ಶಕ್ತಿಯು ಸ್ಥಲವನ್ನು (ಶಿವನನ್ನು) ಆಶ್ರಯಿಸಿರುವದರಿಂದ ಸ್ಥಲವು ಲಿಂಗ ಅಂಗ ಎಂದು ಎರಡು ತೆರನಾನೊಡನೆ, ಆಶ್ರಯ ಹಾಗು ತಾದಾತ್ಮ್ಯ ಸಂಬಂಧದಿಂದ ತಾನೂ ಎರಡು ತೆರನಾಗಿ ಒಂದು ಲಿಂಗಸ್ಥಲವನ್ನೂ ಮತ್ತೊಂದು ಅಂಗಸ್ಥಲವನ್ನೂ ಆಶ್ರಯಿಸಿತು. ಲಿಂಗಗತ ಭಕ್ತಿಗೆ ಕಲೆಯೆಂದೂ ಅಂಗಗತ ಶಕ್ತಿಗೆ ಭಕ್ತಿಯೆಂದೂ ಹೆಸರು ಹೇಳಲ್ಪಡುವವು. ಕಲಾ-ಭಕ್ತಿಗಳನ್ನು ಜತೆಯಾಗಿ ಹೇಳುವಾಗ ಶಕ್ತಿ-ಭಕ್ತಿಗಳೆಂದೂ ಹೇಳುವದುಂಟು.

ದೊಡ್ಡ ಅಗ್ನಿಯು ಇಲ್ಲವೆ ಮಹಾಜ್ವಾಲೆಯು ಹೊಗೆಯ ಮಿಶ್ರಣದಿಂದ ಮಂದಪ್ರಕಾಶದ್ದಾಗಿರುವದು. ಇಲ್ಲವೆ ಉಗ್ರತೆಯಿಂದ ಮನೋಜ್ಞವಲ್ಲದಾಗಿರಬಹುದು. ಆದರಿಂದ ಬೇರ್ಪಡಿಸಲ್ಪಟ್ಟ ದೀಪದಲ್ಲಿ ಅಂತಹ ದೂಷಿತ ಮಿಶ್ರಣವಿಲ್ಲದ್ದರಿಂದ ಒಳ್ಳೆಯ ಪ್ರಕಾಶವುಳ್ಳದ್ದೂ ಶಾಂತವೂ ಆಗಿರುವದು. ಹಾಗೆ ಲಿಂಗಗತಶಕ್ತಿಯು ಹೊಗೆಯಂತಹ ವಾಸನೆ ಅಂದರೆ ಸೃಷ್ಟ್ಯೋನ್ಮುಖತೆಯುಳ್ಳದಾಗಿದೆ. ಸುಪ್ರಕಾಶಿತ ದೀಪದಂತೆ ವಾಸನಾರಹಿತವಾದ ಭಕ್ತಿಯು ಮಹತ್ತರವೂ ಶುದ್ಧವೂ ಸೂಕ್ಷ್ಮವೂ ಶ್ರೇಷ್ಠವೂ ಸಚ್ಚಿದಾನಂದರೂಪವೂ ಎನಿಸಿಕೊಂಡು ಅಂಗನಿಗೆ ಭೋಗಮೋಕ್ಷಗಳನ್ನು ಒದಗಿಸುವದು. ನಿಜವಾಗಿ ಶಕ್ತಿ ಭಕ್ತಿಗಳಿಗೆ ಭೇದವಿಲ್ಲ. ಅವೆರಡೂ ಸ್ಥಲವನ್ನು ಆಶ್ರಯಿಸಿದ ಶಕ್ತಿಯ ಎರಡು ರೀತಿಗಳಾಗಿರುವವು.

ಹೀಗೆ ಶಕ್ತಿ-ಭಕ್ತಿಗಳಿಗೆ ಅಭೇದವಿದ್ದರೂ ಭಕ್ತಿಯು ಗುಣದಲ್ಲಿ ಹೆಚ್ಚಿನದಾಗಿದೆ. ಶಿವಶಕ್ತಿಗೆ ಇಚ್ಛೆ, ಸಂಕಲ್ಪ ಎಂದು ಪರ್ಯಾಯ ನಾಮಗಳೂ ಇವೆ. ಲೀಲಾರ್ಥವಾದ ಸಂಕಲ್ಪವು ಲಿಂಗಾಂಗಭೇದ, ಜಗದಾಕಾರ, ಜಗದವ್ಯವಹಾರಗಳಲ್ಲಿ ಪರಿಣಮಿಸುವದು. ಭಕ್ತಿಯ ಪರಿಣಾಮ ತದ್ವಿರುದ್ಧವಾಗಿವೆ.

ಶಕ್ತಿ	ಭಕ್ತಿ
ಅಧೋಮುಖಿ, ಸಮಾಯೆ, ಸೃಷ್ಟಿಯ ಇಚ್ಛೆಯುಳ್ಳದ್ದು ಪ್ರವೃತ್ತಿ ಪರವು.	ಊರ್ಧ್ವಮುಖಿ, ನಿರ್ಮಾಯೆ, ಶಿವನತ್ತ ಸಮರಸವಾಗುವ ಇಚ್ಛೆಯುಳ್ಳದ್ದು ನಿವೃತ್ತಿ ಪರವು.
ಪ್ರಪಂಚದ ಅಭಿವೃದ್ಧಿಯೇ ಸ್ವಭಾವವಾಗಿದೆ	ಪ್ರಪಂಚದ ಲಯವು ಸ್ವಭಾವವಾಗಿದೆ
ಇದರ ವೈಚಿತ್ರ್ಯದಿಂದ ರೂಪ ಇಲ್ಲದ್ದು ರೂಪಗೊಳ್ಳುತ್ತದೆ.	ಇದರ ವೈಚಿತ್ರ್ಯದಿಂದ ರೂಪ ಉಳ್ಳದ್ದು ರೂಪರಹಿತವಾಗುತ್ತದೆ.

ಹೀಗೆ ಹೋಲಿಸಿ ನೋಡಿದರೆ ಶಕ್ತಿಗಿಂತ ಭಕ್ತಿಯ ಗುಣವು ಮೇಲಾದದ್ದೆಂದು ತಿಳಿಯುವದು.

ಪೂಜ್ಯರಾದ ಗುರುಹಿರಿಯರಲ್ಲಿಯೂ ದೇವತೆಗಳಲ್ಲಿಯೂ ಇರಿಸುವ ಪ್ರೇಮಕೂ ಭಕ್ತಿಯೆನ್ನುವರು. ಶುದ್ಧಜೀವನ (ಅಂಗಗತ) ಭಕ್ತಿಗೆ ಇದಿಷ್ಟೇ ಲಕ್ಷಣ ಹೇಳಿದರೆ ಸಾಕಾಗುವದಿಲ್ಲ. ಈ ಲಕ್ಷಣಗಳು, ಮೇಲೆ ವಿವರಿಸಿದ ಮಹತ್ತರ ಲಕ್ಷಣಗಳ ಭಕ್ತಿಯ ಒಂದು ಅಂಶವನ್ನು ಸೂಚಿಸುತ್ತಿವೆ. ಅಂಗಗತ ಭಕ್ತಿಯೆಂದರೆ ಅಂಗನ ಸ್ವಭಾವವು. ಈ ಸ್ವಭಾವದಲ್ಲಿ ಶಿವಪ್ರೇಮ, ಶಿವಜ್ಞಾನ, ಶಿವಕ್ರಿಯೆ ಇವೆಲ್ಲ ಅಡಕವಾಗಿವೆ. ಶಿವತ್ವ ಪ್ರಾಪ್ತಿಗಾಗಿ ಅತ್ಯವಶ್ಯಕವಾದ ಸಾಧನ-ಸಾಮಗ್ರಿಯುಗಳಿಗೆ ಭಕ್ತಿಯು ಹೆತ್ತ ತಾಯಿಯಾಗಿರುವದು. ಜ್ಞಾನ-ಕ್ರಿಯೆಗಳು ಭಕ್ತಿಯ ಅಂಗಗಳು. ಈ ಭಕ್ತಿಯೇ ಮುಕ್ತಿಯು. ಭಕ್ತಿಯ ಹೆಚ್ಚಿನ ವಿವರಣೆ ಮುಂದೆ ಬರುವದು.

ಶಕ್ತಿವಿಶಿಷ್ಟತೆಯಿಂದಲೂ ಶಕ್ತಿಯ ವಿಜೃಂಭಣೆಯಿಂದಲೂ ಶಿವನ ಏಕತ್ವಕ್ಕೂ ನಿರ್ಗುಣ-ನಿಸ್ಸಂಗತ್ವಗಳಿಗೂ ಯಾವ ಬಾಧೆಯೂ ಬರುವದಿಲ್ಲ. ತಾದಾತ್ಮ್ಯವೇ ಕಂಡುಬರುವದು.

ಶಕ್ತಿಯಿಂದ ಉಪಾಸ್ಯತ್ವವೂ, ಭಕ್ತಿಯಿಂದ ಉಪಾಸಕತ್ವವೂ ಉಂಟಾಗುವದರಿಂದ ಶಕ್ತಿಯು ಲಿಂಗಸ್ಥಲದಲ್ಲಿ, ಭಕ್ತಿಯು ಅಂಗಸ್ಥಲದಲ್ಲಿ ನೆಲೆಗೊಂಡಿರುವವು.

ಲಿಂಗಸ್ಥಲವೆಂದರೆ ಸಾಕ್ಷಾತ್ ಶಿವನೇ! ಅಂಗಸ್ಥಲವೆಂದರೆ ಜೀವಾತ್ಮನು. ಲಿಂಗಾಂಗಗಳ ಐಕ್ಯವೇ ಶಿವಜೀವರ ಐಕ್ಯವು. ಲಿಂಗಾಂಗ ಸಾಮರಸ್ಯವೇ ಶಿವನ ಪರಮಪದಸ್ವರೂಪ. ಇದನ್ನು ಅಳವಡಿಸಿಕೊಂಡವನೇ ಅಜ್ಞಾನ ಗ್ರಂಥಿಯನ್ನು ಕತ್ತರಿಸುವ ಪ್ರಭುವು.

೩. ಲಿಂಗಸ್ಥಲ ನಿರೂಪಣೆ

ಲಿಂಗಸ್ಥಲದ ಸ್ವರೂಪವು ಶಿವಾಗಮಗಳಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಅದುದರಿಂದಲೇ ಲಿಂಗವು ಭಕ್ತರಿಂದ ಪೂಜೆಗೊಳ್ಳುವ ಸಂಪತ್ತಾಗಿರುವದು. 'ರೂಹಿಲ್ಲದ, ಕುಂದಿಲ್ಲದ, ರಂಜನವಿಲ್ಲದ, ಶಬ್ದಾದಿ ವಿಷಯಗಳಿಗೂ ಭಾವಕ್ಕೂ ಮೀರಿದ ಪರಬ್ರಹ್ಮವಸ್ತುವೇ ಮೂಲಲಿಂಗ'ವೆಂಬದಕ್ಕೆ ಪ್ರಮಾಣಗಳಿವೆ. ಈ ಶಕ್ತಿವಿಶಿಷ್ಟವಾದ ನಿರಾಕಾರ ವಸ್ತುವು ಭಕ್ತರ ಉದ್ಧಾರಕ್ಕಾಗಿ ಲಿಂಗಾಕಾರವನ್ನು ಹೊಂದಿರುವದು. ಈ ಆಕಾರವು ಕೃತಕವಲ್ಲವು. ಜ್ಯೋತಿರ್ಮಯವಾದ ಲಿಂಗವು ಶಿವಾ

ತ್ಮಕವೆಂದು ವೇದವು ಹೇಳುತ್ತಿರುವದೂ ಶಿವನಿಗವ ಲಿಂಗಕ್ಕೂ ಭೇದವಿಲ್ಲೆಂಬ ದನ್ನೇ ಸೂಚಿಸುತ್ತದೆ

ಚರಾಚರಾತ್ಮಕವಾದ ಈ ಜಗತ್ತು ಯಾವ ವಸ್ತುವಿನಲ್ಲಿ ಲೀನವಾಗುವದೋ ಮತ್ತು ಎಲ್ಲಿಂದ ಗತಿಯನ್ನು (ಉತ್ಪತ್ತ್ಯಾದಿಯನ್ನು) ಹೊಂದುವದೋ ಆ ವಸ್ತುವೇ ಲಿಂಗವೆಂದು ಲಿಂಗತತ್ವವನ್ನು ಬಲ್ಲವರು ಹೇಳುತ್ತಾರೆ. ಸಕಲ ನಿಷ್ಕಲನಾದ ಸಾಕ್ಷಾಚ್ಛಿವನು ಸಕಲದೇಹಿಗಳ ಲಯಗತಿಗಳಿಗೆ ಕಾರಣಭೂತನಾಗಿರುವದರಿಂದ ಲಿಂಗ ವೆಂದು ಹೇಳಲ್ಪಡುವನು.

ತ್ರಿವಿಧಲಿಂಗ

ಒಬ್ಬ ಶಿವನು ಅಂಗಲಿಂಗವಾಗಿ ಇಬ್ಬಗೆಯಾದನು. ಈ ಇಬ್ಬಗೆಯಲ್ಲಿ ನ್ಯೂನ-ಅಧಿಕ ಭಾವವಿರುವದು. ಲಿಂಗ ಸ್ವರೂಪಕ್ಕಿಂತಲೂ ಅಂಗನ ಸ್ವರೂಪದಲ್ಲಿ ನ್ಯೂನತೆಯುಂಟಾಯಿತು. ನ್ಯೂನತೆಯೆಂದರೆ ಸಂಕೋಚಭಾವ. ಆದಕ್ಕೆ ಉಪಾಧಿಯೇ ಮೂಲವು. ಅಂಗನ (ಶುದ್ಧಜೀವನ) ಸಂಕೋಚಭಾವ (ಉಪಾಧಿಮೂಲ ಜೀವತ್ವ) ವನ್ನು ಕಳೆದು ವಿಕಾಸಭಾವ (ಶಿವತ್ವ)ವನ್ನು ಕ್ರಮವಾಗಿ ಉಂಟು ಮಾಡುವ ದಕ್ಕಾಗಿ ಲಿಂಗರೂಪನಾದ ಶಿವನು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂದು ಮೂಬಗೆಯ ಭೇದವನ್ನು ಹೊಂದಬೇಕಾಯಿತು.

೧) ಭಾವಲಿಂಗವು ನಿಷ್ಕಳವಾಗಿ ಭಾವದಿಂದ ಗ್ರಹಿಸತಕ್ಕದಾಗಿದೆ.

೨) ಪ್ರಾಣಲಿಂಗವು ಸಕಲ-ನಿಷ್ಕಲವಾಗಿ ಮನಸ್ಸಿನಿಂದ ಗ್ರಹಿಸತಕ್ಕದ್ದಾಗಿದೆ.

೩) ಇಷ್ಟಲಿಂಗವು ಸಕಲವಾಗಿ ದೃಷ್ಟಿಯಿಂದ ಗ್ರಹಿಸತಕ್ಕದ್ದಾಗಿದೆ.

ಇಷ್ಟಲಿಂಗವು ಇಷ್ಟಪ್ರಾಪ್ತಿಯನ್ನುಂಟು ಮಾಡುವದೂ ಅನಿಷ್ಟವನ್ನು ಪರಿಹರಿಸುವದೂ ಆಗಿದೆ. ಅಲ್ಲದೆ 'ಇಷ್ಟಿ' ಅಂದರೆ ಪೂಜೆ. ನಿತ್ಯದಲ್ಲಿ ಪೂಜಿಸಲ್ಪಡುವದು ಅದು ಇಷ್ಟವು. ಅಂತಹ ಪೂಜ್ಯವಾದ ಇಷ್ಟವಸ್ತುವೇ ಇಷ್ಟಲಿಂಗವೆಂದು ಲಿಂಗಪೂಜಕ ಗುರುಗಳಿಂದ ಹೇಳಲ್ಪಟ್ಟಿದೆ ತನ್ನ ಭಕ್ತರಿಗೆ ಇಷ್ಟಾರ್ಥವನ್ನು ಕೊಡುವದರಿಂದ ಇಷ್ಟಲಿಂಗವೆಂದು ಹೆಸರನ್ನು ಪಡೆದಿದೆಯೆಂದು ಅಥರ್ವಣವೇದದ ಅಭಿಪ್ರಾಯವಿದೆ.

ಶಿವನ ಸಚ್ಚಿದಾನಂದ ರೂಪದಲ್ಲಿಯ ಸತ್, ಚಿತ್, ಆನಂದ ರೂಪಗಳನ್ನು ಕ್ರಮವಾಗಿ ಭಾವ, ಪ್ರಾಣ, ಇಷ್ಟಲಿಂಗಗಳು ಹೊಂದಿರುತ್ತವೆ. ಏಕತ್ವವನ್ನು ಬೋಧಿಸುವ ಉಪನಿಷದ್ವಾಕ್ಯದಲ್ಲಿಯ ತತ್, ತ್ವಂ ಅಸಿ ಪದಗಳ ಅರ್ಥಗಳೇ ಇಷ್ಟ-ಪ್ರಾಣ-ಭಾವಲಿಂಗಗಳಾಗಿವೆಯೆಂದು ನಿರೂಪಿಸಲ್ಪಟ್ಟಿದೆ. ಮತ್ತು ಭಾವ

ಲಿಂಗವು ಪರ(ಕಾರಣ)ವೂ, ಪ್ರಾಣಲಿಂಗವು ಸೂಕ್ಷ್ಮವೂ, ಇಷ್ಟಲಿಂಗವು ಸ್ಥೂಲವೂ ಆಗಿರುವವು. ಸ್ಥೂಲವು ಬಾಹ್ಯವೆಂತಲೂ ಸೂಕ್ಷ್ಮವು ಬಾಹ್ಯಾಭ್ಯಂತರವೆಂತಲೂ, ಕಾರಣ (ಪರ)ವು ಅಭ್ಯಂತರವೆಂತಲೂ ಹೇಳಲ್ಪಡುತ್ತವೆ.

(ಇಷ್ಟಪ್ರಾಣ ಭಾವಲಿಂಗಗಳು ಮೇಲೆ ಹೇಳಿದಂತೆ ತತ್, ತ್ವಂ ಅಸಿಗಳಿಗೆ ಕ್ರಮಾರ್ಥವಾಗಿರದೆ, ತ್ವಂ, ತತ್, ಅಸಿ ಈ ಕ್ರಮಾರ್ಥವಾಗಿವೆಯೆಂಬುದು ಸಯುಕ್ತಿಕವೆಂದು ಪೂಜ್ಯರಾದ ಶ್ರೀ ಜ. ಚ. ನಿ. ಅವರ ಅಭಿಪ್ರಾಯವಿದೆ.)

ಇಷ್ಟ-ಪ್ರಾಣ-ಭಾವ ಲಿಂಗಗಳು ಕ್ರಮವಾಗಿ ದೇಹ-ಪ್ರಾಣ-ಆತ್ಮಗಳ ರೂಪದಿಂದಲೂ, ಕ್ರಿಯೆ, ಮಂತ್ರ, ಪ್ರಯೋಗ (ಅನುಸಂಧಾನ) ರೂಪದಿಂದಲೂ ಬಿಂದು ನಾದ ಕಳೆ ಭೇದದಿಂದಲೂ ಇರುವವೆಂದು ಉದಾಹೃತವಾಗಿವೆ.

ಗುರುವು ಜೀವ(ಶಿಷ್ಯ)ನನ್ನು ಕುರಿತು ಜೀವವೇ ತ್ವಂ (ನೀನು), ತತ್ (ಆ ಪರಶಿವನೇ), ಅಸಿ (ಇರುವೆ), ಎಂದು ಬೋಧಿಸುವನು. ಆದ್ದರಿಂದ 'ತ್ವಂತದಸಿ' ವಾಕ್ಯವು ಶಿವಜೀವರ ಐಕ್ಯವನ್ನು ಬೋಧಿಸುವದಾಗಿದೆ. 'ತತ್ವಮಸಿ' ವಾಕ್ಯಕ್ಕಿಂತ 'ತ್ವಂತದಸಿ' ವೀರಶೈವ ಸಿದ್ಧಾಂತಕ್ಕೆ ಸಮಂಜಸವೆಂದು ಪೂಜ್ಯ ಶ್ರೀ. ಜ. ಚ. ನಿ. ಯವರು ಪ್ರತಿಪಾದಿಸಿದ್ದಾರೆ. ಇದರಿಂದ ಮೇಲೆ ತತ್, ತ್ವಂ, ಅಸಿಗಳಿಗೆ ಇಷ್ಟ, ಪ್ರಾಣ, ಭಾವಗಳ ಕ್ರಮ ಸಂಬಂಧವು ಸರಿಯುಲ್ಲವೆಂದು ಕಾಣುವದು. ಯಾಕಂದರೆ ತ್ವಂ ಪದದರ್ಥವು ಜೀವನೆಂದಾಗುವದು. ಆದರೂ ಇದನ್ನು ಅಭೇದದೃಷ್ಟಿಯಿಂದ ಹೀಗೆ ಹೇಳಲ್ಪಟ್ಟದೆಯೆಂದು ತಿಳಿಯಬೇಕು. ಮೂರು ಪದಗಳ ತತ್ವಮಸಿ ವಾಕ್ಯವು ನಿಶ್ಚಯವಾಗಿ ಏಕತ್ವವನ್ನು ಬೋಧಿಸುವದಾಗಿದೆ. ಏಕತ್ವವು ಶಕ್ತಿವಿಶಿಷ್ಟ ಶಿವತತ್ವದಲ್ಲಿರುವದು. ಆದ್ದರಿಂದ ತತ್ವಮಸಿ ವಾಕ್ಯದ ಅರ್ಥವು ಮೂಲ ಲಿಂಗವೇ (ಶಿವನೇ) ಎಂದು ಆಗುವದು. ಆದ್ದರಿಂದ ಈ ವಾಕ್ಯದಲ್ಲಿಯ ಪದತ್ರಯದ ಅರ್ಥವು ಮೂಲಲಿಂಗದ ಇಷ್ಟ ಪ್ರಾಣ ಭಾವವೆಂಬ ತ್ರಿವಿಧಲಿಂಗವೇ ಆಗಿದೆಯೆಂದು ಸೂಚಿಸಲು ಹೀಗೆ ಹೇಳಿದೆಯೆಂದು ತಿಳಿಯಬೇಕು. ಆದರೆ ಹೀಗೆ ಅಭೇದದ ಆವರಣದಲ್ಲಿ ಅಡಗಿದ ಭೇದಗಳ ಅರ್ಥವನ್ನಾದರೂ ಹಿಂದು ಮುಂದು ಮಾಡುವದಕ್ಕಿಂತ ಪೂಜ್ಯ ಶ್ರೀ ಜ. ಚ. ನಿ. ಯವರು ಹೇಳುವ ತ್ವಂತದಸಿ ವಾಕ್ಯದ ಪದಗಳನ್ನೇ ಕ್ರಮವಾಗಿ ಇಷ್ಟ-ಪ್ರಾಣ-ಭಾವಗಳಿಗೆ ತ್ವಂ, ತತ್, ಅಸಿ ಎಂದು ಹೇಳುವದು ಸರಿಯೆಂದು ನನ್ನ ತಿಳುವಳಿಕೆ. ಮುಂದೆ ಲಿಂಗಾಂಗ ಸಂಯೋಗ ವಿಧಿಯುಲ್ಲಿ ತತ್‌ಪದವು ಲಿಂಗವನ್ನು, ತ್ವಂ ಪದವು ಅಂಗವನ್ನು, ಅಸಿಪದವು ಇವೆರಡರ ಸಂಯೋಗವನ್ನು ಬೋಧಿಸುವದೆಂದು ಹೇಳಲಾಗಿದೆ. ಅಲ್ಲಿ ಅಭೇದದಲ್ಲಿ ಮುಕ್ತವಾಗುವ ಭೇದದೃಷ್ಟಿಯಿಂದ ಹೇಳಿದೆಯೆಂದು ತಿಳಿಯಬೇಕು.

ಷಡ್ವಿಧ ಲಿಂಗಗಳು

ತ್ರಿವಿಧ ಲಿಂಗಸ್ಥಳಗಳು ಒಂದೊಂದರಲ್ಲಿ ಎರಡೆರಡರಂತೆ ಆರು ಬಗೆಯ ಲಿಂಗ ಸ್ಥಲಗಳಾದವು. ಭಾವಲಿಂಗದಲ್ಲಿ ಮಹಾಲಿಂಗ ಪ್ರಸಾದಲಿಂಗವೆಂತಲೂ, ಪ್ರಾಣ ಲಿಂಗದಲ್ಲಿ ಚರಲಿಂಗ ಶಿವಲಿಂಗವೆಂತಲೂ ಇಷ್ಟಲಿಂಗದಲ್ಲಿ ಗುರುಲಿಂಗ ಆಚಾರ ಲಿಂಗವೆಂತಲೂ ಅನುಭವ ಪ್ರಮಾಣದ ಹಂತ ಅಥವಾ ಮಟ್ಟದಂತೆ ಆರು ತೆರ ನಾದವು.

ಶಿವಾತ್ಮಕವಾದ ಪರಲಿಂಗವೇ ತನ್ನ ಶಕ್ತಿಯ ವೈಭವದಿಂದ ಅಥವಾ ಸ್ವಾತಂತ್ರ್ಯದಿಂದ ಇಲ್ಲವೆ ಲೀಲೆಯಿಂದ ಈ ಪ್ರಕಾರ ಮಹಾಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ, ಆಚಾರಲಿಂಗ ಎಂದು ಆರು ಬಗೆಯಾಯಿತು.

ಪರಶಿವನು ತ್ರಿವಿಧಲಿಂಗವಾಗಿ ಮತ್ತೆ ಪ್ರತಿಯೊಂದರಲ್ಲಿ ಎರಡೆರಡರಂತೆ ಆದುದು ಭಕ್ತರ ಧ್ಯಾನ ಪೂಜಾರ್ಥವೇ ಇರುವದು. ಆ ಪರಶಿವನು ಯತಿಗಳ, ಮಂತ್ರಸಾಧಕರ, ಜ್ಞಾನಿಗಳ ಮತ್ತು ಯೋಗಿಗಳ ಧ್ಯಾನಪೂಜೆಗಳಿಗಾಗಿ ತನ್ನ ವಿಮರ್ಶಾಶಕ್ತಿಯಿಂದ ಲಿಂಗಾದಿ ಆಕಾರ ಧರಿಸುತ್ತಾನೆ.' ಎಂಬ ಸುಪ್ರಭೇದಾ ಗಮ ವಾಕ್ಯವು ಇದಕ್ಕೆ ಪ್ರಮಾಣವಾಗಿದೆ. ಷಡ್ವಿಧ ಲಿಂಗಗಳ ಧ್ಯಾನ ಪೂಜಾದಿ ಕ್ರಮಗಳು ಮುಂದೆ ಪ್ರತಿಪಾದಿಸಲ್ಪಟ್ಟಿವೆ.

ಷಡ್ವಿಧಶಕ್ತಿಗಳು

ವಿಮರ್ಶಾ ಶಕ್ತಿಯುಕ್ತನಾದ ಶಿವನು ಭಕ್ತಾನುಗ್ರಹಕ್ಕಾಗಿ ಯಾವ ಆಕಾರ ವನ್ನು ಧರಿಸಿದರೂ, ಶಿವಗತ ಶಕ್ತಿಯು ಆ ಆ ಆಕಾರಗಳಲ್ಲಿ ನೆಲಸಿಯೇ ಇರುವ ದೆಂಬದು ಸಹಜವು. ಹಾಗೆಂತಲೇ ಷಡ್ವಿಧಲಿಂಗಗಳಲ್ಲಿ ಷಡ್ವಿಧಶಕ್ತಿಗಳು ಇರಲೇ ಬೇಕು. ಅವು:—

ಶಾಂತ್ಯತೀತೋತ್ತರ ಕಲೆಯೆಂಬ	ಚಿಚ್ಛಕ್ತಿಯು	ಮಹಾಲಿಂಗದಲ್ಲಿ
ಶಾಂತ್ಯತೀತ ಕಲೆಯೆಂಬ	ಪರಾಶಕ್ತಿಯು	ಪ್ರಸಾದಲಿಂಗದಲ್ಲಿ
ಶಾಂತಿಕಲೆಯೆಂಬ	ಆದಿಶಕ್ತಿಯು	ಚರಲಿಂಗದಲ್ಲಿ
ವಿದ್ಯಾಕಲೆಯೆಂಬ	ಇಚ್ಛಾಶಕ್ತಿಯು	ಶಿವಲಿಂಗದಲ್ಲಿ
ಪ್ರತಿಷ್ಠಾ ಕಲೆಯೆಂಬ	ಜ್ಞಾನಶಕ್ತಿಯು	ಗುರುಲಿಂಗದಲ್ಲಿ
ನಿವೃತ್ತಿ ಕಲೆಯೆಂಬ	ಕ್ರಿಯಾಶಕ್ತಿಯು	ಆಚಾರಲಿಂಗದಲ್ಲಿ

ಈ ಶಕ್ತಿಗಳು ಷಡ್ವಿಧ ಲಿಂಗಗಳನ್ನು ಒಂದೊಂದಾಗಿ ಆಶ್ರಯಿಸಿ, ಉಪಾಸಕನಾದ ಅಂಗನನ್ನು ಲಿಂಗಾಭಿಮುಖನನ್ನಾಗಿ ಮಾಡಿ ಲಿಂಗರೂಪಿಯನ್ನೇ ಮಾಡುವದರಲ್ಲಿ ಸಾಧಕಗಳಾಗಿವೆ. ಅದು ಹೇಗೆ ಎಂಬದು ಮುಂದೆ ವಿವರಿಸಲ್ಪಡುವದು.

ಶಕ್ತಿವಿಶಿಷ್ಟ ಷಡ್ವಿಧಲಿಂಗಸ್ವರೂಪ(ಪ್ರವೃತ್ತಿಕ್ರಮದಿಂದ)

ಮಹಾಲಿಂಗ– ಆದ್ಯಂತರಹಿತ(ಅನಾದಿ), ಅಪ್ರಮೇಯ(ಸ್ವತಃಸಿದ್ಧ), ಜಡರಹಿತ(ಚೇತನಾತ್ಮಕ), ನಿರ್ಮಲ(ಪರಿಪೂರ್ಣ), ಏಕ, ಸೂಕ್ಷ್ಮ, ಪರಾತ್ಪರ, ಭವರಹಿತ ಹೀಗಿರುವ ಶಿವತತ್ವವೇ ಚಿಚ್ಛಕ್ತಿಸಹಿತವಾದ ಭಾವಗಮ್ಯ ಮಹಾಲಿಂಗವು.

ಪ್ರಸಾದಲಿಂಗ– ಪರಂಜ್ಯೋತಿಸ್ವರೂಪ, ಸತ್ಯ, ಅಖಂಡ, ಇಂದ್ರಿಯಾಗೋಚರ, ಅಮೃತ, ಜಗತ್ ಪರಿಣಾಮ ಕಾರಣ, ಉಪಾದಿರಹಿತ, ಸಾದಾಖ್ಯತತ್ವಾಶ್ರಯ, ಆಗಿರುವ ಲಿಂಗವೇ ಪರಾಶಕ್ತಿಯುಕ್ತವಾದ ಜ್ಞಾನಗಮ್ಯ ಪ್ರಸಾದಲಿಂಗವು.

ಚರಲಿಂಗ– ಜ್ಯೋತಿಸ್ವರೂಪ, ಬಹಿರಂತರ್ವ್ಯಾಪಕ, ಪರಮ ಪುರುಷ, ಅಮೂರ್ತಸಾದಾಖ್ಯತತ್ವಾಶ್ರಯ ಆಗಿರುವ ಲಿಂಗವು ಆದಿಶಕ್ತಿಯುಕ್ತವಾದ ಮನೋ (ಧ್ಯಾನ) ಗಮ್ಯ ಚರಲಿಂಗವು.

ಶಿವಲಿಂಗ– ವಿದ್ಯಾಕಲಾಯುಕ್ತ, ವಿರಾಜಮಾನ ದಿವ್ಯಪ್ರಭಾಸಂಗತ. ಏಕಮುಖ, ಪ್ರಶಾಂತ, ಮೂರ್ತಸಾದಾಖ್ಯತತ್ವಾಶ್ರಯ ಆಗಿರುವ ಲಿಂಗವೇ ಇಚ್ಛಾಶಕ್ತಿಯುಕ್ತವಾದ ಅಹಂಕಾರಗಮ್ಯವಾದ ಶಿವಲಿಂಗವು.

ಗುರುಲಿಂಗ– ತೇಜೋನಿಧಿ, ಪರಮಸುಖಾಂಬುಧಿ, ಸರ್ವೋಪದೇಶವಿಧಿಕರ್ತೃ, ಕರ್ತೃಸಾದಾಖ್ಯ ತತ್ವಾಶ್ರಯ ಆಗಿರುವ ಲಿಂಗವೇ ಜ್ಞಾನಶಕ್ತಿಯುಕ್ತವಾದ ಬುದ್ಧಿಗಮ್ಯವಾದ ಗುರುಲಿಂಗವು.

ಆಚಾರಲಿಂಗ– ಕರ್ಮಾತ್ಮಕ, ಸಕಲತತ್ವಾಶ್ರಯ, ನಿವೃತ್ತಿಮಾರ್ಗೋನ್ಮುಖಿ ಆಗಿರುವದೇ ಕ್ರಿಯಾಶಕ್ತಿಯುಕ್ತವಾದ ಚಿತ್ತಗಮ್ಯವಾದ ಆಚಾರಲಿಂಗವು.

ಈ ಆರು ವಿಧದ ಲಿಂಗಗಳ ಸ್ವರೂಪ ಲಕ್ಷಣಗಳು ಭಕ್ತನಿಗೆ ಸರಿಯಾಗಿ ತಿಳಿದಿದ್ದರೆ ಅವನಿಗೆ ಉಪಾಸನಾಕ್ರಮವು ಸುಲಭವಾಗುವದು. ಈ ಲಿಂಗಗಳನ್ನು ಯಾವಯಾವ ಸ್ಥಲಗಳಲ್ಲಿ ಹೇಗೆ ಉಪಾಸಿಸಬೇಕು? ಆಚಾರಾದಿ ಲಿಂಗನಾಮಗಳು ಹೇಗೆ ಸಂಭವಿಸಿದವು? ಎಂಬುದು ಮುಂದಿನ ಅಧಿಕರಣಗಳಲ್ಲಿ ತಾನಾಗಿ ಹೊಳೆಯುವದು.

ಷಡ್ವಿಧ ಲಿಂಗಗಳ ಉತ್ಪತ್ತಿಕ್ರಮ

೧) ಶಿವನ ಚಿಚ್ಛಕ್ತಿಯ ಸ್ಫುರಣದಿಂದ ಮಹಾಲಿಂಗ ಸ್ಥಲವಾಯಿತು. ಅದರ ಉಪಾಸನೆಗೆ ಐಕ್ಯಸ್ಥಲವೆಂಬ ಅಂಗಸ್ಥಲವಾಯಿತು.

೨) ಪರಾಶಕ್ತಿಯ ಸ್ಫುರಣದಿಂದ ಪ್ರಸಾದಲಿಂಗ ಸ್ಥಲವಾಯಿತು. ಅದರ ಉಪಾಸನೆಗೆ ಶರಣಸ್ಥಲವೆಂಬ ಅಂಗ ಲವಾಯಿ

೩) ಆದಿಶಕ್ತಿಯು ಸ್ಫುರಣದಿಂದ ಚರಲಿಂಗಸ್ಥಲವಾಯಿತು. ಅದರ ಉಪಾಸನೆಗೆ ಪ್ರಾಣಲಿಂಗಸ್ಥಲವೆಂಬ ಅಂಗಸ್ಥಲವಾಯಿತು.

೪) ಇಚ್ಛಾಶಕ್ತಿಯು ಸ್ಫುರಣದಿಂದ ಶಿವಲಿಂಗಸ್ಥಲವಾಯಿತು. ಅದರ ಉಪಾಸನೆಗೆ ಪ್ರಸಾದಿಸ್ಥಲವೆಂಬ ಅಂಗಸ್ಥಲವಾಯಿತು.

೫) ಜ್ಞಾನಶಕ್ತಿಯು ಸ್ಫುರಣದಿಂದ ಗುರುಲಿಂಗಸ್ಥಲವಾಯಿತು. ಅದರ ಉಪಾಸನೆಗೆ ಮಹೇಶಸ್ಥಲವೆಂಬ ಅಂಗಸ್ಥಲವಾಯಿತು.

೬) ಕ್ರಿಯಾಶಕ್ತಿಯು ಸ್ಫುರಣದಿಂದ ಆಚಾರ ಲಿಂಗಸ್ಥಲವಾಯಿತು. ಅದರ ಉಪಾಸನೆಗೆ ಭಕ್ತಸ್ಥಲವೆಂಬ ಅಂಗಸ್ಥಲವಾಯಿತು.

ಈ ಆರು ವಿಧವಾದ ಪ್ರವೃತ್ತಿ ಮಾರ್ಗದ ಲಿಂಗೋತ್ಪತ್ತಿಯು ಸಂಕ್ಷೇಪವಾಗಿ ವಿವರಿಸಲ್ಪಟ್ಟಿದೆ. ಪ್ರತಿಯೊಂದು ಲಿಂಗಸ್ಥಲದಲ್ಲಿಯೂ ಭೇದೋಪಭೇದಗಳಿವೆ.

ಶಿವಸಿದ್ಧಾಂತ ತಂತ್ರವನ್ನು ತಿಳಿದವನು ಅಜ್ಞಾನ ಗ್ರಂಥಿಯನ್ನು ಭೇದಿಸುವನು.

---

೪. ಅಂಗಸ್ಥಲ ನಿರೂಪಣೆ.

ಅನಾದಿ ಅನಂತ ಜನ್ಮರಹಿತ ಆದ ಪರಾತ್ಪರ ಲಿಂಗವನ್ನು ಮಹಾಭಕ್ತಿಯಿಂದ ಹೊಂದುತ್ತಿರುವ ವಸ್ತುವು (ಲಿಂಗೈಕ್ಯವಾಗುತ್ತಿರುವ ವಸ್ತುವು)ಅಂಗಸ್ಥಲವೆಂದು ಆಗಮಗಳಿಂದ ನಿಶ್ಚಿತವಾಗಿದೆ. ಅಂಗ ಶಬ್ದದಲ್ಲಿಯ ಅಂ ಎಂಬುದು ಪರಬ್ರಹ್ಮಬೋಧಕವಾಗಿದೆ. ಗಂ ಎಂಬುದು ಆ ಪರಬ್ರಹ್ಮವನ್ನು ಗಚ್ಛತಿ(ಹೊಂದುತ್ತದೆ) ಎಂಬ ಅರ್ಥಬೋಧಕವಾಗಿದೆ. ಈ ಎರಡರಿಂದ 'ಅಂಗಂ' ಎಂಬುದು ಸಿದ್ಧವಾಗಿದೆ. ಅಂದರೆ ಪರಬ್ರಹ್ಮವನ್ನು ಹೊಂದಿ ತಾದಾತ್ಮ್ಯರೂಪವಾಗಿರುವದೇ ಅಂಗವೆಂದು ಅಂಗತತ್ವವಿಶಾರದರ ಮತವಿದೆ. ಆದ್ದರಿಂದಲೇ 'ಅಂಗನ ವೃತ್ತಿಯೆಲ್ಲ ಲಿಂಗಪೂಜೆ! ಅಂಗನ ಭೋಗವೆಲ್ಲ ಶಿವಪ್ರಸಾದ' ಎಂದು ಹೇಳಲಾಗುತ್ತಿದೆ.

ಪರಶಿವನೇ ಲಿಂಗಾಂಗವಾದುದರಿಂದ ಎರಡಕ್ಕೂ ಭೇದವಿಲ್ಲ. ಬಂಗಾರದಿಂದ ಕಡಗವು ಕೆಲಕಾಲ ಭೇದವ್ಯವಹಾರದಲ್ಲಿದ್ದರೂ ಕೊನೆಗೂ ಅದು ಬಂಗಾರದ ರೂಪವನ್ನೇ ಹೊಂದುವಂತೆ ಅಂಗನು ಲಿಂಗರೂಪನಾಗುವನು. ಅಂಗಶಬ್ದವಾದರೂ ಇದೇ ಅರ್ಥವನ್ನು ಬೋಧಿಸುವದನ್ನು ಇಲ್ಲಿ ನಿರೂಪಿಸಲಾಗಿದೆ.

ತ್ರಿವಿಧ ಅಂಗಸ್ಥಲಗಳು

ಲಿಂಗವು ಅಂಗನನ್ನು ತನ್ನಲ್ಲಿ ಲೀನವಾಗಿಸಿಕೊಳ್ಳುವದಕ್ಕಾಗಿ (ಉಪಾಸ್ಯತ್ವಕ್ಕಾಗಿ) ಮೂರು ಬಗೆಯಾದಂತೆ ಅಂಗವಾದರೂ ಆಯಾ ಲಿಂಗೋಪಾಸನದಿಂದ ಆ ಆ ಸ್ವರೂಪವನ್ನು ಹೊಂದುವದಕ್ಕಾಗಿ ತಾನೂ ಮೂರು ಬಗೆಯಾಗಬೇಕಾಯಿತು.

ಜೀವನು ಶಿವದೀಕ್ಷಿತನಾಗಿ ಅಂಗ (ಶುದ್ಧ ಜೀವ) ನೆನಿಸಿದ ಮೇಲೆ ಅವನಿಗೆ ಸಂಸಾರ ಭ್ರಾಂತಿಯು ಅಂದರೆ ಆಣವ, ಮಾಯಾ, ಕಾರ್ಮಿಕ ಮಲತ್ರಯಗಳ ಭ್ರಾಂತಿಯು ಸಹಜವಾಗಿ ತ್ಯಾಗವಾಗುವದಾದ್ದರಿಂದ ಮೊದಲನೆಯದು ತ್ಯಾಗಾಂಗವೆನಿಸುವದು.

ಅಂಗನು ತನ್ನ ಭೋಗವನ್ನು ಮೊದಲು ಶಿವನಿಗೆ ಅರ್ಪಿಸಿ ಬಳಿಕ ಶಿವಪ್ರಸಾದರೂಪದಿಂದ, ಶಿವನಿಂದ ಬೇರಲ್ಲವೆಂಬ ಬುದ್ಧಿಯುಳ್ಳವನಾಗಿ ತಾನು ಭೋಗಿಸುವದರಿಂದ ಎರಡನೆಯದು ಭೋಗಾಂಗವೆನಿಸುವದು.

ಅಂಗನು ಶಿವನೊಡನೆ ಸಾಮರಸ್ಯರೂಪವಾದ ಅನುಸಂಧಾನ ಮಾಡುವನು. ಅಂದರೆ ಶಿವಯೋಗ ಸುಖವನ್ನು ಹೊಂದುವನು. ಅದರಿಂದ ಮೂರನೆಯದು **ಯೋಗಾಂಗವೆನಿಸುವದು.**

ತ್ಯಾಗ, ಭೋಗ, ಯೋಗ ಅಂಗಗಳಿಗೆ ಕ್ರಮವಾಗಿ-
ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಶರೀರಗಳೂ
ಜಾಗ್ರತ, ಸ್ವಪ್ನ, ನಿದ್ರೆ ಎಂಬ ಅವಸ್ಥೆಗಳೂ
ವಿಶ್ವ, ತೈಜಸ, ಪ್ರಾಜ್ಞ ಎಂಬ **ಜೀವರುಗಳೂ**

ಹೇಳಲ್ಪಟ್ಟಿವೆ. ಇವು ಅಂಗತ್ರಯಕ್ಕೆ ಅಭೇದರೂಪದಿಂದ ಹೇಳಲ್ಪಟ್ಟಿವೆ. ಅಂಗನೆಂದರೆ ಶುದ್ಧ ಜೀವನು. ಶುದ್ಧ ಜೀವನೊಬ್ಬನೇ

೧) ವಿಶ್ವಜೀವ ಎಂಬ ಹೆಸರಿನಿಂದ ಸ್ಥೂಲಶರೀರ (ತ್ಯಾಗಾಂಗ)ದಲ್ಲಿ ಜಾಗ್ರತಾವಸ್ಥೆಯಲ್ಲಿ ಇಷ್ಟಲಿಂಗವನ್ನು ಉಪಾಸಿಸುವನು.

೨) ತೈಜಸಜೀವ ಎಂಬ ಹೆಸರಿನಿಂದ ಸೂಕ್ಷ್ಮಶರೀರ (ಭೋಗಾಂಗ)ದಲ್ಲಿ ಸ್ವಪ್ನದ ಅವಸ್ಥೆಯಲ್ಲಿ ಪ್ರಾಣಲಿಂಗವನ್ನು ಉಪಾಸಿಸುವನು.

೩) ಪ್ರಾಜ್ಞ ಜೀವ ಎಂಬ ಹೆಸರಿನಿಂದ ಕಾರಣಶರೀರ [ಯೋಗಾಂಗ]ದಲ್ಲಿ ನಿದ್ರೆಯ ಅವಸ್ಥೆಯಲ್ಲಿ ಭಾವಲಿಂಗವನ್ನು ಉಪಾಸಿಸುವನು.

ಷಡ್ವಿಧ ಅಂಗಸ್ಥಲಗಳು

ಮೂರು ಬಗೆಯ ಲಿಂಗಸ್ಥಲವು ಆರು ಬಗೆಯಾದಂತೆ ಆ ಆ ಲಿಂಗಗಳ ಸಂಯೋಗಕ್ಕಾಗಿ ಮೇಲೆ ಹೇಳಿದ ಮೂರು ಬಗೆಯ ಅಂಗಸ್ಥಲವಾದರೂ ಆರು ಬಗೆಯ ಅಂಗಸ್ಥಲವಾಗಬೇಕಾಯಿತು.

ಎಲ್ಲಿ ಸಂಸಾರಸಂಗರಹಿತವಾದ ಶಿವಭಕ್ತಿಯು ಸ್ಥಿರವಾಗಿ ನೆಲೆಗೊಂಡಿರುವದೋ ಅದು ಅಂಗವಾಗಿರುವದು. ಅಂಗಗತ ಭಕ್ತಿಯು ನಿವೃತ್ತಿಪರವಾದದ್ದು. ಅಂಗನನ್ನು ಸಂಸಾರದಿಂದ ನಿವೃತ್ತಿಗೊಳಿಸಿ ಲಿಂಗಸಂಯೋಗಗೊಳಿಸುವ ಆ ಭಕ್ತಿಯು ವಿಚಿತ್ರವಾದ ಸಂಯೋಗ ಮಹಿಮೆಯಿಂದ ಸಾಮಕ್ರಿಯಾ ಪಾತ್ರ ಭೇದವಾದ ಬೇರೆ ಬೇರೆಯಾದ ಆರು ಅಂಗಸ್ಥಲಗಳಾದವು.

ತ್ಯಾಗಾಂಗವು ಭಕ್ತ, ಮಹೇಶ ಎಂದು, ಭೋಗಾಂಗವು ಪ್ರಸಾದಿ, ಪ್ರಾಣಲಿಂಗಿ ಎಂದು ಯೋಗಾಂಗವು ಶರಣ, ಐಕ್ಯ ಎಂದು ಒಂದೊಂದರಲ್ಲಿ ಎರಡೆರಡಾದವು.

ಭಕ್ತ–ಮಹೇಶ ಸ್ಥಲಗಳು ಸ್ಥೂಲಶರೀರದಲ್ಲಿ ವಿಶ್ವಜೀವನಿಗೆ, ಪ್ರಸಾದಿ–ಪ್ರಾಣಲಿಂಗಿ ಸ್ಥಲಗಳು ಸೂಕ್ಷ್ಮಶರೀರದಲ್ಲಿ ತೈಜಸಜೀವನಿಗೆ, ಶರಣ–ಐಕ್ಯಸ್ಥಲಗಳು ಕಾರಣ ಶರೀರದಲ್ಲಿ ಪ್ರಾಜ್ಞಜೀವನಿಗೆ ಆಶ್ರಯುವಾಗಿರುವವು.

ಷಡ್ವಿಧ ಭಕ್ತಿಗಳು

ಶಿವನ ಸ್ವಪ್ರಕಾಶತೆಯ ರೂಪವಾದ ಚಿಚ್ಛಕ್ತಿಯು ಲಿಂಗಗತವಾಗಿ ಲಿಂಗದ ಆರುಪ್ರಕಾರಗಳನ್ನನುಸರಿಸಿ ಆರು ತೆರನಾದಂತೆ, ಆ ಶಕ್ತಿಯೇ ಅಂಗಗತವಾಗಿ ಭಕ್ತಿಯೆನಿಸಿ ಅಂಗದ ಆರು ಪ್ರಕಾರಗಳನ್ನನುಸರಿಸಿ ಆರು ತೆರನಾಯಿತು. ಆರು ವಿಧದ ಶಕ್ತಿಯು ಆರು ಲಿಂಗಗಳಲ್ಲಿ ನೆಲಿಸಿರುವಂತೆ ಆರು ವಿಧದ ಭಕ್ತಿಯು ಆರು ಅಂಗಗಳಲ್ಲಿ ನೆಲಿಸಿರುವದು.

ಜಲವು ಮಧುರಾದಿ ಷಡ್ರಸಗಳಲ್ಲಿ ಸೇರಿ, ಅವವುಗಳ ಸ್ವರೂಪವಾಗಿರುವಂತೆ, ಭಕ್ತಿಯು ಭಕ್ತಾದಿ ಷಟ್‌ಸ್ಥಲಗಳಲ್ಲಿ ಸೇರಿ ಪರಿಣಮಿಸುತ್ತಿರುವದು.

ಅಂಗಗಳ ಶಕ್ತಿ ಅಂದರೆ ಭಕ್ತಿಯು ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನ ಭಕ್ತಿ, ಅನುಭವಭಕ್ತಿ, ಆನಂದಭಕ್ತಿ, ಸಮರಸಭಕ್ತಿ ಎಂಬ ಆರು ರೂಪಗಳಿಂದ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳಲ್ಲಿ ವಿರಾಜಿಸುತ್ತಿರುವದು. ಮುಂದೆ ಸಂಯೋಗವಿಧಿಯಲ್ಲಿ ಲಕ್ಷಣ–ಪ್ರಕಾರಗಳು ವಿವರಿಸಲ್ಪಡುವವು.

ಷಡ್ವಿಧ ಭಕ್ತಿಯುಕ್ತ ಷಡಂಗಸ್ಥಲಗಳ ಸ್ವರೂಪ (ನಿವೃತ್ತಿ ಕ್ರಮ)

ಭಕ್ತ– ಶರೀರ, ಪ್ರಾಣ, ವಸ್ತುಸಮೂಹ ಎಲ್ಲವೂ ಸತ್ಯವೆಂಬಂತೆ ತೋರುತ್ತಿದ್ದರೂ ಅಸ್ಥಿರವೆಂದು ತಿಳಿದು ಅವುಗಳಿಂದ ನಿವೃತ್ತಿಗೊಳಿಸಿದ ಚಿತ್ತವನ್ನು ಸದ್ಭಕ್ತಿಯ ಕ್ರಿಯಾಚರಣೆಯಲ್ಲಿ ತೊಡಗಿಸಿ ನಿರ್ವಿಕಾರನಾದವನು.

ಮಹೇಶ:— ಆಸ್ತಿಕ್ಯಬುದ್ಧಿ, ಲಿಂಗಪೂಜಾದಿ ನಿತ್ಯವ್ರತ, ಸತ್ಯ-ಧರ್ಮ ಶೌಚಾದಿಗಳ ಆಚರಣೆ, ಸಚ್ಚರಿತ್ರೆ, ಲಿಂಗನಿಷ್ಠಾಭಕ್ತಿ ಉಳ್ಳವನಾಗಿ ವೀರವ್ರತ ತತ್ಪರನಾದವನು.

ಪ್ರಸಾದಿ:— ತಾನು ಅನುಭವಿಸುವ ಇಂದ್ರಿಯ ಭೋಗ ಪದಾರ್ಥಗಳನ್ನು ಮೊದಲು ಪ್ರತಿಯೊಂದು ಇಂದ್ರಿಯ ಮುಖದಿಂದ ಲಿಂಗಕ್ಕೆ ಸಮರ್ಪಿಸಿ, ಬಳಿಕ ಅದನ್ನು ಲಿಂಗ ಮುಖದಿಂದ ಅವಧಾನ ಭಕ್ತಿಪೂರ್ವಕವಾಗಿ ಪ್ರಸಾದವಾಗಿ ಪರಿಗ್ರಹಿಸುವನು.

ಪ್ರಾಣಲಿಂಗಿ:— ಪ್ರಾಣ-ಇಂದ್ರಿಯುಗಳು ನಾನು ನನ್ನವು ಎಂಬ ಭ್ರಮಿತವಾದ ವ್ಯಾಮೋಹವನ್ನು ತ್ಯಜಿಸಿ, ಇವೆಲ್ಲವು ಲಿಂಗಮಯವಾದುವೆಂಬ ಅನುಭವವನ್ನು ಹೊಂದುತ್ತ ತದೇಕ ಧ್ಯಾನಾಸಕ್ತ ಮಾನಸನಾದವನು.

ಶರಣ:— ಜ್ಞಾನಿಯಾಗಿ, ಜ್ಞಾನಪ್ರಕಾಶಬಲದಿಂದ ನಾನೂ ನನ್ನ ದೇಹೇಂದ್ರಿಯಾದಿಗಳೂ ಸ್ವತಃ ಲಿಂಗರೂಪವಾಗಿರುವೆವು' ಎಂದು ದೃಢಪಡಿಸಿಕೊಂಡು ಸಕಲ ವಿಷಯುಗಳಿಂದ ಕೂಡಿದ್ದರೂ ವಿಶುದ್ಧನಾದವನು; ಶುದ್ಧವಾದ ಆನಂದಭಕ್ತಿಯುಳ್ಳವನು.

ಐಕ್ಯ:— ನಾನು ನೀನೆಂಬ ಭೇದವು, ದೇಹ-ಪ್ರಾಣ-ಇಂದ್ರಿಯುಗಳೆಂಬ ಭೇದ ವ್ಯವಹಾರವು ಭ್ರಾಂತಿಯಿಂದಾದವುಗಳು. ಅಂದರೆ ಅಭೇದದಲ್ಲಿ ಕೂಡಿದ ಭೇದವುಳ್ಳವುಗಳು; ಯಥಾಕ್ರಮವಲ್ಲ ಈ ಭೇದವು ನನ್ನಲ್ಲಿ ಇಲ್ಲವೇ ಇಲ್ಲ. ಎಂಬ ಭಾವ ಬೆಳಗಿ ಶಿವಾದ್ವೈತಭಾವದಿಂದ ಸಮರಸಭಕ್ತಿಯ ಸುಖಸ್ವರೂಪವನ್ನು ಪಡೆದಿರುವವನು.

ಈ ರೀತಿಯಾಗಿ ಶುದ್ಧಜೀವನಿಗೆ ಶಿವತೇಜಸ್ಸಿನಿಂದ ಕೂಡಿದ ಆರು ಆಶ್ರಮಗಳಾಗಿರುವ ಭಕ್ತಾದಿಯಾದ ಆರು ಅಂಗಸ್ಥಲಗಳ ಭಿನ್ನವಾದ ಆಚಾರ ಸ್ವರೂಪದ ವಿವರವಿರುವದು.

ಆತ್ಮಾದಿ ಷಡಂಗಗಳು

ಆತ್ಮ, ಆಕಾಶ, ವಾಯು, ಅಗ್ನಿ, ಜಲ, ಭೂಮಿ ಈ ಷಡಂಗಗಳು ಕ್ರಮವಾಗಿ ಒಂದರಿಂದೊಂದು ಉದಿಸಿದವು. ಇವು ಷಡಾಶ್ರಮಿಗಳಾದ ಷಟ್‌ಸ್ಥಲಗಳಿಗೆ ಅಂಗಗಳಾಗಿರುವವು.

ಐಕ್ಯಸ್ಥಲಕ್ಕೆ ಆತ್ಮಾಂಗವು, ಶರಣಸ್ಥಲಕ್ಕೆ ಆಕಾಶಾಂಗವು,
ಪ್ರಾಣಲಿಂಗಿಸ್ಥಲಕ್ಕೆ ವಾಯ್ವಂಗವು, ಪ್ರಸಾದಿಸ್ಥಲಕ್ಕೆ ಅಗ್ನ್ಯಂಗವು,
ಮಹೇಶಸ್ಥಲಕ್ಕೆ ಜಲಾಂಗವು, ಭಕ್ತಸ್ಥಲಕ್ಕೆ ಭೂಮ್ಯಂಗವು.

ಷಟ್‌ಸ್ಥಲಗಳಲ್ಲಿ ಬಿಂದು, ನಾದ–ಕಲಾಭೇದದಿಂದ, ದೇಹ, ಪ್ರಾಣ ಆತ್ಮ ಭೇದದಿಂದ ವರ್ಗಗಳಾಗಿರುವವು.

ಬಿಂದುವಿಗೆ ಭಕ್ತ–ಮಹೇಶಸ್ಥಲಗಳು
ನಾದಕ್ಕೆ ಪ್ರಸಾದಿ, ಪ್ರಾಣಲಿಂಗಿಸ್ಥಲಗಳು
ಕಲೆಗೆ ಶರಣ-ಐಕ್ಯಸ್ಥಲಗಳು ಸಂಬಂಧಿಸಿರುವವು.

ಇದರಂತೆ ದೇಹಕ್ಕೆ ಭಕ್ತ,- ಮಹೇಶ (ಇವುಸ್ಥೂಲ)
ಪ್ರಾಣಕ್ಕೆ ಪ್ರಸಾದಿ-ಪ್ರಾಣಲಿಂಗಿ (ಇವುಸೂಕ್ಷ್ಮ)
ಆತ್ಮಕ್ಕೆ ಶರಣ,-ಐಕ್ಯ (ಇವು ಕಾರಣ) ಸೇರಿರುವವು.

ಕ್ರಿಯಾಜ್ಞಾನಾತ್ಮಕ ವಿಭಾಗಗಳು

ಭಕ್ತ–ಮಹೇಶ–ಪ್ರಸಾದಿಸ್ಥಲಗಳು ಕ್ರಿಯಾತ್ಮಕವಾಗಿಯೂ ಪ್ರಾಣಲಿಂಗಿ ಶರಣ ಐಕ್ಯಸ್ಥಲಗಳು ಜ್ಞಾನಾತ್ಮಕವಾಗಿಯೂ ಇರುವವು. ಇಲ್ಲಿ ಹೀಗೆ ಹೇಳುವದರಿಂದ ಮೊದಲಿನ ಮೂರರಲ್ಲಿ ಜ್ಞಾನವೇ ಇಲ್ಲವೆಂತಲೂ ಮುಂದಿನ ಮೂರರಲ್ಲಿ ಕ್ರಿಯೆ ಇಲ್ಲವೆಂತಲೂ ತಿಳಿಯಬಾರದು. ವೀರಶೈವ ಸಿದ್ಧಾಂತದಲ್ಲಿ ಜ್ಞಾನ-ಕ್ರಿಯೆಗಳೆರಡೂ ಒಂದರೊಳಗೊಂದು ಸೇರಿ ನೆರವಾಗಿ ಸಮುಸಮುಚ್ಚಯರೂಪದಿಂದ ಮುಕ್ತಿಗೆ ಸಾಧನವಾಗಿರುವವು. ಕ್ರಮಸಮುಚ್ಚಯದಿಂದಲ್ಲವು. ಶಿವಸ್ವರೂಪ ಜ್ಞಾನವಿಲ್ಲದೆ ಶಿವನ ಧ್ಯಾನಾದಿಕ್ರಿಯೆಗಳನ್ನು ಮಾಡಲಿಕ್ಕಾಗುವದಿಲ್ಲ. ಜ್ಞಾನವಿಲ್ಲದ ಕ್ರಿಯೆಯು ನಿಷ್ಫಲವು. ಹಾಗೆಯೇ ಪ್ರರಬ್ರಹ್ಮವೇ ನಾನೆಂಬ ಜ್ಞಾನವು ಆದ ಮಾತ್ರಕ್ಕೆ ಮುಕ್ತಿಯಾಗ ಲಾರದು. ಯಾವದಾದರೊಂದು ವಸ್ತುವಿನ ಜ್ಞಾನದಿಂದ ಆ ವಸ್ತು ಕೈ ಸೇರಲಾರದು. ಅದರ ಪ್ರಾಪ್ತಿಗೆ ಅಗತ್ಯವಾದ ಕ್ರಿಯೆ ಬೇಕು. ಆದ್ದರಿಂದ ಕ್ರಿಯೆಯಿಲ್ಲದ ಜ್ಞಾನ ವಾದರೂ ನಿಷ್ಪ್ರಯೋಜಕವು.

ಒಬ್ಬ ಕಾಲಿಲ್ಲದವನು ಒಬ್ಬ ಕಣ್ಣಿಲ್ಲದವನು ಒಬ್ಬೊಬ್ಬರೇ ಬೇರೆಬೇರೆಯಾಗಿ ಪಟ್ಟಣಕ್ಕೆ ಹೋಗಲಾರರು. ಇಬ್ಬರೂ ಕೂಡಿಕೊಂಡು ಒಬ್ಬರಿಗೊಬ್ಬರು ಸಹಾಯ ವಾದರೆ ಹೋಗುವರು ; ಜ್ಞಾನವು ಹೆಳವನಂತೆಯೂ, ಕ್ರಿಯೆಯು ಕುರುಡನಂತೆ ಯೂ ಇರುವವು. ಆದ್ದರಿಂದ ಜ್ಞಾನವಿಲ್ಲದ ಕರ್ಮಿಯೂ ಕರ್ಮವಿಲ್ಲದ ಜ್ಞಾನಿಯು ಮುಕ್ತಿನಗರವನ್ನು ಸೇರಲಾರರು. ಅವೆರಡೂ ಕೂಡಿದರೆ ಮಾತ್ರ ಮೋಕ್ಷಮಾರ್ಗ ಕ್ರಮಣ.

‘ ಕರ್ಮದಿಂದ ಮುಕ್ತಿಯಿಲ್ಲ ’ ವೆಂಬ ಶ್ರುತಿವಾಕ್ಯವು ಜ್ಞಾನವಿಲ್ಲದ ಕರ್ಮ ವನ್ನು ಇಲ್ಲವೆ ಯಜ್ಞಾದಿ ಪಶುಕರ್ಮವನ್ನು ನಿಷೇಧಿಸುವದು. ಜ್ಞಾನಯುಕ್ತವಾದ ಶಿವಕ್ರಿಯೆಯನ್ನು ನಿಷೇಧಿಸುವದಿಲ್ಲ. ಜ್ಞಾನಕ್ರಿಯೆಗಳಿಗೆ ಒಂದೇ ಫಲವಿದೆ.

ಈ ರೀತಿಯಾಗಿ ವೀರಶೈವರು ಜ್ಞಾನಕ್ರಿಯೆಗಳೆರಡೂ ಮುಕ್ತಿಗೆ ಸಾಧನಗಳೆಂದು ಹೇಳಿದ್ದಾರೆ. ಷಟ್‌ಸ್ಥಲಾಚರಣೆಯು ಜ್ಞಾನಕ್ರಿಯಾತ್ಮಕವಾಗಿರುವದು. ಒಂದನ್ನೊಂದುಳಿದು ಇನ್ನೊಂದರಿಂದಲೇ ಆಚರಿಸಲು ಬಾರದು.

ಹಾಗಾದರೆ ಸ್ಥಲಗಳನ್ನು ಮೂರು ಕ್ರಿಯಾತ್ಮಕ ಮೂರು ಜ್ಞಾನಾತ್ಮಕ ಎಂದು ಮೇಲೆ ಹೇಳಿದುದರ ಅರ್ಥವೇನು?' ಎಂದು ಕೇಳಬಹುದು. ಇಲ್ಲಿ ಮುಖ್ಯ ಗೌಣ ರೀತಿಯಿದೆ. ಭಕ್ತಮಹೇಶಪ್ರಸಾದಿ ಸ್ಥಲಗಳಲ್ಲಿ ಕ್ರಿಯೆಯು ಪ್ರಧಾನವಾಗಿದ್ದು ಜ್ಞಾನವು ಅದರ ಅಂಗವಾಗಿರುವದು. ಪ್ರಾಣಲಿಂಗಿಶರಣಐಕ್ಯಸ್ಥಲಗಳಲ್ಲಿ ಜ್ಞಾನವು ಮುಖ್ಯವಾಗಿ ಕ್ರಿಯೆಯು ಅದರಂಗವಾಗಿದೆ. ಹೀಗೆ ಮೊದಲು ಮೂರು ಕ್ರಿಯಾತ್ಮಕ ಮುಂದಿನ ಮೂರು ಜ್ಞಾನಾತ್ಮಕ ಅಂಗಸ್ಥಲಗಳೆಂದು ಹೇಳಲಾಗಿದೆ. ಹಾಗು ಎಲ್ಲ ಸ್ಥಲಗಳಲ್ಲಿಯೂ ಜ್ಞಾನಕ್ರಿಯೆಗಳ ಸಮಾವೇಶವು ಇರುವದರಿಂದ ಸಮಸಮುಚ್ಚಯವಾದಕ್ಕೂ ಬಾಧೆಯಿಲ್ಲವು.

ಐಕ್ಯದಿಂದ ಆರಂಭಿಸಿದ ಷಟ್‌ಸ್ಥಲಗಳನ್ನು ಲಕ್ಷಿಸಿ ಹೇಳುವದು ಪ್ರವೃತ್ತಿ ಕ್ರಮವಾಗಿರುವದು. ಅದಕ್ಕೆ ವಿರುದ್ಧವಾಗಿ ಭಕ್ತದಿಂದ ಆರಂಭಿಸಿ ಐಕ್ಯದವರೆಗೆ ಹೇಳುವದು ನಿವೃತ್ತಿ ಕ್ರಮವಾಗಿರುವದು. ಹೀಗೆ ಷಟ್‌ಸ್ಥಲಗಳ ವಿವರವನ್ನು ಸಂಕ್ಷೇಪವಾಗಿ ನಿರೂಪಿಸಲಾಯಿತು.

ಶಿವಾದ್ವೈತ ತತ್ವಜ್ಞಾನಿಯು ಅಜ್ಞಾನ ಗ್ರಂಥಿಯನ್ನು ಭೇದಿಸುತ್ತಾನೆ.

೫. ಲಿಂಗಾಂಗ ಸಂಯೋಗವಿಧಿ ನಿರೂಪಣೆ.

ಅತ್ಯಂತ ನಿಶ್ಚಿತವಾದ ಅರ್ಥವುಳ್ಳ ಮತ್ತು ರಹಸ್ಯವಾದ ಹಾಗು ಗುರೂಪದೇಶದಿಂದ ಅನುಭವಸಿದ್ಧವಾಗಿರುವ ಲಿಂಗಾಂಗ ಸಂಯೋಗವಿಧಿಯನ್ನು ಇಲ್ಲಿ ಅರಿತುಕೊಳ್ಳಬೇಕಾಗಿದೆ.

ಲಿಂಗಾಂಗ ಸಂಯೋಗ:— ಶಿವನೇ ಲಿಂಗರೂಪಿಯಾಗಿರುವನು; ಬದ್ಧನಾದ ಜೀವಾತ್ಮನೇ ಅಂಗನಾಗಿರುವನು. ಲಿಂಗಾಂಗ ರೂಪವಾದ ಶಿವಾತ್ಮರ ಚೆನ್ನಾದ ಯೋಗವೇ ಅಂದರೆ ತಾದಾತ್ಮ್ಯರೂಪದಿಂದ (ಹಾಲು ನೀರು ಕೂಡಿದಂತೆ) ಕೂಡುವದೇ ಸಂಯೋಗವು.

ಜೀವಾತ್ಮನ ಶಿವತ್ವ:— ಜೀವಾತ್ಮನು ಪರಮಶುದ್ಧನು. (ಉಪಾಧಿವಶದಿಂದ ಮಲಿನನೆನಿಸಿದರೂ ಸ್ವಭಾವತಃ ಪರಿಶುದ್ಧನು.) ತ್ರಿಮಲರಹಿತ್ಮನು, ನಿತ್ಯನು

ನಿರಂಜನನು, ಶಾಂತನು, ಶಿವನ ಅಂಶಸ್ವರೂಪನು ಆಗಿರುವದರಿಂದ ಈತನು ಶಿವನೇ ಆಗಿರುವನು. ಶಿವನು ಸ್ವಶಕ್ತಿಯ ಸಂಕೋಚರೂಪದಿಂದ, ಮಲತ್ರಯ ಸಂಬಂಧದ, ಮೂರು ಶರೀರಗಳ ಭೇದದಿಂದ ಸ್ವಸ್ವರೂಪದ ಅವಕುಂಠಿತತ್ವದಿಂದ ಜೀವಭಾವ ಹೊಂದುವನು. ಪುನಃ ಸ್ವಶಕ್ತಿಯು ವಿಕಾಸವಾಗಲು ಅಂದರೆ ಜೀವಗತ ಶಕ್ತಿಯು ಭಕ್ತಿಯಾಗಿ ಪರಿಣಮಿಸಲು, ಮಲತ್ರಯದೂರವಾಗಿ ಶರೀರತ್ರಯ ರಹಿತನಾಗಿ ಸ್ವಸ್ವರೂಪದ ಆನಂದರಸಪೂರಿತನಾಗಿ ಶಿವನೇ ಆಗಿಬಿಡುವನು. ಆದುದರಿಂದ ಜೀವಾತ್ಮನೆಂದರೆ ಶಿವನೇ ಅಲ್ಲದೆ ಬೇರೆಯಲ್ಲವು. ಹಲವು ಪ್ರಮಾಣಗಳಿಂದ ಜೀವಾತ್ಮನ ಶಿವತ್ವವು, ಯಾವ ಮತದ ಅಭಿಪ್ರಾಯದಿಂದಲೂ ನಿವಾರಿಸಲ್ಪಡಲು ಆಗದೆಂದು ಸಿದ್ಧವಾಗುವದು.

ಜೀವಾತ್ಮನು ಶಿವನ ಅಂಗವು:— ಆತ್ಮನು ಶಿವನಲ್ಲಿ ಸಮರಸಹೊಂದಲು ಯೋಗ್ಯನು(ಅಂಗೀಕೃತನು) ಆಗಿರುವದರಿಂದ ಶಿವನ ಅಂಗವಾಗಿರುವನು. ಸರ್ವಜ್ಞತ್ವ, ತೃಪ್ತಿ, ಅನಾದಿಬೋಧ, ಸ್ವತಂತ್ರತ್ವ, ಅಲುಪ್ತಶಕ್ತಿಮತ್ವ, ಅನಂತಶಕ್ತಿಮತ್ವ ಎಂಬ ಶಿವನ ಅಸಾಮಾನ್ಯ ಷಡ್ವಿಧ ಶಕ್ತಿಗಳಿಂದ ಶಿವನ ಅಂಗವು ಉಪಲಕ್ಷಿಸಲ್ಪಡುವದರಿಂದ ಆತ್ಮನೇ ಶಿವನಂಗವೆಂಬಲ್ಲಿ ಸಂಶಯವಿಲ್ಲವು. ಅಂಗ ಪದವು ರೂಢಿಯಲ್ಲಿ ಶರೀರವೆಂಬ ಅರ್ಥವುಳ್ಳದ್ದಾಗಿದೆ. ಪೃಥ್ವಿ ಮೊದಲು ಮಾಡಿ ಜೀವಾತ್ಮದ ವರೆಗಿರುವ ಸಮಸ್ತ ವಸ್ತು ಸಮುದಾಯವು ಶಿವನ ಶರೀರವೆಂದು ಉಪನಿಷದ್ವಾಕ್ಯವಿರುವದರಿಂದ ಜೀವಾತ್ಮನು ಶಿವಾಂಗವೆನ್ನುವಲ್ಲಿ ಸಂದೇಹವೇನು? ಅದಲ್ಲದೆ ಇಲ್ಲಿ ಹೇಳಿದ ಸರ್ವಜ್ಞತ್ವಾದಿ ಶಿವನ ಷಡಂಗಗಳೇ ಭಕ್ತಾದಿ ಷಡಂಗಸ್ಥಲಗಳಾಗಿರುವವೆಂದು ಆಗಮಗಳ ಪ್ರತಿಪಾದನೆ ಇರುವದರಿಂದ ಜೀವನು ಅಂಗಪದವಾಚ್ಯನಾಗಲು (ಶಕ್ತಿ ಪಾತದಿಂದ ಶುದ್ಧನಾಗಲು) ತನ್ನ ಕಿಂಚಿಜ್ಞತ್ವಾದಿ ಕ್ತಿಗಳಾಗಿ ಪರಿಣಮಿಸಿ, ಶಿವಷಡಂಗಗಳಾಗುವವು. ಅಂತಹ ಶಕ್ತಿ ವಿಶಿಷ್ಟನಾದ ಜೀವನು ಶಿವನಲ್ಲದೆ ಮತ್ತೇನು ?

ಲಿಂಗಾಂಗಸ್ಥಲಗಳ ಸಂಬಂಧಸ್ವರೂಪ—ಶಿವನೇ ಲಿಂಗಸ್ಥಲವೆಂದು ಹೇಳಿದೆ. ಅದು ತನ್ನ ಶಕ್ತಿ ಭೇದದಿಂದ ಬಹುಪ್ರಕಾರವಾದರೂ ಆ ಲಿಂಗಸ್ಥಲಗಳೆಲ್ಲವೂ ಶಕ್ತನಾದ ಶಿವ ಆಗಿರುವವು. ಹಾಗೆಯೆ ಅಂಗಸ್ಥಲವು. ಬಹುರೂಪವಾಗಿದ್ದರೂ. ಅವೆಲ್ಲ ಭಕ್ತಿವಿಷ್ಟನಾದ ಆತ್ಮನೇ ಆಗಿರುವವು.

ಶಿವನು ಶಕ್ತಿಯುಕ್ತನಾಗಿ ಉಪಾಸ್ಯತ್ವಕ್ಕಾಗಿ ಯಾವ ಯಾವ ರೂಪ ಹೊಂದುವನೋ, ಆತ್ಮನು ಭಕ್ತಿಯುಕ್ತನಾಗಿ ತನ್ನ ಉಪಾಸಕತ್ವದ ಸಿದ್ಧಿಗಾಗಿ, ಆಯಾ ಉಪಾಸ್ಯರೂಪಕ್ಕನುಗುಣವಾದ ರೂಪಗಳನ್ನೇ ಧರಿಸುವನು ಶಿವನು

ಸಾಧ್ಯತ್ವ ಇಲ್ಲವೆ ಗುರು ಆದರೆ, ಆತ್ಮನು ಅದಕ್ಕನುಗುಣವಾಗಿ ಸಾಧಕತ್ವ ಇಲ್ಲವೆ ಶಿಷ್ಯನಾಗುವನು. ಹೀಗೆಯೇ ಪೂಜ್ಯ-ಪೂಜಕ, ಉಪಾಸ್ಯ-ಉಪಾಸಕ, ಸಾಧ್ಯ--ಸಾಧಕ, ಗುರು--ಶಿಷ್ಯ ಈ ಜೋಡಿಗಳು ಕ್ರಮವಾಗಿ ಶಿವ-ಆತ್ಮ ಜೋಡಿಯ ರೂಪಗಳೇ ಆಗಿವೆ.

ಸಂಯೋಗ ಸದ್ಭಾವ:—ಲಿಂಗಾಂಗಗಳ ಚೆನ್ನಾದ (ತಾದಾತ್ಮ್ಯರೂಪದ) ಯೋಗವೇ (ಕೂಡುವಿಕೆಯೇ) ಸಂಯೋಗವು. ಭ್ರಮರವನ್ನು ನೆನೆನೆನೆದು ಕೀಟವು ಭ್ರಮರವಾಗುವಂತೆ ಭಕ್ತಿಯುಕ್ತನಾದ ಅಂಗನು ವೀರಶೈವ ಶಾಸ್ತ್ರದಂತೆ ಲಿಂಗ ಧ್ಯಾನದಿಂದ ಲಿಂಗನಾಗುವನು. ಅಂಗನು ಲಿಂಗನಾಗುವದೇ ಮುಕ್ತಿಯು. ಇದರ ಸ್ವರೂಪದ ವಿವರಣೆ ಮುಂದೆ ಬರುವದು.

ಭಕ್ತಿ ಪ್ರಾಶಸ್ತ್ಯ:—ಮೇಲೆ ಹೇಳಿದ ಮುಕ್ತಿಗಿಂತಲೂ ಭಕ್ತಿಯು ಬಹಳ ಶ್ರೇಷ್ಠವಾದುದೆಂದು ಸತ್ಯಾರ್ಥವನ್ನು ಪ್ರತಿಪಾದಿಸುವ ಶೃತಿಯ ಮತವಿರುವದು. ಮುಕ್ತಿಯು ಆ ಪರಮ ಭಕ್ತಿಯ ಒಡಲೊಳಗೆ ಅಡಗಿಯೇ ಇರುವದು. ಷಟ್ ಸ್ಥಲಸಿದ್ಧಾಂತದಲ್ಲಿ ಭಕ್ತಿಗೆ ಕೊಟ್ಟ ಸ್ಥಾನವು ಮತ್ತಾವ ಸಿದ್ಧಾಂತದಲ್ಲಿಯೂ ಕೊಡಲ್ಪಟ್ಟಿಲ್ಲ. ಬೇರೆಡೆಯಲ್ಲಿ ಭಕ್ತಿಯ ಸಂಪೂರ್ಣ ಸ್ವರೂಪದ ವಿವೇಚನೆಯಾಗದಿದ್ದುದೇ ಇದಕ್ಕೆ ಕಾರಣವು. ಶಿವಶಕ್ತಿಯ ಸಂಕೋಚ ಭಾವವೇ ಬಂಧ! ಅದರ ವಿಕಾಸಭಾವವೇ ಮೋಕ್ಷ! ಇವೆರಡನ್ನು ಮೀರಿ ಸರ್ವತೋಮುಖವಾಗಿ ಬೆಳಗುವ ಶಿವನ ಪ್ರಕಾಶವೇ ಭಕ್ತಿಯು. ವೀರಶೈವ ಶರಣರು ಇಂತಹ ಭಕ್ತಿಯನ್ನೇ ಬಯಸಿದರು; ಮುಕ್ತಿಯನ್ನಲ್ಲ. ವೀರಶೈವ ಸಿದ್ಧಾಂತದ ಗುಟ್ಟನ್ನು ತಿಳಿಯದವರಿಗೆ ಭಕ್ತಿಯು ಪಂಚಮ ಪುರುಷಾರ್ಥವೆಂದರೆ ಆಶ್ಚರ್ಯವೆನಿಸಬಹುದು. ವೀರಶೈವನಿಗೆ ಆಶ್ಚರ್ಯವಲ್ಲ. ಈ ಪಂಚಮ ಪುರುಷಾರ್ಥವಾದ ಭಕ್ತಿಯ ಪೂರ್ಣವಾದ ಅನುಭಾವವು ಬಸವೇಶ್ವರನಿಗೆ ಅಳವಟ್ಟಿತ್ತು. ಅದರಿಂದಲೇ ಗುರುಗಳು ಜಂಗಮರು ಆನಂದ ಪರವಶರಾಗಿ ಆತನನ್ನು ಗುರುಲಿಂಗಜಂಗಮ ಸ್ವರೂಪನೆಂದು ಮನವಾರೆ ಕೊಂಡಾಡಿದ್ದಾರೆ. ಭಕ್ತಿಯ ವಿಶೇಷ ವಿಚಾರವು ಮುಂದೆ ವಿವರಿಸಲ್ಪಡುವದು.

ಲಿಂಗಾಂಗ ಸಂಯೋಗ ವಿಧಿ

ಇದುವರೆಗೆ ಲಿಂಗಾಂಗ ಸಂಯೋಗ ಸ್ವರೂಪವನ್ನು ವಿವರಿಸಿದುದಾಯಿತು. ಇನ್ನು ಸಂಯೋಗವಿಧಿಯನ್ನು ತಿಳಿಯಬೇಕು. ವಿಧಿಯೆಂದರೆ ಕರ್ತವ್ಯರೂಪವಾದ ಉಪದೇಶ ಅಥವಾ ಕ್ರಿಯಾತ್ಮಕವಾದ ಶ್ರವಣ, ಅಭ್ಯಾಸ ಮುಂತಾದವು ಎಂದ ನಿಶ್ಚಿತವಾಗಿದೆ.

ಜೀವನು ಪುಣ್ಯ-ಪಾಪಗಳ ಫಲವನ್ನುಂಡು ಬೇಸತ್ತಿರುವನು. ಶರೀರ ತ್ರಯ ಗಳಲ್ಲಿ ಮುಸುಕಿಟ್ಟುಕೊಂಡು ಬೇಸತ್ತಿರುವನು. ಈ ತನ್ನ ಕಾರ್ಯದ ತೊಡಕನ್ನು ಕಡೆಮೆಟ್ಟುವದಕ್ಕಾಗಿ, ಅವಿದ್ಯೆಯ ನಿವೃತ್ತಿ ಮಾಡಿಕೊಳ್ಳುವದಕ್ಕಾಗಿ ಕರ್ತವ್ಯರೂಪವಾದ ಉಪದೇಶವನ್ನು ಬಯಸಿರುವನು. ಈ ಬಯಕೆಯ ತೀವ್ರತೆಯಿಂದ, ಸರ್ವದಾ ಲಿಂಗಾಂಗಸಂಯೋಗಪರಾಯಣನೂ, ಶಿವಸಿದ್ಧಾಂತದ ಮುಖ್ಯ ಕರ್ತೃವೂ ಶಿವವಿದ್ಯಾಬೋಧಕನೂ, ಅವಿದ್ಯಾ ಭೇದಕನೂ ಶಿವಸ್ವರೂಪನೂ ಆದ ಗುರುವನ್ನು ಸಮೀಪಿಸಿ ನಿಜಸುಖದ ಮಾರ್ಗಕ್ಕಾಗಿ ಅತನ ಕೃಪೆಯನ್ನು ಬೇಡುವನು.

ಜೀವಾತ್ಮನು ತಾನು ಶಿವನ ಅಂಶರೂಪನೇ ಆದರೂ ಅತನು ಅವಿದ್ಯಾಬಲದಿಂದ ಸಂಸಾರವೇ ತನ್ನ ಸ್ಥಾನವೆಂಬ ಭಾವನೆಯುಳ್ಳವನಾಗಿದ್ದಾನೆ. ಆದರಿಂದ ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದು ಎಂಬ ಭ್ರಾಂತಿ ತಲೆದೋರಿರುವದು. ಈ ರೀತಿ ತನ್ನ ಶಿವಾಂಶವನ್ನು ಶಕ್ತಿಯನ್ನು ಮರೆತು ಕರ್ಮದಿಂದ ಬಳಲಿ ಕಡೆಗೆ ಕರುಣಾಮೂರ್ತಿಯಾದ ಗುರುವನ್ನು ಕುರಿತು 'ನಾ ಯಾರು?' ಎನ್ನುವನು. ಗುರುವು ತತ್ವಮಸಿ ಅಂದರೆ, 'ತತ್' ಪರಶಿವಸ್ವರೂಪನೇ, 'ತ್ವಂ' ನೀನು 'ಅಸಿ' ಇರುವೆ ಎಂಬ ವೇದವಾಕ್ಯದಿಂದಲೇ ಉತ್ತರಿಸುವನು. 'ಶಿಷ್ಯನೇ ಅವಿದ್ಯೆಯಿಂದುಂಟಾದ, ದೇಹೇಂದ್ರಿಯಾದಿ ಸಮುದಾಯವು ಯಥಾರ್ಥವೆಂಬ ಭ್ರಾಂತಿ ನಿನಗಾಗಿದೆ. (ಅವಿದ್ಯಾಕಾರ್ಯವು ತನ್ನಷ್ಟಕ್ಕೆ ಯಥಾರ್ಥವು. ಜೀವನ ವಿಷಯಕ್ಕೆ ಯಥಾರ್ಥವಲ್ಲ) ಯಥಾರ್ಥದಂತೆ ನಿನ್ನನ್ನು ಆವರಿಸಿವೆ. ಈ ಭ್ರಾಂತಿಯ ವಿನಾಶಕ್ಕಾಗಿ ನೀನು ಲಿಂಗಾಂಗ ಸಂಯೋಗ ನಿಷ್ಠೆಯನ್ನು ಹೊಂದು.' ಎಂದು ಹೇಳುವನು.

ಲಿಂಗಾಂಗ ಸಂಯೋಗಸ್ವರೂಪದ ಪರ್ಯಾಯವು ಕೆಳಗಿನ ಪಟ್ಟಿಯಂತಿರುವದು.

ಲಿಂಗ	ಅಂಗ	ಸಂಯೋಗ
ತತ್	ತ್ವಂ	ಅಸಿ.
ಸತ್	ಚಿತ್	ಅನಂದ
ನಾದ	ಬಿಂದು	ಕಳೆ.
ಮಂತ್ರ	ಕ್ರಿಯೆ (ಅರ್ಚನೆ)	ಅನುಷ್ಠಾನ
ಪುರುಷ	ಪ್ರಕೃತಿ	ಈಶ್ವರ
ಅ	ಉ	ಮ್.
ಹ್ರಸ್ವ (ಓಂಕಾರದ)	ದೀರ್ಘ	ಪ್ಲುತ
ಶಬ್ದ	ಅರ್ಥ	ಶಬ್ದಾರ್ಥ

ಲಿಂಗಾಂಗ ಸ್ವರೂಪರಾದ ಗುರುಶಿಷ್ಯರು ಬಿಸಿಲು ನೆರಳುಗಳಂತೆ ಎಡೆಬಿಡದೆ ಕೂಡಿಕೊಂಡಿರಬೇಕು. ಅದು ಸಂಯೋಗಕ್ಕೆ ನಿದರ್ಶಕವೂ ಸಾಧಕವೂ ಆಗಿರುತ್ತದೆ. 'ಅಹಂ ಬ್ರಹ್ಮಾಸ್ಮಿ' ಎಂಬ ಶೃತಿವಾಕ್ಯವೂ ಲಿಂಗಾಂಗಸಂಯೋಗವನ್ನು ಪ್ರತಿಪಾದಿಸುತ್ತದೆ. 'ಅಹಂ' ಅಂಗ, 'ಬ್ರಹ್ಮ' ಲಿಂಗ, 'ಅಸ್ಮಿ' ಸಂಯೋಗ ಹೀಗೆ ಉಕ್ತವಾಗುವದು.

ಶಕ್ತಿಯೇ ಅಂಗವು, ಶಕ್ತನಾದ ಶಿವನೇ ಲಿಂಗವು. ಎಂಬ ಆಗಮಪ್ರಮಾಣಗಳಿಂದ ಲಿಂಗಾಂಗಗಳು ಕ್ರಮವಾಗಿ ಶಿವ-ಶಕ್ತಿಗಳೆಂತಲೂ, ಶಿವ-ಜಗತ್ತುಗಳೆಂತಲೂ, ಶಿವಭಕ್ತಿಗಳೆಂತಲೂ ಅನೇಕ ರೀತಿಯಿಂದ ಪ್ರತಿಪಾದಿಸುತ್ತಾರೆ. ಮಾಯಿಪ್ರಭುವೂ ಆಗಮಪ್ರಮಾಣಕ್ಕನುಸರಿಸಿ ಲಿಂಗಾಂಗಗಳ ಮತ್ತು ಅವುಗಳ ಸಂಯೋಗವನ್ನು ಸಚ್ಚಿದಾನಂದ ರೂಪದಿಂದ ಪ್ರತಿಪಾದಿಸಿರುವನು.

ದೀಕ್ಷೆ

ಗುರುವು ಶಿಷ್ಯನಿಗೆ ಲಿಂಗಾಂಗ ಸಂಯೋಗದ ತಿಳುವಳಿಕೆಯನ್ನು ಮಾತ್ರ ಮಾಡಿಕೊಟ್ಟರೆ, ಅಥವಾ ಶಿಷ್ಯನಿಗೆ ಆ ಜ್ಞಾನ ಮಾತ್ರ ಉಂಟಾದರೆ ಆತನ ಜೀವತ್ವವು ನೀಗಲಾರದು. ಆ ಜ್ಞಾನಕ್ಕೆ ತಕ್ಕ ಹಾಗು ಆ ಜ್ಞಾನದೊಡನೆ ಆಚರಿಸಬೇಕಾದ ಕ್ರಿಯೆಗೆ ಆತನು ತಕ್ಕವನಾಗಬೇಕು. ಮತ್ತು ಸಿದ್ಧನಾಗಬೇಕು. ಅಂದರೆ ಅವನಿಗೆ ಆ ಕ್ರಿಯೆಯಲ್ಲಿ ಶ್ರದ್ಧೆಯೂ ಆಸಕ್ತಿಯೂ ಉಂಟಾಗಬೇಕು. ಸಕಲ ಪ್ರಾಣಗಳ ಶಾರೀರಿಕ ಸಹಜ ಕ್ರಿಯೆಗಳಂತೆ ಈ ಶಿವಕ್ರಿಯೆಗಳೂ ಅವನ ದಿನದ ಸಹಜ ಕ್ರಿಯೆಗಳಂತೆ ಅನಿವಾರ್ಯ ಮತ್ತು ಅಗತ್ಯವೆಂದು ಅವು ತನಗೆ ಅಭಿನ್ನವೆಂದು ಭಾವಿಸುವಷ್ಟು, ಅವನ (ಆ ಶಿಷ್ಯನ) ಮನಸ್ಸಿನ ಮೇಲೆ ಒಂದು ಪರಿಣಾಮವು ಉಂಟಾಗಬೇಕು. ಅಂತಹ ಪರಿಣಾಮ ಉಂಟಾಗುವ ಸಂಸ್ಕಾರ ನಡೆಯಬೇಕು. ಅದನ್ನು ಗುರುವು ನಡಿಸಿದರೆ ಮಾತ್ರ ಹಾಗೆ ಆಗುವನು. ಆ ಸಂಸ್ಕಾರವೇ ದೀಕ್ಷೆ; ಅದುವೇ ಕರ್ತವ್ಯರೂಪವಾದ ಉಪದೇಶವು. ಆ ಉಪದೇಶವು ಈ ಕರ್ತವ್ಯರೂಪವಾದ ಉಪದೇಶದ [ದೀಕ್ಷೆಯ] ಒಂದು ಭಾಗವು ಎಂದು ಹೇಳಬಹುದು! 'ದೀಕ್ಷೆ' ಅಂದರೆ ಶಿಷ್ಯನಿಗೆ ಲಿಂಗಸಂಬಂಧವನ್ನು ಮಾಡುವದು, ಮಲತ್ರಯಗಳನ್ನು ನಾಶ ಮಾಡುವದು ಎಂದು ಅರ್ಥವುಳ್ಳದ್ದು ಆಗಿರುವದು.

ತ್ರಿವಿಧ ದೀಕ್ಷೆ

೧) ಗುರುವಿನ ಹಸ್ತವು ಶಿಷ್ಯನ ಮಸ್ತಕವನ್ನು ಸಾಂತ್ವನ ಕರುಣಾಭಾವ ಪೂರ್ವಕವಾಗಿ ಸ್ಪರ್ಶಿಸುವದು [ಹಸ್ತ ಮಸ್ತಕ ಸಂಯೋಗವು] ವೇಧಾದೀಕ್ಷೆಯು.

೨) ಶಿಷ್ಯನ ಕರ್ಣದಲ್ಲಿ ಶಿವಮಂತ್ರವನ್ನು ಗುರುವು ಉಪದೇಶಿಸುವುದು ಮಂತ್ರದೀಕ್ಷೆಯು.

೩) ಶಿಷ್ಯನ ಹಸ್ತದಲ್ಲಿ ಗುರುವಿನಿಂದ ವಿಧಿಪೂರ್ವಕ ಸಂಸ್ಕರಿಸಲ್ಪಟ್ಟ ಶಿವ ಲಿಂಗವು ಕೊಡಲ್ಪಡುವದೇ ಕ್ರಿಯಾದೀಕ್ಷೆಯು.

ದೀಕ್ಷೆಯು ಜೀವನ ಮಲಪಾಶಗಳನ್ನೆಲ್ಲ ಕತ್ತರಿಸುವದರಿಂದ ಕತ್ತರಿಯೆನಿಸಿ ಕೊಳ್ಳುವದು. ಪಾಶಮುಕ್ತನಾದ ಜೀವನು ಶುದ್ಧಜೀವನು ಅಥವಾ ಅಂಗನು ಆಗುವನು.

ಗುರುವರನು ಈ ಮೇಲಾದ ದೀಕ್ಷೆಯನ್ನು ಅನುಗೊಳಿಸಿ, ಶಿವಾತ್ಮ ವಿದ್ಯೆ ಯನ್ನು ಬೋಧಿಸಿ, ನಿಲುಕಡೆಗೊಳಿಸಿ, ಅವಿದ್ಯಾಪಾಶವನ್ನು ಹರಿದು ಶಿಷ್ಯನ ಮಸ್ತಕದಲ್ಲಿರುವ ಶಿವಕಳೆಯನ್ನು ಧ್ಯಾನಿಸುವನು. ಅಂದರೆ ಆವ್ಹಾನ ಗೈಯು ವನು. ಶಿವಕಳೆಯಂತೆ ಭಾವವೂ ಭಾವದಂತೆ ಮನಸ್ಸೂ, ಮನಸ್ಸಿನಂತೆ ದೃಷ್ಟಿಯೂ ದೃಷ್ಟಿಯಂತೆ ಸ್ಥಲವೂ ಇರುವದರಿಂದ ಆ ಶಿವಕಳೆಯ ಚಿಂತನೆಯ ಮೂಲಕ ವಾಗಿ, ಕ್ರಮವಾಗಿ ಶಿವಕಳೆಯಿಂದ ಭಾವ-ಮನ-ದೃಷ್ಟಿಗಳು ಬಲಿತು ಬೆರೆತು ಸ್ಥೂಲಗೊಂಡು ಕರದಲ್ಲಿಯ ಇಷ್ಟಲಿಂಗವು ಸ್ಥಲವಾಗುವದು. ಅದರಿಂದ ಪರಮ ಪವಿತ್ರವಾದ ಘನವಾದ ಉಪಾಸ್ಯತ್ವದಿಂದ ಪ್ರಕಾಶಿಸುವದು. ಸಾರಾಂಶವೇನಂದರೆ ಸಮಸ್ತ ತತ್ವಗಳನ್ನು ಒಳಗೊಂಡು ಅವುಗಳಿಗೆ ಆಶ್ರಯವಾಗಿರುವ ಸೂಕ್ಷ್ಮವಾದ ಶಿವಕಳೆಯನ್ನು ಯೋಗ್ಯವಾದ ವಿಧಾನದಿಂದ ಆಕರ್ಷಿಸಿ ಲಿಂಗದಲ್ಲಿ ಇರಿಸುವದು.

ಲಿಂಗದರ್ಶನ

ಎಳ್ಳಿನಲ್ಲಿ ಎಣ್ಣೆ ಇರುವಂತೆ, ಕಟ್ಟಿಗೆಯಲ್ಲಿ ಅಗ್ನಿ ಇರುವಂತೆ ಹಾಲಿನಲ್ಲಿ ತುಪ್ಪವಿರುವಂತೆ, ಶಿಷ್ಯನ ಆತ್ಮನಲ್ಲಿಯೇ ಒಳಗೂ ಹೊರಗೂ ಜ್ಯೋತಿರ್ಮಯ ವಾಗಿ ತುಂಬಿಕೊಂಡಿರುವ ಶಿವಲಿಂಗಮೂರ್ತಿಯನ್ನು ಶಿವಸ್ವರೂಪನಾದ ಗುರುವು ತೋರಿಸುವನು. ಆ ಶಿವಲಿಂಗ ಮೂರ್ತಿಯನ್ನು ನೋಡುವ ಅಂದರೆ ಅರಿಯುವ ಪರಮಸೂಕ್ಷ್ಮವೂ ಲಿಂಗಭಾವಯುಕ್ತವೂ ಆದ ಲಕ್ಷಣವುಳ್ಳ ಲಿಂಗಭಕ್ತಿಯನ್ನು ಅದರೊಡನೆ ಮಾಡಿಸುವನು. ನಿಷ್ಕಲವೂ ನಿರುಪಾಧಿಕವೂ ಆದ ಲಿಂಗದರ್ಶನ ದಿಂದ ಶಿಷ್ಯನ [ಜೀವಾತ್ಮನ] ಸರ್ವಕರ್ಮಗಳೂ ಕ್ಷೀಣಿಸುವವು. ಅವಿದ್ಯಾಗ್ರಂಥಿಯು ಭೇದಿಸಲ್ಪಡುವದು. ಸಂಶಯಗಳೂ ಸಂಕಲ್ಪಗಳೂ ಛೇದಿಸಲ್ಪಡುವವು. ಇವುಗಳ ಸರ್ವನಾಶವೇ ಶಿಷ್ಯನು ಸಾಧನೆಯಿಂದ ಸಿದ್ಧಿಸಬೇಕಾದ ಸಾಧ್ಯವಾಗಿರುವದು. ಆ ಮೇಲದು ಅತ್ಯಂತ ಸುಲಭವಾಗಿರುವದು.

ಅಂಗದಲ್ಲಿ ಲಿಂಗ ಸಂಯೋಜನ

ಬ್ರಹ್ಮಜ್ಞಾನಿಗಳು ಹೇಳುವ ಬ್ರಹ್ಮರಂಧ್ರದಲ್ಲಿ–ಕಮಲಕೋಶದಲ್ಲಿ ಇರುವ ಶುದ್ಧ, ನಿಷ್ಕಳ, ಜ್ಯೋತಿಸ್ವರೂಪ ಬ್ರಹ್ಮವಾಗಿರುವ ಲಿಂಗವನ್ನು ದೀಕ್ಷೆಯಿಂದ ತೇಜಸ್ವಿಯಾದ ಶಿಷ್ಯನ ಅಂಗದಲ್ಲಿ ಶಿವಸ್ವರೂಪನಾದ ಗುರುವು ಮೇಲೆ ಹೇಳಿದ ದೀಕ್ಷಾವಿಧಾನದಿಂದ ಸಂಯೋಜನಗೊಳಿಸುವನು.

ಶಂಕರನು ತ್ರಿಪುರಗಳನ್ನು ಏಕಕಾಲದಲ್ಲಿ ಒಮ್ಮೆಲೇ ಸುಟ್ಟುಬಿಟ್ಟಂತೆ, ಗುರುವು ಶಿಷ್ಯನ ಮೂರು ಶರೀರಗಳಲ್ಲಿರುವ ಮೂರುಮಲಗಳನ್ನು ಮೂರು ದೀಕ್ಷಾಕ್ರಮಗಳಿಂದ ಏಕಕಾಲದಲ್ಲಿ ಸುಟ್ಟು ಬಿಡುವನು. ವೇಧಾ-ಮನು-ಕ್ರಿಯೆಗಳೆಂಬ ತ್ರಿವಿಧ ದೀಕ್ಷೆಗಳೇ ಜ್ವಾಲೆಯು. ಲಿಂಗವೇ ಜ್ವಾಲಾಸ್ವರೂಪವು. ಈ ಅಗ್ನಿ ಸಂಬಂಧದಿಂದ ಮೂರೂ ಬಗೆಯ ಮಲಗಳನ್ನು ಸುಟ್ಟು, ಮೂರು ಅಂಗಗಳಲ್ಲಿಯೂ ಮೂರು ಲಿಂಗಗಳನ್ನು ದೀಕ್ಷಾಬಲದಿಂದಲೇ ಗುರುವು ಸಂಯೋಜನ ಮಾಡುವನು.

ಆತ್ಮಾಂಗವಾದುದರಿಂದ ಕಾರಣಾಂಗವೆನಿಸುವ ಯೋಗಾಂಗದಲ್ಲಿ ವೇಧಾದೀಕ್ಷೆಯಿಂದ ಭಾವಲಿಂಗವನ್ನು

ಅಂತರಂಗವಾದುದರಿಂದ ಸೂಕ್ಷ್ಮಾಂಗವೆನಿಸುವ ಭೋಗಾಂಗದಲ್ಲಿ ಮಂತ್ರದೀಕ್ಷೆಯಿಂದ ಪ್ರಾಣಲಿಂಗವನ್ನು

ಬಹಿರಂಗವಾದುದರಿಂದ ಸ್ಥೂಲಾಂಗವೆನಿಸುವ ತ್ಯಾಗಾಂಗದಲ್ಲಿ ಕ್ರಿಯಾದೀಯಿಂದ ಇಷ್ಟಲಿಂಗವನ್ನು

ಶ್ರೀ ಗುರುವು ಸಂಯೋಜಿಸುವನು.

ತ್ರಿವಿಧ ಜೀವನು

ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿರುವ ಜೀವನಿಗೆ ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ಹೆಸರುಗಳು. ಈ ಮೂಬಗೆಯ ಜೀವನೇ ಜೀವಾತ್ಮ, ಅಂತರಾತ್ಮ, ಪರಮಾತ್ಮ ಎಂದೂ ಹೇಳಲ್ಪಡುವನು.

ವಿಶ್ವ (ಜೀವಾತ್ಮ) ನೆಂಬ ಹೆಸರಿನಿಂದ ಸ್ಥೂಲಶರೀರದಲ್ಲಿ ಜಾಗ್ರತಾವಸ್ಥೆಯಲ್ಲಿ ಇಷ್ಟಲಿಂಗವನ್ನು ಉಪಾಸಿಸುವನು.

ತೈಜಸ (ಅಂತರಾತ್ಮ)ನೆಂಬ ಹೆಸರಿನಿಂದ ಸೂಕ್ಷ್ಮ ಶರೀರದಲ್ಲಿ ಸ್ವಪ್ನಾವಸ್ಥೆಯಲ್ಲಿ ಪ್ರಾಣಲಿಂಗವನ್ನು ಉಪಾಸಿಸುವನು.

ಪ್ರಾಜ್ಞ (ಪರಮಾತ್ಮ) ನೆಂಬ ಹೆಸರಿನಿಂದ ಕಾರಣಶರೀರದಲ್ಲಿ ಸುಷುಪ್ತಾವಸ್ಥೆಯಲ್ಲಿ ಭಾವಲಿಂಗವನ್ನು ಉಪಾಸಿಸುವನು.

ದೀಕ್ಷೆಯ ಮಹಿಮೆ

ಮಲವು ಅನಾದಿಯಾಗಿದೆ. ಅದು ಸಂಸಾರಕ್ಕೆ ಮೂಲವಾಗಿದೆ. ದೀಪಕೆ ಆವರಣವನ್ನು ಹಾಕಲು ಕತ್ತಲೆ ಮುಸಕುವಂತೆ ಮಲವು ಆತ್ಮನ ಜ್ಞಾನಶಕ್ತಿ

ಯನ್ನು ಮುಸುಕಿ ಅಜ್ಞಾನವನ್ನುಂಟು ಮಾಡಿರುವದು. ಈ ಅಜ್ಞಾನದ ಪರಿಣಾಮ ದಿಂದ ಆತ್ಮನು ಅನಾತ್ಮವಾದ ವಸ್ತುಗಳನ್ನು ಕಂಡು, ಕೇಳಿ, ಮೂಸಿ, ಮುಟ್ಟಿ ಸವಿದು ಅವುಗಳನ್ನು ದೊರಕಿಸಿಕೊಳ್ಳುವದಕ್ಕಾಗಿ ಅನೇಕ ಸತ್ಕರ್ಮ-ದುಷ್ಕರ್ಮ ಗಳನ್ನು ಮಾಡಿ ಸುಖದುಃಖಗಳನ್ನು ಅನುಭವಿಸುವನು. ಒಮ್ಮೆ ವಿಶೇಷ ಸುಕೃತ ದಿಂದ ಶಿವಾನುಗ್ರಹವಾಗಿ ಮಲವು ಪರಿಪಕ್ವವಾದೊಡನೆ ಶಿವಸ್ವರೂಪದ ಗುರುವು ಅನುಗ್ರಹದಿಂದ ಮಾಡುವ ದೀಕ್ಷೆಯು ಆತ್ಮನ ಆ ಬಂಧವನ್ನು ದೂರಮಾಡುತ್ತದೆ. ಅದು ಬಂಧಕ್ಕೆ ಕಾರಣವಾದ ಮಲಮಾಯಾ ಕರ್ಮಗಳಿಗಿಂತಲೂ, ಅತ್ಯಧಿಕವಾದ ಶಿವತೇಜಸ್ಸನ್ನು ಪ್ರಾಪ್ತಗೊಳಿಸುತ್ತದೆ. ಆದ್ದರಿಂದ ಜೀವನ ಶಿವತ್ವವನ್ನು ತಡೆದ ಬಂಧವನ್ನು ಪರಿಹರಿಸುವದಕ್ಕೆ ಶಿವದೀಕ್ಷೆಯಲ್ಲದೆ ಬೇರೆ ಉಪಾಯವಿಲ್ಲವು.

ಮೂರು ಮಲಗಳು

ಶಿವಶಕ್ತಿಯ ಪ್ರಕಾರಗಳಾದ ಇಚ್ಛಾ-ಜ್ಞಾನ-ಕ್ರಿಯಾಶಕ್ತಿಗಳು ಸಂಕೋಚ ಹೊಂದುತ್ತ ಮಲತ್ರಯಗಳಾಗಿರುತ್ತವೆ. ಇವುಗಳಿಂದ ಆವರಿಸಲ್ಪಟ್ಟ ಶಿವನೇ ಸಂಸಾರಿ ಜೀವನೆನಿಸಿರುವನು. ಆಣವ, ಮಾಯಾ ಕಾರ್ಮಿಕ ಇವು ಮೂರು ಮಲಗಳು.

ಆಣವ ಮಲವುಃ—ಸರ್ವಾತ್ಮಕನು, ಸವತ್ರ ಪರಿಪೂರ್ಣನು ಎಂಬ ವೃತ್ತಿಗೆ ಕಾರಣನಾದ ಪರಶಿವನ ಸಂಕಲ್ಪರೂಪವಾದ ಇಚ್ಛಾಶಕ್ತಿಯು ಸಂಕೋಚವನ್ನು ಹೊಂದಿ ಆತ್ಮನ ಸಂಸಾರಕ್ಕೆ ಮೂಲಕಾರಣವಾಯಿತು. ಅಜ್ಞಾನಗ್ರಂಥಿಯೆಂದು ಅವಿದ್ಯೆಯೆಂದು ಕರೆಯಿಸಿಕೊಂಡಿತು. ಇದು ಜೀವನಿಗೆ ಕಾರಣಶರೀರರೂಪದಿಂದ ಮೊದಲನೆಯ ಆವರಣವಾಯಿತು. ಆತ್ಮನಿಗೆ ತಾನು ಶಿವನಲ್ಲವೆಂಬ ಬುದ್ಧಿಯನ್ನೂ ಅಣುರೂಪವಾದ ದೇಹಾದಿಗಳೇ ತಾನೆಂಬ ಬುದ್ಧಿಯನ್ನೂ ಹುಟ್ಟಿಸಿ ಆತ್ಮನನ್ನು ಅಣುರೂಪನನ್ನಾಗಿ ಮಾಡಿತು. ಆದುದರಿಂದ ಇದು ಆಣವಮಲವೆಂಬ ಹೆಸರನ್ನು ಪಡೆಯಿತು. ಇದರಲ್ಲಿ ಒಂದು ಅವಿದ್ಯಾತತ್ವವಿದೆ.

ಮಾಯಾಮಲವುಃ—ಪರಶಿವನ ಜ್ಞಾನಶಕ್ತಿಯು ಸಂಕೋಚಗೊಂಡು ಸರ್ವ ಜ್ಞತೆಗೆ ಬದಲಾಗಿ ಕಿಂಚಿಜ್ಞತ್ವವನ್ನು ಆತ್ಮನಲ್ಲಿ ಉಂಟುಮಾಡಿ ಮಾಯಾಮಲವೆ ನಿಸಿತು. ಸೂಕ್ಷ್ಮಶರೀರರೂಪದಿಂದ ಜೀವನಿಗೆ ಎರಡನೆಯ ಆವರಣವಾಯಿತು. ಇದರಲ್ಲಿ ಆರು ಮಿಶ್ರತತ್ವಗಳಿವೆ.

ಕಾರ್ಮಿಕ ಮಲವುಃ—ಪರಶಿವನ ಕ್ರಿಯಾಶಕ್ತಿಯು ಸಂಕುಚಿತವಾಗಿ, ಸರ್ವ ಕರ್ತೃತ್ವಕ್ಕೆ ಬದಲಾಗಿ ಕಿಂಚಿತ್‌ಕರ್ತೃತ್ವವನ್ನು ಆತ್ಮನಿಗೆ ಉಂಟುಮಾಡಿ, ಜೀವ ನಿಂದ ಶುಭಾಶುಭ ಕರ್ಮಗಳನ್ನು ಮಾಡಿಸುವ ಕಾರ್ಮಿಕ ಮಲವೆನಿಸಿತು. ಇದು ಜೀವನಿಗೆ ಸ್ಥೂಲ ಶರೀರರೂಪದಿಂದ ಮೂರನೆಯ ಆವರಣವಾಯಿತು. ಇದರಿಂದ

ಜೀವನು ಪುಣ್ಯಪಾಪಗಳನ್ನು ಮಾಡುತ್ತಾ ಸುಖ ದುಃಖವ್ಯವಹಾರವುಳ್ಳವನಾದನು. ಇದರಲ್ಲಿ ೨೪ ಅಶುದ್ಧ ತತ್ವಗಳಿರುವವು.

ಈ ಮೂರು ಮಲಗಳನ್ನು ಮೂರು ಬಗೆಯ ದೀಕ್ಷೆಯಿಂದ ಗುರುವು ದೂರ ಮಾಡಿ ಮೂರು ಶರೀರಗಳಲ್ಲಿಯೂ ಮೂರು ಲಿಂಗಗಳ ಸಂಯೋಜನ ಮಾಡುವನು. ಆಗ ಮಲರೂಪ ಶರೀರಗಳು ನಷ್ಟವಾಗಿ ಲಿಂಗಮಯ ಶರೀರಗಳು ಉಂಟಾಗುವವು. ಲಿಂಗಮಯ ಶರೀರದ ಜೀವನು ಅಂಗನೆಂದು ಹೇಳಿಸಿಕೊಳ್ಳುವನು. ಅಂಗನು ಕ್ರಮವಾಗಿ ಉರಿಯೊಳಗಿನ ಕರ್ಪುರದಂತೆ ಲಿಂಗದಲ್ಲಿ ಬಯಲಾಗುವನು. ಅದು ಮೋಕ್ಷವು.

ಉರಿಯಲ್ಲಿ ಕರ್ಪುರವು ಸುಟ್ಟು ಸ್ವರೂಪನಾಶ ಹೊಂದಿದಂತೆ ಲಿಂಗದಲ್ಲಿ ಬಯಲಾಗುವ ಆತ್ಮನ ಸ್ವರೂಪ ನಾಶವಾಗುವದೇ ಮೋಕ್ಷವೆಂದು ತಿಳಿಯಬಾರದು. ಇಲ್ಲಿ ಸ್ವರೂಪನಾಶದ ಅರ್ಥವನ್ನು ತಾತ್ವಿಕವಾಗಿ ಬಿಡಿಸಬೇಕು. ಪೃಥ್ವಿತತ್ವವು ಅಗ್ನಿತತ್ವದಿಂದ ಹುಟ್ಟಿದೆ. ಪಾರ್ಥಿವ ವಸ್ತುಗಳು ನಾಶವಾಗುವದೆಂದರೆ ಪೃಥ್ವಿಸಂಬಂಧವಾದ ಕಾರ್ಯೋತ್ಪತ್ತಿರೂಪವನ್ನು ಬಿಟ್ಟು, ತಮ್ಮ ಕಾರಣದ (ಅಗ್ನಿಯ) ಸ್ವರೂಪವನ್ನು ಹೊಂದುವವಲ್ಲದೆ, ಅವುಗಳ ಸ್ವರೂಪನಾಶವಾಗುವದೆಂದಲ್ಲ.

ಪಾರ್ಥಿವ ಪದಾರ್ಥ ಕರ್ಪುರ ಸುಟ್ಟಿತೆಂದರೆ ತನಗೆ ಕಾರಣವಾದ ಅಗ್ನಿಯ ರೂಪಹೊಂದಿತೆಂದರ್ಥ. ಹಾಗೆಯೇ ಶಕ್ತನಾದ ಶಿವನ ಕಾರ್ಯೋತ್ಪತ್ತಿ ಸ್ವರೂಪವಾದ ಆತ್ಮನು ತನಗೆ ಕಾರಣನಾದ ಶಿವನ ಸ್ವರೂಪವನ್ನು ಹೊಂದುವನಲ್ಲದೆ ಅವನ ಸ್ವರೂಪನಾಶವಾಗುವದಿಲ್ಲವು. ಕಾರ್ಯಕಾರಣಗಳ ನಿತ್ಯತ್ವವನ್ನು ವೀರಶೈವರು ಮನ್ನಿಸುವರು. ಅವೆರಡರಲ್ಲಿ ಭೇದವನ್ನು ಎಣಿಸುವದಿಲ್ಲ.

ದೀಕ್ಷೆಯ ಬಗೆಗೆ ಕೆಲವರಿಗೆ ಸಾಮಾನ್ಯವಾದ ವಿಚಾರಮಾತ್ರವಿದೆ. "ಮೋಕ್ಷಕ್ಕೆ ಜ್ಞಾನವೇ ಕಾರಣವು. ತತ್ವಮಸ್ಯಾದಿ ವೇದವಾಕ್ಯಗಳಿಂದ ಜ್ಞಾನವು ಸಿದ್ಧಿಸುವದು. ದೀಕ್ಷೆಯಿಂದ ಜ್ಞಾನವಾಗಲಿ ಶಿವಸ್ವರೂಪವಾದ ಮೋಕ್ಷವಾಗಲಿ ಹೇಗೆ ಸಂಭವಿಸೀತು? ಬಹಳವಾದರೆ ದೀಕ್ಷೆಯು, ಪ್ರಾಕೃತಬ್ರಾಹ್ಮಣರ ಉಪನಯನವು ಅವರನ್ನು ಬ್ರಹ್ಮವಿದ್ಯಾಧಿಕಾರಿಗಳನ್ನಾಗಿ ಮಾಡುವಂತೆ, ಶಿವಾತ್ಮವಿದ್ಯಾಧಿಕಾರಿಯನ್ನಾಗಿ ಮಾಡಬಹುದು" ಇದುವೇ ಅವರ ಆ ಸಾಮಾನ್ಯವಿಚಾರ!

ಆದರೆ ದೀಕ್ಷೆಯು ಉಪನಯನದಂತೆ ಎಂದು ಹೇಳುವದು ಅವಿಚಾರತನವು! ಪ್ರಾಕೃತಬ್ರಾಹ್ಮಣರ ಎಂಟನೆಯ ವರ್ಷದಲ್ಲಿ ಆಗುವ ಉಪನಯನವು ಅವನನ್ನು ಕರ್ಮಾಧಿಕಾರಿಯನ್ನಾಗಿ ಮಾಡುವದು. ಯಜ್ಞಯಾಗಾದಿಗಳನ್ನು ಕವ್ಯಗಳನ ಅನಂತ ಕರ್ಮಗಳನ್ನು ಸ್ವರ್ಗಭೋಗಕ್ಕಾಗಿ ಎಸಗಲು ಪಾತ್ರನಾಗಬಹುದು. ಇಹ

ರಿಂದ ಮೋಕ್ಷಕಾರಣವಾದ ಜ್ಞಾನವಾಗಲಿ, ಅದರಿಂದ ಮುಕ್ತಿಯಾಗಲಿ ಲಭಿಸಲಾರದು. ಪುಣ್ಯಕ್ಷಯವಾದ ಬಳಿಕ ಸ್ವರ್ಗಭೋಗ ದೂರವಾಗಿ ಮತ್ತೆ ಐಹಿಕ ದುಃಖವು ಒದಗತಕ್ಕದ್ದೇ! ಇದನ್ನು ತಿಳಿದ ಪ್ರಾಕೃತ ಬ್ರಾಹ್ಮಣರಾದರೂ ಅಂತಹ ಸ್ವರ್ಗಭೋಗಕ್ಕೆ ಕಾರಣವಾದ ಶಿಖೆಯನ್ನು ಯಜ್ಞೋಪವೀತವನ್ನು ಯಜ್ಞಸಹಧರ್ಮಿಣಿಯಾದ ಪತ್ನಿಯನ್ನು ತ್ಯಜಿಸಿ ಸನ್ಯಾಸಿಯಾಗಿ ಜ್ಞಾನನಿಷ್ಠೆಯಿಂದ ಮೋಕ್ಷವನ್ನು ಪಡೆಯಲು ಹವಣಿಸುತ್ತಾರೆ ಅಂದಬಳಿಕ ಉಪನಯನ ಕಾಲಕ್ಕೆ ಸ್ವೀಕೃತವಾದ ಕರ್ಮಮಾರ್ಗವೂ, ಲಾಂಛನಗಳೂ, ಆ ಮೂಲಕ ಉಪನಯನವೂ ಮೋಕ್ಷಕ್ಕೆ ಸಾಧನವಲ್ಲವೆಂದು ತಾನೇ ಸಿದ್ಧವಾಗುವದು. ಮಲತ್ರಯ ನಾಶವೇ ಮುಕ್ತಿಮಾರ್ಗದ ಬಾಗಿಲು ತೆರೆಯುವದು. ಮಲನಾಶವು ಶಿವದೀಕ್ಷೆಯಿಂದ ಸಾಧ್ಯವಲ್ಲದೆ ಅನ್ಯ ಉಪಾಯಗಳಿಂದ ಇಲ್ಲವೆಂಬುದು ಪ್ರಮಾಣಗಳಿಂದ ಕಂಡುಬರುವದು. ತತ್ವಮಸ್ಯಾದಿಜ್ಞಾನೋಪದೇಶವು ಕೂಡ ದೀಕ್ಷೆಯ ಒಂದು ಅಂಗವಾಗಿದೆ. ದೀಕ್ಷಿತನು ಮುಕ್ತಾತ್ಮನೆಂಬುದೇ ವೀರಶೈವ ಸಂಪ್ರದಾಯವು. ಮುಂದಿನ ಜ್ಞಾನ ಕ್ರಿಯೆಗಳು ಅನುಭವಕ್ಕೆ ಮತ್ತು ಲೋಕ ಹಿತಾರ್ಥಕ್ಕೆ! ಪ್ರಾಕೃತಮತಗಳಲ್ಲಿ ನಾಲ್ಕನೆಯ ಆಶ್ರಮವೆಂದು ಮೋಕ್ಷಸಾಧನೆಗೆ ಅವಶ್ಯವಾದ ಜ್ಞಾನಸಂಪಾದನೆಗೆ ಮುಖ್ಯವೆಂದು ಪ್ರಸಿದ್ಧಿಪಡೆದ ಸನ್ಯಾಸಾಶ್ರಮವೂ ವೀರಶೈವಾಶ್ರಮವೂ ಒಂದೇ ಆಗಿರುವದು. ಅಂದರೆ ಸನ್ಯಾಸವನ್ನು ಪಡೆದ ಪ್ರಾಕೃತನಿಗೂ ದೀಕ್ಷಿತನಾದ ವೀರಶೈವನಿಗೂ ಸಾಮ್ಯವಿದೆಯೆಂದು ಪಾರಮೇಶ್ವರಾಗಮವು ಹೇಳಿದೆ.

ಉಪಾಸನ

ಮೇಲೆ ಹೇಳಿದಂತೆ ಜೀವನು ಸ್ಥೂಲಾದಿ ಮೂರು ಶರೀರಗಳಲ್ಲಿ ಇಷ್ಟಾದಿ ಮೂರು ಲಿಂಗಗಳನ್ನು ಉಪಾಸಿಸುವನು. ಉಪಾಸನೆಯೆಂದರೆ ಇಲ್ಲಿ ತನಗನ್ಯವಾದ ಯಾವದೊಂದು ಮೂರ್ತಿಯನ್ನು ಎದುರಿಟ್ಟುಕೊಂಡು ಧ್ಯಾನಿಸುವದೆಂದು ತಿಳಿಯಬಾರದು. ಅಂಗಪದ ವಾಚ್ಯನಾದ ಜೀವಾತ್ಮನು ತಾನು ಯಾವಾಗಲೂ ಲಿಂಗಸ್ವರೂಪನೇ ಆಗಿರುವೆನೆಂದು ಅನುಸಂಧಾನ ಮಾಡುವದು ಉಪಾಸನವಾಗಿದೆ. ಹೀಗೆ ಉಪಾಸಿಸುವದರಿಂದ ಅಂಗನಲ್ಲಿ (ಜೀವನಲ್ಲಿ) ಶಿವತತ್ವ ಭಾವವು ಪರಿಸ್ಫುಟಗೊಂಡು ಅಭಿವ್ಯಕ್ತವಾಗಿ ಬೆಳಗುವದು. ಇದುವೇ ಲಿಂಗಾಂಗ ಸಂಯೋಗವು, ಈ ಸಂಯೋಗವೇ ದ್ವೈತವಿಲಯ, ದ್ವೈತವಿಲಯವೇ ನಿವೃತ್ತಿ (ಶಿವತ್ವಪ್ರಾಪ್ತಿಯಿಂದಾದ ಜೀವತ್ವದ ನಿವೃತ್ತಿ), ನಿವೃತ್ತಿಯೇ ವಿಶ್ರಾಂತಿ, ವಿಶ್ರಾಂತಿಯೇ ವೀರಶೈವರಿಗೆ ಮೋಕ್ಷರೂಪವಾದ ಪರಮ ಪದವು ಕಾರ್ಯಕಾರಣ ಅಭೇದ ದೃಷ್ಟಿಯಿಂದ ಉಪಾಸನವೇ ಪರಮಪದವೆಂದು ಪ್ರತಿಪಾದಿಸಿದ್ದು ಸಿದ್ಧವಾಯಿತು.

ಈ ವಿವೇಚನೆಯ ಸಾರವೆಂದರೆ ಗುರುವಿನ ಕರ್ತವ್ಯರೂಪವಾದ [ಕ್ರಿಯಾತ್ಮಕವಾದ] ಉಪದೇಶವೆಂಬ ಲಿಂಗಾಂಗ ಸಂಯೋಗವಿಧಿಯಿಂದ ಆತ್ಮನಲ್ಲಿರುವ

ಬೀಜರೂಪವಾದ ಪರಾಶಕ್ತಿಯು ವಿಕಾಸಗೊಂಡು ಒಳಗೂ ಹೊರಗೂ ಹಬ್ಬಿ ವಿಶಾಲವಾಗಿ ಬೆಳೆಗುವದು. ಈ ಭಕ್ತಿಬೀಜಕ್ಕೆ ಆತ್ಮನು ಗರ್ಭಸ್ಥಾನ (ಹೊಲ) ವಾಗಿರುವನು. ಈಶ್ವರನು ಬೀಜ ಅಂದರೆ ಆ ಬೀಜವನ್ನು ವಿಕಾಸಗೊಳಿಸುವವನೂ ವಿಕಾಸಸ್ವರೂಪವಾದ ವೃಕ್ಷವೂ ಆಗಿರುವನು. ಬೀಜಕ್ಕೂ ವೃಕ್ಷಕ್ಕೂ ವೃಕ್ಷದುತ್ಪತ್ತಿಗೆ ಸ್ಥಾನವಾದ ಕ್ಷೇತ್ರಕ್ಕೂ ಯಾವರೀತಿಯಿಂದಲೂ ವಿಯೋಗವಿಲ್ಲದೆ ಸಂಯೋಗವೇ ಇರುವಂತೆ ಲಿಂಗಾಂಗ ಸಂಯೋಗವಿರುವದು. ಅಂಗದ ಹೃದಯವೇ ಲಿಂಗ, ಲಿಂಗದ ಹೃದಯವೇ ಅಂಗ! ವಿಯೋಗವು ಹೇಗೆ ಸಂಭವಿಸುವದು?

ಭಕ್ತಿವೈಭವ

ಲಿಂಗಾಂಗ ಸಂಯೋಗ ಜ್ಞಾನದಿಂದ ಪಡೆದುಕೊಂಡಿದ್ದೆಂದರೆ ಆತ್ಮಕ್ಷೇತ್ರದಲ್ಲಿ ಬೆಳೆಯುವ ಶಿವಾಕಾರವಾದ ವೃಕ್ಷದ ಬೀಜದಂತಿರುವ ಪರಾಭಕ್ತಿಯೇ ಆಗಿರುವದು. ಈ ಭಕ್ತಿಯು ಪರಮವೈಭವಯುತವಾದದ್ದು. ಮೇಲಣ ವಿಷಯ ವಿವೇಚನೆಯಿಂದ ಷಟ್‌ಸ್ಥಲಸಿದ್ಧಾಂತದ ಭಕ್ತಿಯ ವೈಭವದ ಗುಟ್ಟನ್ನು ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ. ಮೋಕ್ಷ ಸಂಪಾದನೆಗಾಗಿ ಬೇರೆ ಬೇರೆ ಮತಶಾಸ್ತ್ರಗಳಲ್ಲಿ ಹೇಳಲಾದ ಆತ್ಮಜ್ಞಾನ, ಆತ್ಮಕ್ರಿಯೆ, ಆತ್ಮತೇಜಸ್ಸು ಮುಂತಾದ ಸಾಧನಗಳೆಲ್ಲ ವೀರಶೈವ ಸಿದ್ಧಾಂತದ ಈ ಭಕ್ತಿಯೆಂಬ ಸಮುದ್ರದ ತೆರೆಗಳೆಂದು ಹೇಳಬಹುದು. ಮೋಕ್ಷವಾದರೂ ಅರ್ಥಾತ್ ನಿತ್ಯಾನಂದವಾದರೂ ಭಕ್ತಿಯ ಒಂದು ಅಂಶವೆಂದು ಹೇಳಿದರೆ ತಪ್ಪಾಗದು. ಆದುದರಿಂದ ವೀರಶೈವ ತತ್ವಜ್ಞರು ಮುಕ್ತಿಯನ್ನು ಗಮನಿಸದೆ ಭಕ್ತಿಯನ್ನೇ ಅಪೇಕ್ಷಿಸುವರು. ಬೀಜದಲ್ಲಿ ವೃಕ್ಷವಿರುವಂತೆ ಭಕ್ತಿಯಲ್ಲಿ ಶಿವನಡಗಿರುವನು. ಭಕ್ತಿಬೀಜದ ವಿಕಾಸಸ್ಥಿತಿಯೇ ಶಿವಸ್ವರೂಪವು. ಇಂತಹ ಭಕ್ತಿವೈಭವವು ವೀರಶೈವ ಸಿದ್ಧಾಂತದ ವೈಶಿಷ್ಟ್ಯವಾಗಿರುವದು.

ಆರುವಿಧ ಭಕ್ತಿ

ಭಕ್ತಿಯು ಅಂಗನ ಷಟ್‌ಸ್ಥಲಗಳಲ್ಲಿ ಷಡ್ವಿಧವಾಗಿರುವದು

ಸದ್ಭಕ್ತಿ (ಶ್ರದ್ಧಾ ಭಕ್ತಿ).—ಜೀವಾತ್ಮನಲ್ಲಿ ಬೀಜರೂಪದಿಂದಿರುವ ಭಕ್ತಿಯು ಸ್ವರೂಪಸದ್ಭಾವವನ್ನು ಹೊಂದಲು (ವಿಕಸನಭಾವವು ಉಂಟಾಗಲು), ಆಚಾರದಲ್ಲಿ ಶ್ರದ್ಧಾಯುಕ್ತವಾಗಿ ಸದ್ಭಕ್ತಿಯೆನಿಸಿಕೊಂಡಿತು. ಈ ಸದ್ಭಕ್ತಿಯಿಂದ ಜೀವಾತ್ಮನಿಗೆ ಆಚಾರಲಿಂಗಯುಕ್ತವಾದ ಭಕ್ತಸ್ಥಲವೆಂಬ ಒಂದನೆಯ ಅಂಗಸ್ಥಲ ಪ್ರಾಪ್ತವಾಯಿತು.

ನೈಷ್ಠ (ನಿಷ್ಠಾ) ಭಕ್ತಿ— ಭಕ್ತಸ್ಥಲದಲ್ಲಿರುವ ಸದ್ಭಕ್ತಿಯು ಗುರುಲಿಂಗ ಜಂಗಮಾದಿಗಳಲ್ಲಿ, ಶಾಸ್ತ್ರಗಳಲ್ಲಿ ನಿಷ್ಠೆಯನ್ನಿರಿಸಿ, ನಿಷ್ಠಾಪೂರ್ಣವಾಗಲು ನೈಷ್ಠಿಕೀಯ ಭಕ್ತಿಯಾಯಿತು. ಇದು ಆತ್ಮನಿಗೆ ಗುರುಲಿಂಗಯುಕ್ತವಾದ ಮಹೇಶಸ್ಥಲವೆಂಬ ಎರಡನೆಯ ಅಂಗಸ್ಥಲವನ್ನು ಉಂಟುಮಾಡಿತು.

ಅವಧಾನ ಭಕ್ತಿ— ಮಹೇಶಸ್ಥಲದ ನೈಷ್ಠಿಕೀಯ ಭಕ್ತಿಯು ಗುರುವಿನಿಂದ ಪ್ರಾಪ್ತವಾದ ಲಿಂಗದಲ್ಲಿ ಲಕ್ಷಪೂರ್ವಕವಾದ ಎಚ್ಚರಿಕೆಯನ್ನು ವಹಿಸಿ ಅಂದರೆ ಅವಧಾನ ಸ್ವರೂಪವನ್ನು ಹೊಂದಿ ಅವಧಾನಭಕ್ತಿಯೆನಿಸಿತು. ಈ ಭಕ್ತಿಯಿಂದ ಆತ್ಮನಿಗೆ ಶಿವಲಿಂಗಯುಕ್ತವಾದ ಪ್ರಸಾದಿಸ್ಥಲವೆಂಬ ಮೂರನೆಯ ಅಂಗಸ್ಥಲವು ಪ್ರಾಪ್ತವಾಯಿತು.

ಅನುಭವಭಕ್ತಿ— ಪ್ರಸಾದಿಸ್ಥಲದಲ್ಲಿರುವ ಅವಧಾನಭಕ್ತಿಯು ತನ್ನ ಆತ್ಮ ಸ್ವರೂಪದಿಂದ ಬೇರೆ ಅಲ್ಲದ ಶಿವಾನುಭವದಿಂದ ಅಂದರೆ ಪ್ರಸಾದಮೂಲಕವಾಗಿ ಉಂಟಾದ ಸ್ವಾನುಭವದಿಂದ ಅನುಭವಭಕ್ತಿಯೆನಿಸಿಕೊಂಡಿತು. ಈ ಭಕ್ತಿಯಿಂದ ಆತ್ಮನಿಗೆ ಚರಲಿಂಗಯುಕ್ತವಾದ ಪ್ರಾಣಲಿಂಗಿಸ್ಥಲವೆಂಬ ನಾಲ್ಕನೆಯ ಅಂಗಸ್ಥಲ ವಾಯಿತು.

ಆನಂದಭಕ್ತಿ— ಪ್ರಾಣಲಿಂಗಿಸ್ಥಲದಲ್ಲಿರುವ ಅನುಭವ ಭಕ್ತಿಯು ಶಿವಾನುಭವದಿಂದುಂಟಾದ ಅಂತರಾನಂದದ ಯೋಗದಿಂದ ಆನಂದಭಕ್ತಿಯೆನಿಸಿಕೊಂಡಿತು. ಈ ಭಕ್ತಿಯಿಂದ ಆತ್ಮನಿಗೆ ಪ್ರಸಾದಲಿಂಗಯುಕ್ತವಾದ ಶರಣಸ್ಥಲವೆಂಬ ಐದನೆಯ ಅಂಗಸ್ಥಲವುಂಟಾಯಿತು.

ಸಮರಸಭಕ್ತಿ— ಶರಣಸ್ಥಲದಲ್ಲಿರುವ ಆನಂದಭಕ್ತಿಯೇ ಅಂತರಾನಂದದ ಮುನ್ನಡೆಯಿಂದ ಉಂಟಾದ ಸಾಮರಸ್ಯದ ಪ್ರಭಾವದಿಂದ ಸಮರಸಭಕ್ತಿಯೆನಿಸಿಕೊಂಡಿತು. ಈ ಭಕ್ತಿಯಿಂದ ಆತ್ಮನಿಗೆ ಮಹಾಲಿಂಗಯುಕ್ತವಾದ ಐಕ್ಯಸ್ಥಲವೆಂಬ ಆರನೆಯ ಅಂಗಸ್ಥಲವು ಸಮನಿಸಿತು.

ಭಕ್ತಿಯು ತಾನು ತನ್ನ ಸ್ಥಳದಲ್ಲಿಯೇ ಇದ್ದರೂ ಈ ಪ್ರಕಾರ ಆರಂಗಗಳ ಯೋಗದಿಂದ ಈಶ್ವರನನ್ನು ಸಾಧಿಸುತ್ತಿದೆ. ಸಾಧಕನಾದ ಜೀವನಿಗೆ ಈ ಭಕ್ತಿಯಿಂದ ಷಟ್‌ಸ್ಥಲಗಳು ಸಾಧಕರೂಪದಿಂದಲೂ, ಆಚಾರಾದಿಯಾದ ಆರುಲಿಂಗಸ್ಥಲಗಳು ಸಾಧ್ಯರೂಪದಿಂದಲೂ ಆತ್ಮನಿಂದ ಹೊಂದಿದವುಗಳಾಗಿವೆ.

ನಿವೃತ್ತಿ ಮಾರ್ಗದಿಂದ ಷಡ್ವಿಧಲಿಂಗಗಳು.

ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ ಹೀಗೆ ಆಚಾರಲಿಂಗ ಮೊದಲಾಗಿ ಹೇಳುವ ಕ್ರಮವು ನಿವೃತ್ತಿಕ್ರಮವು. ಅಂದರೆ ಆಚಾರಲಿಂಗವು ಗುರುಲಿಂಗದಲ್ಲಿ, ಗುರುಲಿಂಗ ಶಿವಲಿಂಗದಲ್ಲಿ, ಶಿವಲಿಂಗ ಚರಲಿಂಗದಲ್ಲಿ, ಚರಲಿಂಗ ಪ್ರಸಾದಲಿಂಗದಲ್ಲಿ, ಪ್ರಸಾದಲಿಂಗ ಮಹಾಲಿಂಗದಲ್ಲಿ ಐಕ್ಯಹೊಂದುವವೆಂಬರ್ಥ !

ನಿವೃತ್ತಿಮಾರ್ಗದಿಂದ ಷಡಂಗಸ್ಥಲಗಳು.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಕ್ರಮವು ನಿವೃತ್ತಿ ಮಾರ್ಗಕ್ರಮವು. ಅಂದರೆ ಭಕ್ತಸ್ಥಲವು ಮಹೇಶನಲ್ಲಿ, ಮಹೇಶವು ಪ್ರಸಾದಿ

ಯಲ್ಲಿ, ಪ್ರಸಾದಿ ಪ್ರಾಣಲಿಂಗಿಯಲ್ಲಿ, ಪ್ರಾಣಲಿಂಗಿ ಶರಣಸ್ಥಲದಲ್ಲಿ, ಶರಣಸ್ಥಲವು ಐಕ್ಯದಲ್ಲಿ ಐಕ್ಯವಾಗುವವೆಂದರ್ಥವು.

ಶಿವಾದ್ವೈತಸಿದ್ಧಾಂತವನ್ನು ತಿಳಿದವನು ಅಜ್ಞಾನಗ್ರಂಥಿಯನ್ನು ಭೇದಿಸುವನು.

೬. ಸರ್ವಾಂಗಲಿಂಗ ಸಾಹಿತ್ಯನಿರೂಪಣೆ.

ವೀರಶೈವನಿಗೆ ಗುರುಗಳು ಉಪದೇಶಮೂಲಕವಾಗಿ ಆತನಲ್ಲಿ ನೆಲೆಗೊಳಿಸಿದ ಲಿಂಗವು, ಅವನ ಎಲ್ಲ ಅಂಗಗಳಲ್ಲಿಯೂ ಎಲ್ಲ ಕಡೆಯಲ್ಲಿಯೂ ಯಾವಾಗಲೂ ಸರ್ವಾಭಿಮುಖವಾಗಿಯೂ ಬೆಳಗುತ್ತಿರುವದು. ಹೀಗೆ ತನ್ಮಯವಾದ ಲಿಂಗಭಾವಕ್ಕೆ ಸರ್ವಾಂಗಲಿಂಗ ಸಾಹಿತ್ಯವೆಂದು ಲಿಂಗತತ್ವಜ್ಞರು ಹೇಳುತ್ತಾರೆ.

ವೀರಶೈವನ ಅಂಗದಲ್ಲಿ ಹಾಗೆ ಪ್ರತಿಷ್ಠಾಪನೆಗೊಳಿಸಲ್ಪಟ್ಟ ಪರಲಿಂಗವೇ ಸರ್ವಮಯವಾಗಿದ್ದರೂ ನಾಮಕ್ರಿಯಾಭೇದದಿಂದ ಬೇರೆಬೇರೆಡೆಯಲ್ಲಿ ಬೇರೆಬೇರೆಯಾಗಿ ಪ್ರಕಾಶಿಸುತ್ತಿರುವದು. ಅಂದರೆ ಆತ್ಮನ ಸ್ಥೂಲ–ಸೂಕ್ಷ್ಮ– ಕಾರಣ ಶರೀರಗಳಲ್ಲಿ ಇಷ್ಟ–ಪ್ರಾಣ–ಭಾವ ಲಿಂಗಗಳಾಗಿರುವದು. ಪಂಚಜ್ಞಾನೇಂದ್ರಿಯಗಳಲ್ಲಿ ಒಂದೊಂದು ಪಂಚ ಕರ್ಮೇಂದ್ರಿಯಗಳಲ್ಲಿ ಒಂದೊಂದಕ್ಕೆ ಜೋಡಾಗಿ ಐದು ಜೋಡಿಗಳಾಗಿವೆ. ಈ ಜೋಡು ಐದರಲ್ಲಿ ಹಾಗು ಹೃದಯದಲ್ಲಿ ಹೀಗೆ ಆರು ಎಡೆಗಳಲ್ಲಿ ಆ ತ್ರಿವಿಧ ಲಿಂಗವೇ ಆಚಾರಾದಿ ಆರು ಬಗೆಯಾಗಿ ಬೆಳಗುತ್ತಿರುವದು.

ಒಂದು ಜ್ಞಾನೇಂದ್ರಿಯ ಒಂದು ಕರ್ಮೇಂದ್ರಿಯ ಇವುಗಳ ಜೋಡಿಯಲ್ಲಿ ಆಯಾ ಇಂದ್ರಿಯ ವಿಷಯಗಳ ಜೋಡಿಯೊಂದು ಪರಸ್ಪರ ಅಭೇದರೂಪವಾಗಿರುವದು. ಇವುಗಳಿಗೆ ಒಂದು ಅಧಿದೈವವಿರುವದು. ಒಂದು ಭೂತಸಂಬಂಧವಿರುವದು. ಹೀಗಿರುವ ಆರು ಐದು ಗುಂಪುಗಳು ಆಚಾರ, ಗುರು, ಶಿವ, ಚರ, ಪ್ರಸಾದ ಎಂಬ ಐದು ಲಿಂಗಗಳಿಗೆ ಆಶ್ರಯವಾಗಿವೆ. ಜ್ಞಾನ ಕರ್ಮೇಂದ್ರಿಯಗಳೆಲ್ಲಕ್ಕೂ ಆಶ್ರಯವಾಗಿರುವ ಹೃದಯವು ಮಹಾಲಿಂಗಕ್ಕೆ ಆಶ್ರಯವಾಗಿರುವದು. ಈ ಸಂಬಂಧದ ವಿವರವು ಕೆಳಗಿನ ಪಟ್ಟಿಯಿಂದ ಚೆನ್ನಾಗಿ ತಿಳಿಯುವದು.

ಜ್ಞಾನೇಂದ್ರಿಯ	ಜ್ಞಾನೇಂದ್ರಿಯ ವಿಷಯ	ಕರ್ಮೇಂದ್ರಿಯ	ಕರ್ಮೇಂದ್ರಿಯ ವಿಷಯ	ಇಂದ್ರಿಯಕ್ಕೆ ಸಂಬಂಧಿಸಿದ ಭೂತ	ಅಧಿದೈವ	ಆಶ್ರಯಿಸಿದ ಲಿಂಗ
ಹೃದಯ	ತೃಪ್ತಿ	ಹೃದಯ	ತೃಪ್ತಿ	ಆತ್ಮ	ಪರಮಾತ್ಮ	ಮಹಾಲಿಂಗ
ಶ್ರೋತ್ರ	ಶಬ್ದ	ವಾಕ್	ವಚನ	ಆಕಾಶ	ಈಶಾನ	ಪ್ರಸಾದಲಿಂಗ
ತ್ವಕ್ಕು	ಸ್ಪರ್ಶ	ಪಾಣಿ	ಆದಾನ	ವಾಯು	ತತ್ಪುರುಷ	ಚರಲಿಂಗ
ನೇತ್ರ	ರೂಪ	ಪಾದ	ಗಮನ	ಅಗ್ನಿ	ಅಘೋರ	ಶಿವಲಿಂಗ
ಜಿಹ್ವೆ	ರಸ	ಗುಹ್ಯ	ಆನಂದ	ಜಲ	ವಾಮದೇವ	ಗುರುಲಿಂಗ
ನಾಶಿಕ	ಗಂಧ	ಗುಧ	ವಿಸರ್ಜನ	ಪೃಥ್ವಿ	ಸದ್ಯೋಜಾತ	ಆಚಾರಲಿಂಗ

ಹೃದಯವು ಜ್ಞಾನ ಕರ್ಮ ಉಭಯಾತ್ಮಕವಾಗಿರುವದು. ಅಂದರೆ ಎಲ್ಲ ಜ್ಞಾನೇಂದ್ರಿಯಗಳಿಗೂ ಎಲ್ಲ ಕರ್ಮೇಂದ್ರಿಯಗಳಿಗೂ ಆಶ್ರಯವಾಗಿರುವದು. ಹೀಗೆ ಅವೆಲ್ಲವುಗಳಿಗೆ ಅವಕಾಶ ಕೊಟ್ಟು ಇಟ್ಟುಕೊಂಡಿರುವದರಿಂದ ಹೃದಯಾಕಾಶವೆಂದು ಪ್ರಜ್ಞರಿಂದ ಹೇಳಲ್ಪಟ್ಟಿದೆ. ಆತ್ಮನು ಆ ಹತ್ತು ಬಾಹ್ಯೇಂದ್ರಿಯಗಳ ವ್ಯವಹಾರವೆಲ್ಲವನ್ನು ಈ ಹೃದಯವೆಂಬ ಅಂತರಿಂದ್ರಿಯ ಮುಖಾಂತರವಾಗಿಯೇ ಕೇಡುಕೊಳ್ಳುವನು. ಆದರಿಂದ ಹೃದಯವು ಜ್ಞಾನಕರ್ಮಾತ್ಮಕವಾದುದೆಂದು ತಿಳಿಯಲ್ಪಡುವದು.

ಪ್ರತಿಯೊಂದು ಇಂದ್ರಿಯವು ಸ್ಥೂಲ--ಸೂಕ್ಷ್ಮ-ಕಾರಣಸ್ವರೂಪದಿಂದ ಇರುವದರಿಂದ ಸ್ಥೂಲ ಇಂದ್ರಿಯ ವರ್ಗವು ಸ್ಥೂಲ ಶರೀರದಲ್ಲಿಯೂ ಸೂಕ್ಷ್ಮ ಇಂದ್ರಿಯ ವರ್ಗವು ಸೂಕ್ಷ್ಮ ಶರೀರದಲ್ಲಿಯೂ ಕಾರಣ ಇಂದ್ರಿಯ ವರ್ಗವು ಕಾರಣ ಶರೀರದಲ್ಲಿಯೂ ಇರುವವು. ಇವೆಲ್ಲವುಗಳಿಗೆ ಶಿವನೇ ಅಧಿಷ್ಠಾನನಾಗಿರುವನೆಂದು ಒಟ್ಟು ಭಾವವು

ಲಿಂಗಮುಖಗಳು

ಲಿಂಗವ್ರತನಿಯಮಗಳಿಗೆ, ಲಿಂಗೋಪಾಸನಕ್ಕೆ [ಕ್ರಿಯಾತ್ಮಕವಾದ ಲಿಂಗೋಪಾಸನೆಗೆ] ಸಾಧನವಾಗಿರುವ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಲಿಂಗಮುಖಗಳೆಂದು ವೇದದ ಪ್ರತಿಪಾದನೆಯಿದೆ. ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಇಂದ್ರಿಯ ಜೋಡಿಯಲ್ಲಿರುವ ಆಚಾರಾದಿ ಆರುಲಿಂಗಗಳಿಗೆ ಕ್ರಮವಾಗಿ ಆಯಾ ಜೋಡಿ ಇಂದ್ರಿಯಗಳು ಮುಖಗಳಾಗಿರುವವು. ಈ ಎಲ್ಲ ಇಂದ್ರಿಯವಿಷಯಜ್ಞಾನ ಕ್ರಿಯೆಗಳು ಸೇರಿ ಜ್ಞಾನಕರ್ಮಾತ್ಮಕವಾದ ಹೃದಯದ ವಿಷಯಜ್ಞಾನವಾಗುವದು. ಆದ್ದರಿಂದ ಹೃದಯವು ಮಹಾಲಿಂಗಮುಖವಾಗಿರುವದು.

ಶಿವಾದ್ವೈತ ಮಂಜರಿಯಲ್ಲಿ ಷಡ್ವಿಧಲಿಂಗಳಿಗೆ ಹೃದಯಾದಿ ಸ್ವರೂಪವನ್ನು ಹೇಳಿರುವದು ಕೆಳಗೆ ವಿವರಿಸಲ್ಪಟ್ಟಿರುವದು.

ಮಹಾಲಿಂಗ—ಗುರೂಪದೇಶದಿಂದ ಪ್ರಾಪ್ತವಾದ ಸ್ವವಿಮರ್ಶಾಲಕ್ಷಣದಿಂದ ಕೂಡಿರುವದು; ಸ್ವಸ್ವರೂಪವನ್ನು ಜ್ಞಾಪಿಸಿ ಪಡೆದಿರುವದು; ಬಾಹ್ಯಜ್ಞಾನಕರ್ಮೇಂದ್ರಿಯಗಳಲ್ಲಿ ವಿಷಯಗಳಾದ ಶಬ್ದಾದಿ ಸಕಲಪದಾರ್ಥಗಳ ಗ್ರಹಣಕ್ಕೆ ಅಂತರ್ಮುಖವಾಗಿರುವದು. ಇಂತಹ ಹೃದಯವೇ 'ಓಂ'ಕಾರ ಸ್ವರೂಪವಾದ ಮಹಾಲಿಂಗವು.

ಪ್ರಸಾದಲಿಂಗ— ಗುರು ಬೋಧಿಸುವ ಸಕಲ ತತ್ವಾರ್ಥಗಳುಳ್ಳ ಶಬ್ದಗಳಿಂದ ಶಿಷ್ಯನನ್ನು ಅನುಗ್ರಹಿಸುವದು ಅನುಗ್ರಹವೇ ಪ್ರಸಾದವು. ಪ್ರಸಾದರೂಪ ಗುರುವಾಕ್ಯ ಗ್ರಹಣಕ್ಕೆ ಸಾಧನವಾಗಿರುವ ಶ್ರೋತ್ರವೇ 'ಯ'ಕಾರರೂಪವಾದ ಪ್ರಸಾದ ಲಿಂಗವು.

ಚರಲಿಂಗಃ-- ಚರ (ಜಂಗಮ)ನು ಸರ್ವವ್ಯಾಪಕನು. ಸರ್ವಾಂಗವ್ಯಾಪಕವಾಗಿರುವ ಶೀತ ಮೃದು ಇತ್ಯಾದಿ ಸ್ಪರ್ಶ ಸಾಧನವಾಗಿರುವ ತ್ವಗಿಂದ್ರಿಯವೇ 'ವ' ಕಾರರೂಪವಾದ ಚರಲಿಂಗವು.

ಶಿವಲಿಂಗಃ— ಮಹಾಪ್ರಕಾಶವೇ ನೇತ್ರರಂಧ್ರವನ್ನು ಸೇರಿ ಅದನ್ನು ಸಮಸ್ತ ವಸ್ತುಗಳ ಪ್ರಕಾಶನಕ್ಕೆ ಸಾಧನಮಾಡಿರುವದರಿಂದ ನೇತ್ರವೇ ಮಹಾಪ್ರಕಾಶಮೂರ್ತಿಯಾದ 'ಶಿ' ಕಾರಮಯ ಶಿವಲಿಂಗವು.

ಗುರುಲಿಂಗಃ— ಗುರು ಮಂತ್ರ ಮೂರ್ತಿ, ಗುರುಸ್ವರುಪವಾದ ಮಂತ್ರವೇ ಮಧುರಾದಿ ಷಡ್ರಸವನ್ನು ಹೊಂದಿರುವದೆಂದು ಅರಿತು ಮಂತ್ರೋಚ್ಚಾರಣೆಯ ರಸಾಸ್ವಾದನೆ ಮಾಡತಕ್ಕದ್ದು. ಆಸ್ವಾದನಕ್ಕೆ ಸಾಧನವಾದ ಜಿಹ್ವೆಯೇ 'ಮ' ಕಾರರೂಪವಾದ ಗುರುಲಿಂಗವು.

ಆಚಾರಲಿಂಗಃ— ಈಡಾಪಿಂಗಳಗಳೆಂಬ ನಾಡೀದ್ವಾರದಿಂದ ಪ್ರಾಣವಾಯು ಸಂಚಾರಕ್ಕೆ ಆಶ್ರಯವಾಗಿರುವದರಿಂದಲೂ ದೇಹ ಶುದ್ಧಿಯನ್ನುಂಟು ಮಾಡುವ ರೇಚಕಾದಿ ಕ್ರಮೋತ್ಪನ್ನವಾದ ಪ್ರಾಣಾಯಾಮಗಳಿಗೆ ಸಾಧನವಾಗಿರುವ ಸತ್ಕರ್ಮಗಳಿಗೆ ಹೇತು (ಕಾರಣ)ವಾಗಿರುವದರಿಂದ ನಾಶಿಕವೇ 'ನ' ಕಾರ ಮಯವಾದ ಆಚಾರಲಿಂಗವು.

ಷಟ್‌ಚಕ್ರಗಳಲ್ಲಿ ಆಚಾರಾದಿ ಷಡ್ಲಿಂಗಗಳ ಯೋಗವಿರುವದೆಂದು ಶಿವಾದ್ವೈತದರ್ಪಣದಲ್ಲಿ ಹೇಳಲಾಗಿದೆಯಾದರೂ, ಇಂದ್ರಿಯಗಳದ್ವಾರದಿಂದ ಮೇಲೆ ವಿವರಿಸಿದಂತೆ ಪದಾರ್ಥವಿಷಯಗಳ ಗ್ರಹಣಮಾಡುವದರಿಂದ ಆಚಾರಾದಿಲಿಂಗಗಳ ಸ್ವರೂಪವನ್ನು [ಲಿಂಗಮುಖತ್ವವನ್ನು] ನಾಶಿಕಾದಿ ಇಂದ್ರಿಯಗಳಿಗೆ ಹೇಳಲಾಗಿದೆ. ಇದಕ್ಕೆ ಉಪನಿಷತ್ಪ್ರಮಾಣವಿದ್ದಂತೆಯೂ ಶಿವಾದ್ವೈತದರ್ಪಣವೇ ತೋರಿಸಿಕೊಟ್ಟಿದೆ.

ಅಂಗನ ಷಡ್ವಿಧ ಹಸ್ತಗಳು

ಉಪಾಸ್ಯಲಿಂಗನಿಗೆ ಮುಖಗಳಿರುವಂತೆ, ಉಪಾಸಕ ಅಂಗನಿಗೆ ಹಸ್ತಗಳಿರುವವು. ಅವು ಹೀಗೆಃ—

ವಸ್ತುವಿನಿಂದ ಭಾವವೂ, ಭಾವದಿಂದ ಜ್ಞಾನವೂ, ಜ್ಞಾನದಿಂದ ಮನಸ್ಸೂ, ಮನದಿಂದ ಅಹಂಕಾರವೂ, ಅಹಂಕಾರದಿಂದ ಬುದ್ಧಿಯೂ, ಬುದ್ಧಿಯಿಂದ ಚಿತ್ತವೂ ಕ್ರಮವಾಗಿ ಉಂಟಾಗುವವು.

ಅಸ್ತಿ ಅಂದರೆ ಇರು. ಇರುವಿಕೆಯ ಲಕ್ಷಣದಿಂದ ಒಡಗೂಡಿದುದೇ ವಸ್ತುವು. ಅಸ್ತಿತ್ವವೇ ವಸ್ತುವಿಗೆ ಸತ್ತೆಯಾಗಿರುವದು. ವಸ್ತುವಿನ ಸಾಧನೆಗೆ ಆ ಸತ್ತೆಯೇ ಸ್ಫುರಣಕಾರಣವಾಗುವದರಿಂದ ಆ ಸತ್ತೆಯೇ ಭಾವವೆನಿಸುವದು.

ಹೀಗೆ ವಸ್ತುಸತ್ತೆಯೇ ಭಾವವಾಗಿಯೂ. ವಸ್ತುಸತ್ತೆಯನ್ನು ಯಾವಾಗಲೂ ತಿಳಿಯತಕ್ಕುದೇ ಜ್ಞಾನವಾಗಿಯೂ, ತಿಳಿದುದನ್ನು ಸರ್ವದಾ ಮನನಮಾಡಿಕೊಳ್ಳುವದೇ ಮನಸ್ಸಾಗಿಯೂ ಮನನ ವಿಷಯವನ್ನು ನಾನು. ನನ್ನದು, ಎಂದು ಅಹಂಕರಿಸುವದೇ ಅಹಂಕಾರವಾಗಿಯೂ, ಅಹಂಕರಿಸಿದ ವಿಷಯುವನ್ನು ಗುಣ ದೋಷಗಳ ದೃಷ್ಟಿಯಿಂದ ವಿಚಾರಿಸಿ ನಿಶ್ಚಯಸಿಕೊಳ್ಳುವದೇ ಬುದ್ಧಿಯಾಗಿಯೂ, ನಿಶ್ಚಿತವಾದುದನ್ನು ಸ್ಥಿರವಾಗಿರಿಸಿಕೊಳ್ಳುವದು (ಆಶ್ರಯುವಾದುದು) ಚಿತ್ತವಾಗಿಯೂ ಇರುವವು. ಇವು ಆರು ವಸ್ತು ಸಾಧಕಗಳು.

ಚಿತ್ತ,ಬುದ್ಧಿ, ಅಹಂಕಾರ, ಮನಸ್ಸು, ಜ್ಞಾನ, ಭಾವಗಳು ಕ್ರಮವಾಗಿ ಭಕ್ತಾದಿ ಆರು ಸ್ಥಲಗಳಲ್ಲಿ ಅಂಗನಿಗೆ ಹಸ್ತಗಳಾಗಿರುವವು.

ಭೂಮ್ಯಂಗದಲ್ಲಿ ಭಕ್ತನು ಚಿತ್ತಹಸ್ತದಿಂದ ಆಚಾರಲಿಂಗತತ್ಪರನಾಗಿರುವನು
ಜಲಾಂಗದಲ್ಲಿ ಮಹೇಶನುಬುದ್ಧಿಹಸ್ತದಿಂದ ಗುರುಲಿಂಗಾರ್ಚಕನಾಗಿರುವನು.
ಅಗ್ನ್ಯಂಗದಲ್ಲಿ ಪ್ರಸಾದಿಯುಅಹಂಕಾರ ಹಸ್ತದಿಂದ ಶಿವಲಿಂಗದ ರತಿಯುಳ್ಳವನಾಗಿರುವನು
ವಾಯ್ವಂಗದಲ್ಲಿ ಪ್ರಾಣಲಿಂಗಿಯು ಮನೋಹಸ್ತದಿಂದ ಚರಲಿಂಗಾರ್ಚಕನಾಗಿರುವನು.
ಆಕಾಶಾಂಗದಲ್ಲಿ ಶರಣನು ಜ್ಞಾನಹಸ್ತದಿಂದ ಪ್ರಸಾದಲಿಂಗಾರ್ಚಕನಾಗಿರುವನು.
ಆತ್ಮಾಂಗದಲ್ಲಿ ಐಕ್ಯನು ಭಾವ ಹಸ್ತದಿಂದ ಮಹಾಲಿಂಗಾರ್ಚನಾತತ್ಪರನಾಗುವನು.

ಭಕ್ತಾದಿ ಷಟ್‌ಸ್ಥಲಗಳಲ್ಲಿ ಆಚಾರಾದಿ ಷಡ್ವಿಧಲಿಂಗಗಳ ಅರ್ಚನೆಗೆ ಮೇಲಿನಂತೆ ಹಸ್ತಗಳೆಂದು ಹೇಳಲ್ಪಟ್ಟ ಚಿತ್ತ, ಬುದ್ಧಿ, ಅಹಂಕಾರ ಮನಸ್ಸು, ಜ್ಞಾನ ಭಾವಗಳು ಅಂಗನೆನಿಸಿದ ಶುದ್ಧಜೀವನಿಗೆ ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನಸ್ಸು ಸುಜ್ಞಾನ, ಸದ್ಭಾವ ರೂಪದಿಂದ ಪರಿಣಮಿಸುವವು. ವೀರಶೈವರಿಗೆ ಇವು ಷಟ್‌ಕರ್ಮಗಳೆನಿಸುವವೆಂದು ವೀರಶೈವ ಪ್ರಕ್ರಿಯೆಯಲ್ಲಿ ಹೇಳಲಾಗಿದೆ.

ಮಂತ್ರವಿದ್ಯಾಸಾಹಿತ್ಯ

ವೀರಶೈವನ (ಶುದ್ಧಜೀವನ, ಅಂಗನ) ಸರ್ವಾಂಗವು ಲಿಂಗಮಯುವಾಗಿರುವಂತೆ ಮಂತ್ರಾತ್ಮಕವೂ ಆಗಿರುವದು. ಅದು ವ್ಯಾಪಿಸಿಕೊಂಡಿರುವ ಬಗೆಯು ಹೀಗಿದೆ:—

'ಪರಾ' ವಿದ್ಯೆಯೆನಿಸಿಕೊಂಡಿರುವ ಪಂಚಾಕ್ಷರಿಯೇ 'ತಾರಾ' ಸಹಿತವಾಗಲು ಅಂದರೆ 'ಓಂ' ಕಾರದಿಂದ ಕೂಡಲು ಷಡಕ್ಷರಿಯಾಗುವದು, ಇದು ಶಿವಮಂತ್ರವು; ಸಕಲಮಂತ್ರಗಳಿಗೆ ಮಾತೃಕೆ; ಲಿಂಗಸ್ವರೂಪಿಣಿ; ಸರ್ವದಾ ಶಿವಪ್ರದಾಯಿನಿ, ಎಂದು ಹೆಸರುಗೊಂಡಿರುವದು.!(ಇದು ಸ್ಥೂಲಸೂಕ್ಷ್ಮವಿಭೇದದಿಂದ ಎಂಟುತೆರನಾಗಿರುವದು.)

ಲಿಂಗಾಂಗ ಸಂಯೋಗ ಬೋಧಕವು

'ನಮಃ' ಪದವು ಅಂಗವು, 'ಶಿವ' ಪದವು ಲಿಂಗವು, 'ಅಯ' ಪದವು ಐಕ್ಯ ಸಂಬಂಧವು. ಇನ್ನೊಂದು ಬಗೆಯಿಂದ 'ನಮಃ' ಪದವು ಜೀವವಾಚಕವು, 'ಶಿವ

ಪದವು ಪರಮಾತ್ಮವಾಚಕವು, 'ಆಯ' ಪದವು ಜೀವಪರಮಾತ್ಮರ ತಾದಾತ್ಮ್ಯವಾಚಕವು. ಹೀಗೆ ಆಗಿರುವುದರಿಂದ ಅಸಮಾನ, ಅದ್ವಿತೀಯವಾದ 'ನಮಃ ಶಿವಾಯ' ಶಿವಮಂತ್ರವು ಮಂತ್ರರಾಜವಾಗಿರುವದು.

ಪ್ರಣವಗಳು ಲಿಂಗರೂಪಗಳು

ನ, ಮ, ಶಿ, ವಾ, ಯ, ಓಂ ಎಂಬ ಆರು ಪ್ರಣವಗಳು ಆಚಾರಾದಿ ಷಡ್ವಿಧಲಿಂಗಸ್ವರೂಪಗಳಾಗಿರುವವು. ಈ ಆರು ಲಿಂಗಗಳಿರುವ ಮೂಲಾಧಾರಾದಿ ಆರು ಚಕ್ರಗಳಲ್ಲಿಯೇ ಅಂದರೆ ಆ ಚಕ್ರಗಳಿರುವ ಶರೀರದ ಆಯಾ ಭಾಗಗಳಲ್ಲಿ ಈ ಪ್ರಣವಗಳು ನೆಲಸಿರುವವು.

ಶರೀರದಲ್ಲಿಯ ಅಂತಹಸ್ಥಾನ, ಚಕ್ರ, ಚಕ್ರಾಕಾರ, ಅದರ ದಳಗಳು, ದಳಗಳ ಅಕ್ಷರಗಳು, ಅಲ್ಲಿ ನೆಲಸಿರುವ ಲಿಂಗ, ಆಯಾ ಲಿಂಗಸ್ವರೂಪವಾದ ಪ್ರಣವಾಕ್ಷರ ಇವುಗಳ ಕ್ರಮವಾದ ಪಟ್ಟಿಯನ್ನು ಕೆಳಗೆ ಕೊಟ್ಟಿದೆ. ವಿವರ ಸ್ಪಷ್ಟವಾಗುವದು.

ಶರೀರ ಸ್ಥಾನ	ಚಕ್ರ	ಆಕಾರ	ದಳ ಸಂಖ್ಯೆ	ದಳಗಳ ಅಕ್ಷರಗಳು	ನೆಲಸಿದ ಲಿಂಗಗಳು	ಆಯಾಲಿಂಗ ಸ್ವರೂಪದ ಪ್ರಣವಾಕ್ಷರ
ಗುಧ	ಆಧಾರ	ತಾರಕ	೪	ವ, ಶ, ಷ, ಸ	ಆಚಾರಲಿಂಗ	ನ
ಗುಹ್ಯ	ಸ್ವಾಧಿಷ್ಠಾನ	ದಂಡ	೬	ಬ ಭ ಮ ಯ ರ ಲ	ಗುರುಲಿಂಗ	ಮಃ
ನಾಭಿ	ಮಣಿಪೂರಕ	ಕುಂಡಲ	೧೦	ಡಢಣ ತಥದಧನ ಪಫ	ಶಿವಲಿಂಗ	ಶಿ
ಹೃದಯ	ಅನಾಹತ	ಅರ್ಧಚಂದ್ರ	೧೨	ಕ ಖ ಗ ಘ ಙ ಚ ಛ ಜ ಝ ಞ ಟ ಠ	ಚರಲಿಂಗ	ವಾ
ಕಂಠ	ವಿಶುದ್ಧಿ	ದರ್ಪಣ	೧೬	ಅಆಇಈ ಉಊ ಋ ೠ ಎಏಐ ಒಓಔ ಅಂ ಅಃ	ಪ್ರಸಾದಲಿಂಗ	ಯ
ಭ್ರೂಮಧ್ಯ	ಆಜ್ಞಾ	ಜ್ಯೋತಿ	೨	ಹ. ಕ್ಷ.	ಮಹಾಲಿಂಗ	ಓಂ

ಸಪ್ತಧಾತುಗಳಲ್ಲಿ ಷಡಕ್ಷರಿ

ಪ್ರಣವಗಳು ಚಕ್ರಸ್ಥಾನಗಳಲ್ಲಿ ಮಾತ್ರವಿರದೆ ಶರೀರದ ಸಪ್ತಧಾತುಗಳಲ್ಲಿಯೂ ಇರುವವು. ವ್ಯಾಪಕವಾದ 'ಓಂ'ಕಾರವು ದೇಹವನ್ನು ವ್ಯಾಪಿಸಿರುವ ತ್ವಕ್ಕಿನಲ್ಲಿ,

ನ ಕಾರವು ರಕ್ತದಲ್ಲಿ, ಮ ಕಾರವು ಮಾಂಸದಲ್ಲಿ, ಶಿ ಕಾರವು ಮೇದಸ್ಸಿನಲ್ಲಿ ವ ಕಾರವು ಅಸ್ಥಿಯಲ್ಲಿ, ಯ ಕಾರವು ಮಜ್ಜೆಯಲ್ಲಿ ವ್ಯಾಪಿಸಿರುವವು. ದೇಹಸಾರ ವಾದ 'ಶುಕ್ಲ' ದಲ್ಲಿ ಷಡಕ್ಷರವೇ ನೆಲಿಸಿರುವದು.

ಇನ್ನೊಂದು ಪ್ರಮಾಣದಂತೆ ವೀರಶೈವನ ಮುಖವೇ ಓಂಕಾರವು, ಎರಡು ಭುಜಗಳೇ ನಮಕಾರಗಳು ದೇಹಮಧ್ಯವೇ ಶಿಕಾರವು, ಎರಡು ಪಾದಗಳೇ ವಾ, ಯ ಕಾರಗಳು ಎಂದು ಹೇಳಲ್ಪಟ್ಟಿರುವದು. ಈ ಎಲ್ಲ ಸಪ್ರಮಾಣಿತ ಬಗೆಗಳಿಂದ ವೀರಶೈವನ ಶರೀರವು ಷಡಕ್ಷರಮಂತ್ರಮಯವಾಗಿರುವದೆಂದು ವ್ಯಕ್ತವಾಗುವದು.

ಮಂತ್ರಶರೀರ

ಈ ರೀತಿಯಾಗಿ ವೀರಶೈವನ ಶರೀರವು ಮಂತ್ರಲಿಂಗಸ್ವರೂಪವಾಗಿರುವದರಿಂದ ವೀರಶೈವನು ಶಿವಸ್ವರೂಪನೇ ಆಗಿರುವನೆಂದು ಸಿದ್ಧವಾಗುವದು. ಮಂತ್ರಮೂರ್ತಿ ಯಾದ ಶಿವನಂತೆ ತನ್ನ ಶರೀರವು ಷಡಕ್ಷರ ಮಂತ್ರಮಯವಾಗಿದೆಯೆಂಬ ಭಾವವು ಯಾವನಲ್ಲಿ ಗಟ್ಟಿಮುಟ್ಟಾಗಿ ನೆಲಿಸಿರುವದೋ ಆತನೇ ನಾನು' ಎಂದು ಶಿವವಚನ ವಿರುವದು.

ಹೀಗೆ ಶಿವಸ್ವರೂಪನೇ ಆಗಿರುವ ವೀರಶೈವನು ಷಟ್‌ಸ್ಥಲಾಚರಣೆಯಿಂದ ಶಿವಾನಂದವನ್ನೇ ಅನುಭವಿಸುವನು. ಆ ವಿಹಾರಕ್ರಮವನ್ನು ಕೆಳಗಿನ ಆರು ದೀರ್ಘ ವಾಕ್ಯಗಳಲ್ಲಿ ಕಾಣಬಹುದು. ಅಲ್ಲಿ ಬರುವ ಸಕ್ರಮಪದಗಳನ್ನು ಗಮನಿಸಬೇಕು.

ಭಕ್ತನಾಗಿ ಭೂಮ್ಯಂಗದಲ್ಲಿದ್ದು ಶ್ರದ್ಧಾ ಭಕ್ತಿಯಿಂದ ಸುಚಿತ್ತಹಸ್ತದಿಂದ
ಪರಿಮಳಪದಾರ್ಥಗಳನ್ನು ಕ್ರಿಯಾಶಕ್ತಿಯುಕ್ತವಾದ
ಆಚಾರಲಿಂಗಕ್ಕೆ 'ನ'ಮಂತ್ರ ಉಚ್ಚರಿಸುತ್ತ
ನಾಶಿಕಮುಖದಲ್ಲಿ ಅರ್ಪಿಸಿ, ಆ ಗಂಧಪ್ರಸಾದವನ್ನು ಸೇವಿಸಿ ಆನಂದಿಸವನು.

ಮಹೇಶನಾಗಿ ಜಲಾಂಗದಲ್ಲಿದ್ದು ನಿಷ್ಠಾ ಭಕ್ತಿಯಿಂದ ಸುಬುದ್ಧಿ ಹಸ್ತದಿಂದ
ಮಧುರಾದಿ ಷಡ್ರಸಪದಾರ್ಥಗಳನ್ನು ಜ್ಞಾನಶಕ್ತಿಯುಕ್ತವಾದ
ಗುರುಲಿಂಗಕ್ಕೆ ಮಕಾರ ಮಂತ್ರ ಉಚ್ಚರಿಸುತ್ತ
ಜಿಹ್ವೆಯ ಮುಖದಲ್ಲಿ ಅರ್ಪಿಸಿ, ಆ ರಸಪ್ರಸಾದವನ್ನು
ಸೇವಿಸಿ ಆನಂದಿಸುವನು.

ಪ್ರಸಾದಿಯಾಗಿ ಅಗ್ನ್ಯಂಗದಲ್ಲಿದ್ದು ಅವಧಾನಭಕ್ತಿಯಿಂದ ನಿರಹಂಕಾರಹಸ್ತದಿಂದ
ಶ್ವೇತಾದಿ ಬಣ್ಣದ ಪದಾರ್ಥಗಳನ್ನು ಇಚ್ಛಾಶಕ್ತಿಯುಕ್ತವಾದ
ಶಿವಲಿಂಗಕ್ಕೆ ಶಿಕಾರ ಮಂತ್ರ ಉಚ್ಚರಿಸುತ್ತ
ನೇತ್ರಮುಖದಲ್ಲಿ ಅರ್ಪಿಸಿ, ರೂಪ ಪ್ರಸಾದವನ್ನು
ಭೋಗಿಸಿ ಆನಂದಿಸುವನು.

ಪ್ರಾಣಲಿಂಗಿಯಾಗಿ ವಾಯ್ವಂಗದಲ್ಲಿದ್ದು ಅನುಭವಭಕ್ತಿಯಿಂದ ಸುಮನಸ್ಸಹಸ್ತದಿಂದ
ಮೃದುಕಠಿಣಾದಿ ಪದಾರ್ಥಗಳನ್ನು ಆದಿಶಕ್ತಿಯುಕ್ತವಾದ
ಚರಲಿಂಗಕ್ಕೆ ವ ಮಂತ್ರ ಉಚ್ಚರಿಸುತ್ತ
ತಗ್ಮುಖದಿಂದ ಅರ್ಪಿಸಿ, ಆ ಸ್ಪರ್ಶ ಪ್ರಸಾದವನ್ನು
ಭೋಗಿಸಿ ಆನಂದಿಸುವನು.

ಶರಣನಾಗಿ ಆಕಾಶಾಂಗದಲ್ಲಿದ್ದು ಆನಂದ ಭಕ್ತಿಯಿಂದ ಸುಜ್ಞಾನಹಸ್ತದಿಂದ
ಶಬ್ದದ್ರವ್ಯಗಳನ್ನು ಪರಾಶಕ್ತಿಯುಕ್ತವಾದ
ಪ್ರಸಾದಲಿಂಗಕ್ಕೆ ಯ ಮಂತ್ರ ಉಚ್ಚರಿಸುತ್ತ
ಶ್ರೋತ್ರ ಮುಖದಲ್ಲಿ ಅರ್ಪಿಸಿ, ಆ ನಾದಪ್ರಸಾದವನ್ನು
ಅನುಭವಿಸಿ ಆನಂದಿಸುವನು.

ಐಕ್ಯನಾಗಿ ಆತ್ಮಾಂಗದಲ್ಲಿದ್ದು ಸಮರಸಭಕ್ತಿಯಿಂದ ಸದ್ಭಾವಹಸ್ತದಿಂದ
ಪರಿಣಾಮ ಪದಾರ್ಥಗಳನ್ನು ಚಿಚ್ಛಕ್ತಿಯುಕ್ತವಾದ
ಮಹಾಲಿಂಗಕ್ಕೆ ಓಂ ಮಂತ್ರ ಉಚ್ಚರಿಸುತ್ತ
ಹೃದಯ ಮುಖದಲ್ಲಿ ಅರ್ಪಿಸಿ, ಆ ತೃಪ್ತಿಪ್ರಸಾದದಲ್ಲಿ
ಬೆರೆದು ನಿಜ್ಬೆರಗ ಹೊಂದುವನು.

ಈ ಲಿಂಗಸಾಮಗ್ರಿಯ ಅಂಗಸಾಮಗ್ರಿಯು ಎಲ್ಲವೂ ಶಿವಶಕ್ತಿ ವಿಲಾಸದಿಂದ ಉಂಟಾದುದು. ಅದು ನಿವೃತ್ತಿಪರವಾದುದರಿಂದ ಊರ್ಧ್ವಸೃಷ್ಟಿಗೆ ಸೇರಿದುದು ಅಧೋಸೃಷ್ಟಿಯೆಂಬ ಶಂಕೆಗೆ ಅವಕಾಶವಿಲ್ಲ

ಆಗಮಗಳ ವಾಕ್ಯಾರ್ಥವನ್ನು ಅನುಸರಿಸಿಯೇ ಈ ಅನುಪಮವಾದ ಸರ್ವಾಂಗ ಲಿಂಗಸಾಹಿತ್ಯವನ್ನು ಹೇಳಲಾಗಿದೆಯೆಂದು ಮಾಯಿಪ್ರಭುವು ಪ್ರಮಾಣಿಸುತ್ತಾರೆ.

ಶಿವಾದ್ವೈತತಂತ್ರವನ್ನು ತಿಳಿದವನು ಅಜ್ಞಾನಗ್ರಂಥಿಯನ್ನು ಭೇದಿಸಲು ಸಮರ್ಥನಾಗುವನು.

---

೭. ಅರ್ಪಣಸದ್ಭಾವ ನಿರೂಪಣ.

ವೀರಶೈವರ ಜ್ಞಾನಕ್ರಿಯೆಗಳ ಸರ್ವಬಗೆಗಳಲ್ಲಿ ಲಿಂಗಾರ್ಪಣ ಸದ್ಭಾವವು ಅತ್ಯಂತ ಮುಖ್ಯವಾದುದಾಗಿದೆ ಅದುವೇ. ಆತ್ಮನಿಗೆ ಯಾವದೇ ಕರ್ಮದ ನಿರ್ಲೇಪತ್ವವನ್ನು ಉಂಟು ಮಾಡುವದು .

ದ್ವಿವಿಧ ಅರ್ಪಣ

ಲಿಂಗಾರ್ಪಣವಿಧಿಯು ಕ್ರಿಯಾ(ಮತ್ತಾ)ರ್ಪಣ, ಜ್ಞಾನ (ಮತ) ಅರ್ಪಣವೆಂದು ಎರಡು ವಿಧವಾಗಿದೆ.

ಕ್ರಿಯಾರ್ಪಣ—ವೀರಶೈವನು ಆಶೆಗೆ ದಾಸನಾಗಿರುವದಿಲ್ಲ; ಶಿವನಿಗೆ ದಾಸನಾಗಿರುವನು. ನಿತ್ಯವೂ ನ್ಯಾಯವಾದ ಕಾಯಕದಿಂದ ಧನಧಾನ್ಯಾದಿಗಳನ್ನು-ತನಗಾಗಿಅಲ್ಲ-ಶಿವನಿಗಾಗಿ ಶಿವೋಪಾಸನೆಗಾಗಿ ಸಂಗ್ರಹಿಸುವನು. ಅವನು ಶಿವನಕೃಪೆಯಿಂದ ಕಾಲಕಾಲಕ್ಕೆ ದೊರೆತುದನ್ನೇ ಸಂತೋಷದಿಂದ ತೆಗೆದುಕೊಳ್ಳುವನು. ಅದರಲ್ಲಿ ಕಾಲಕ್ಕೆ ತಕ್ಕ ವಸ್ತುಗಳನ್ನು ಶಿವಕ್ರಿಯೆಗಳಿಂದ ಸಂಸ್ಕಾರಗೊಳಿಸಿ ಇಷ್ಟ-ಪ್ರಾಣ-ಭಾವಲಿಂಗಗಳಿಗೆ ಅಥವಾ ಗುರು-ಲಿಂಗ-ಜಂಗಮರಿಗೆ ಅರ್ಪಿಸಿ ಅವರ ಪ್ರಸಾದವನ್ನು ಸ್ವೀಕರಿಸುವನು. ಇದು ಕ್ರಿಯಾರ್ಪಣವು.

ಜ್ಞಾನಾರ್ಪಣ—ಸರ್ವಕಾಲದಲ್ಲಿ ಸರ್ವಕಡೆಗೂ ತಾನಾಗಿಯೇ ನಾಶಿಕಾದಿ ಇಂದ್ರಿಯ ಮುಖಾಂತರ ಭೋಗವು ಸಂಘಟಿಸುವದು. ವನಗಳಲ್ಲಿಯ ಸುವಾಸನೆ, ಸೃಷ್ಟಿಯ ಹಾಗು ರಮ್ಯ ಉಪ್ಪರಿಗೆಗಳ ಕಲಾಕೃತಿಗಾರಿಕೆಗಳ ಸೌಂದರ್ಯ, ಪಕ್ಷಿನಿಕರದ ಉಲಿವು ಪ್ರವಚನಸಂಗೀತಾದಿಗಳ ಸುಖಶ್ರವಣ ಇತ್ಯದಿಗಳು ತಾವಾಗಿಯೇ ಭೋಗಕ್ಕೊಳಗಾಗುವವು. ಆವಾಗ ವೀರಶೈವನು ಆ ಭೋಗವಸ್ತುಗಳಿಗೆ ಜ್ಞಾನಸಂಸ್ಕಾರವನ್ನೀಯುವನು. ಅಂದರೆ ಇಂದ್ರಿಯಗಳನ್ನು ಲಿಂಗಸ್ಥಾನಗಳನ್ನಾಗಿಯೂ ಲಿಂಗಮುಖಗಳನ್ನಾಗಿಯೂ ತಿಳಿಯುವನು. ಭೋಗ್ಯ ವಿಷಯವು ಯಾವ ಇಂದ್ರಿಯಕ್ಕೆ ಸಂಬಂಧಿಸಿರುವದೋ ಆ ಇಂದ್ರಿಯರೂಪವಾದ ಲಿಂಗಕ್ಕೆ ಅರ್ಪಣಗೊಳಿಸುವನು. ಹೀಗೆ ಅರ್ಪಿತವಾದ ವಿಷಯವು ವಿಷಯವಲ್ಲ, ಲಿಂಗಪ್ರಸಾದವು. ಆ ಪ್ರಸಾದಭೋಗದಿಂದ ಆನಂದಿಸುವನು. ಈ ಕ್ರಮದ ವಿವೇಕವೇ-ನಿಶ್ಚಿತವಾದ ಸಂಕಲ್ಪವೇ-ಜ್ಞಾನಾರ್ಪಣವೆನಿಸುವದು.

ವೀರಶೈವರ ಆಚಾರವು ಜ್ಞಾನಕ್ರಿಯಾತ್ಮಕವಾಗಿರುವದರಿಂದ ಕೆಲವೆಡೆ ಕ್ರಿಯಾಪ್ರಧಾನವಾಗಿಯೂ ಕೆಲವೆಡೆಯಲ್ಲಿ ಜ್ಞಾನಪ್ರಧಾನವಾಗಿಯೂ ಇರುವದು. ಆದರೂ ಅವು ಒಂದನ್ನೊಂದು ಬಿಟ್ಟಿರುವದಿಲ್ಲ. ಕ್ರಿಯಾಪ್ರಧಾನವಾದುದು ಸಹಜಾಚರಣವು. ಜ್ಞಾನಪ್ರಧಾನವಾದುದು ಸಂಬಂಧಾಚರಣವು. ಈ ಸಹಜ ಮತ್ತು ಸಂಬಂಧಗಳ ಜ್ಞಾನವು ಇಲ್ಲದಿದ್ದರೆ ವೀರಶೈವಾಚಾರವನ್ನು ನಡೆಯಿಸುವದು ಸಾಧ್ಯವಿಲ್ಲ. ಇದನ್ನು ವೀರಶೈವನು ನೆನಪಿಡಬೇಕು.

೧. ಕ್ರಿಯಾರ್ಪಣ ಮತ್ತು ಅದರ ಭೇದಗಳು

ವೀರಶೈವ ತತ್ವಜ್ಞನಾದವನು ಆತ್ಮಭೋಗಕ್ಕಾಗಿ ಕೃಷಿ, ಸಂಪಾದನೆ, ಪೋಷಣ, ಪಾಕ ಇತ್ಯಾದಿ ಕಾರ್ಯಗಳನ್ನೂ ದ್ರವ್ಯ ಶುದ್ಧಿಗಾಗಿ ಮಾಡತಕ್ಕ ಕ್ರಿಯೆಗಳನ್ನೂ

ಈಶ್ವರಾರ್ಪಣ ಬುದ್ಧಿಯಿಂದ ಮಾಡುವನು. ಯಾಕಂದರೆ ಶಿವಾರ್ಪಿತವಾದ ದ್ರವ್ಯಗಳು ಶಿವಪ್ರಸಾದವನ್ನೇ ಉಂಟುಮಾಡುವವು.

ಆತ್ಮಭೋಗಕ್ಕೆ ನಿಮಿತ್ತಗಳಾದ, ಅಂದರೆ ಆತ್ಮೋಪಭೋಗವನ್ನುಂಟುಮಾಡುವ ದ್ರವ್ಯಗಳು ಸ್ಥೂಲ, ಸೂಕ್ಷ್ಮ, ಆನಂದ ಎಂಬ ನಾಮಗಳಿಂದ ಮೂರು ತೆರನಾಗಿರುವವು. ಈ ಮೂರು ಸ್ವರೂಪಗಳು ರೂಪ, ರುಚಿ, ತೃಪ್ತಿ ಎಂದು ಕರೆಯಿಸಿಕೊಳ್ಳುವವು.

ತ್ರಿವಿಧ ದ್ರವ್ಯಗಳು

ವಿಶ್ವಜೀವನು ಬಹಿರಂಗ (ಸ್ಥೂಲಶರೀರ) ದಲ್ಲಿ ಸ್ಥೂಲದ್ರವ್ಯವಾದ ರೂಪವನ್ನು ಇಷ್ಟಲಿಂಗಕ್ಕೆ ಅರ್ಪಿಸುವನು.

ತೈಜಸಜೀವನು ಅಂತರಂಗ(ಸೂಕ್ಷ್ಮಶರೀರ)ದಲ್ಲಿ ಸೂಕ್ಷ್ಮದ್ರವ್ಯವಾದ ರುಚಿಯನ್ನು ಪ್ರಾಣಲಿಂಗಕ್ಕೆ ಅರ್ಪಿಸುವನು.

ಪ್ರಾಜ್ಞಜೀವನು ಆತ್ಮಾಂಗ(ಕಾರಣ ಶರೀರ)ದಲ್ಲಿ ಆನಂದ ದ್ರವ್ಯವಾದ ತೃಪ್ತಿಯನ್ನು ಭಾವಲಿಂಗಕ್ಕೆ ಅರ್ಪಿಸುವನು.

ಪ್ರಸಾದ

ಪ್ರತಿನಿತ್ಯದ ಭೋಜನಕ್ರಿಯೆಯಲ್ಲಿ ವೀರಶೈವನು ಯಾವರೂಪದ್ರವ್ಯವನ್ನು ಲಿಂಗಕ್ಕೆ ಅರ್ಪಿಸುವನೋ ಅದನ್ನೇ ಸೇವಿಸಬೇಕು. ಬೇರೆ ರೂಪ ಪದಾರ್ಥಗಳನ್ನು ಭುಂಜಿಸಬಾರದು. ಅವು ಶಿವಾರ್ಪಿತವಾಗಲಾರವು. ಯಾಕಂದರೆ ಅವು ಪೂಜಾಕಾಲದಲ್ಲಿ ಲಿಂಗಾರ್ಪಿತವಾಗಿರುವದಿಲ್ಲ. ಗುರುವಿನಿಂದ ಪ್ರತಿಷ್ಠಿತವಾದ ಲಿಂಗಕ್ಕೆ ಮೊದಲಿನ ಶಿಲಾದಿ ಭಾವವಿಲ್ಲದಿರುವಂತೆ, ದ್ರವ್ಯವು ಲಿಂಗಾರ್ಪಿತವಾಗಿ ಪ್ರಸಾದವಾಗಲು ಅದರ ಪೂರ್ವದ ಹೆಸರು ಇಲ್ಲವೆನಿಸುವದು. ಆ ಹೆಸರನ್ನು ನೆನಿಸಕೂಡದು.

ಭಕ್ತನ ಪದಾರ್ಥಕಾಯ ಮತ್ತು ಪ್ರಸಾದಕಾಯ

ಭಕ್ತನು ತನ್ನ ಲಿಂಗಪೂಜೆಯನ್ನು ಆರಂಭಿಸಿ ಅದನ್ನು ಮುಗಿಸುವವರೆಗೆ ಪದಾರ್ಥಕಾಯನೆನಿಸುವನು. ಅಂದರೆ ಭಕ್ತನ ಕಾಯವು ಲಿಂಗಾರ್ಪಣಕ್ಕೆ ತಕ್ಕ ಶುದ್ಧಪದಾರ್ಥರೂಪವಾಗಿರುವದೆಂದು ಭಾವವು! ಲಿಂಗಪೂಜೆಯನ್ನು ಮುಗಿಸಿ ಪ್ರಸಾದವನ್ನು ಸ್ವೀಕರಿಸಿದ ಬಳಿಕ ಪುನಃ ಯೋಗ್ಯವೇಳೆಗೆ ಪೂಜಾಸಮಯ ಬರುವವರೆಗೂ ಪ್ರಸಾದಕಾಯನಾಗಿರುವನು. ಅದರೆ ಆ ಅವಧಿಯಲ್ಲಿ ಪ್ರಸಾದ ಭುಂಜಿಸಿದ ಭಕ್ತಕಾಯವು ಪ್ರಸಾದರೂಪವಾಗಿರುವದೆಂದು ಭಾವವು.

ಪ್ರಸಾದಕಾಲ

ಅದರಂತೆ ಯಾವ ರೂಪದ್ರವ್ಯವು ಪೂಜಾಕಾಲದಲ್ಲಿ ಲಿಂಗಮುಖದಿಂದ ಅರ್ಪಿಸಲ್ಪಟ್ಟಿರುವದೋ ಅದು ಪುನಃ ಪೂಜಾಕಾಲದವರೆಗೂ ಪ್ರಸಾದರೂಪವಾ

ಗಿರುವದು. ಪುನಃ ಪೂಜಾಕಾಲಕ್ಕೆ ಅರ್ಪಿತವಾದುದು ಮುಂದಿನ ನಡುವಿನ ವೇಳೆಗೆ ಪ್ರಸಾದರೂಪವಾಗಿರುವದು. ಹೀಗೆ ಲಿಂಗಪೂಜಾವಸರಕ್ಕೆ ಸಮರ್ಪಿತವಾದ ದ್ರವ್ಯವು ಶುಭವು (ಪ್ರಸಾದರೂಪವು); ಲಿಂಗಪೂಜಾವಸರಕ್ಕೆ ಅನರ್ಪಿತವಾದುದು ಅಶುಭವು (ಪದಾರ್ಥರೂಪವು) ಎಂದು ಹೇಳಲ್ಪಟ್ಟದೆ.

ತ್ರಿವಿಧ ಪ್ರಸಾದ

ಇಷ್ಟ-ಪ್ರಾಣ-ಭಾವ ಲಿಂಗಗಳಿಗೆ ಅರ್ಪಿಸಿದ ದ್ರವ್ಯವು ಕ್ರಮವಾಗಿ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದವಾಗುವದು.

ಆತ್ಮನು ವಿಶ್ವಜೀವನೆಂಬ ಹೆಸರಿನಿಂದ ಜಾಗ್ರದವಸ್ಥೆಯಲ್ಲಿ ಶುದ್ಧಪ್ರಸಾದವನು ತೈಜಸಜೀವನೆಂಬ ಹೆಸರಿನಿಂದ ಸಿದ್ಧಪ್ರಸಾದವನ್ನು, ಪ್ರಾಜ್ಞಜೀವನೆಂಬ ಹೆಸರಿನಿಂದ ಪ್ರಸಿದ್ಧ ಪ್ರಸಾದವನ್ನು ಆದರದಿಂದ ಉಪಭೋಗಿಸುತ್ತಿರುವನು.

ಲಿಂಗಭೋಗೋಪಭೋಗಿಯು ನಿರ್ಲೇಪನು

ವೀರಶೈವನು ಲಿಂಗಾರ್ಪಿತ ಉಪಭೋಗಿಯಾದುದರಿಂದ ವಿಷಯ ದೋಷದಿಂದ ದೂರನೆಂಬುದರಲ್ಲಿ ಸಂದೇಹವೇನು? ಸ್ಥೂಲಾದಿ ಮೂರು ಶರೀರಗಳಲ್ಲಿ ಅರ್ಪಿಸಿ ಕೊಳ್ಳ ಇಷ್ಟಾದಿ ಮೂರು ಲಿಂಗಗಳನ್ನು, ಅರ್ಪಿತವಾಗುವ ದ್ರವ್ಯಗಳ ರೂಪಾದಿ ಮೂರು ಬಗೆಗಳನ್ನು, ಶುದ್ಧಾದಿ ಮೂರು ಬಗೆಯ ಪ್ರಸಾದಗಳನ್ನು, ಉಪಭೋಗಿಸುವ ವಿಶ್ವಾದಿ ಮೂರು ಜೀವರನ್ನು, ಸರಿಯಾಗಿ ತಿಳಿದುಕೊಂಡವನು ಭೋಗಿಯಾಗಿದ್ದರೂ ನಿರ್ಲಿಪ್ತನು. ಲಿಂಗಭೋಗೋಪಭೋಗಿಯಾದುದರಿಂದ ಅವನಿಗೆ ವಿಷಯಗಳ ಸೋಂಕಿಲ್ಲ.

ಭೋಗ್ಯವಸ್ತುಗಳೆಲ್ಲ ಶಿವನ ಹೊರತಾದ ವಸ್ತುಗಳಲ್ಲ; ಶಿವರೂಪಗಳೇ ಎಂದು ತಿಳಿಯುವದು ಇಷ್ಟಲಿಂಗಕ್ಕೆ ರೂಪದ್ರವ್ಯಾರ್ಪಣೆ (ಆಗಮ)

ಪದಾರ್ಥಗಳಲ್ಲಿಯ ಜ್ಞಾನವರ್ಧಕ ರುಚಿಯು ಶಿವಾಂಶವೇ ಎಂದು ಭಾವಿಸುವದು ಪ್ರಾಣಲಿಂಗಕ್ಕೆ ರುಚಿದ್ರವ್ಯಾರ್ಪಣೆ (ಶ್ರುತಿ)

ಶಿವಸುಖವನಲ್ಲದೆ ಅನ್ಯಸುಖಕ್ಕೆ ಅಣುಮಾತ್ರವೂ ಎಳಸೆನು ಎಂಬ ನಿರ್ಧಾರವೇ ಭಾವಲಿಂಗಕ್ಕೆ ತೃಪ್ತಿದ್ರವ್ಯಾರ್ಪಣೆ (ಆಗಮ)

ಕೆಲವು ಪ್ರಜ್ಞರ ಮತದಂತೆ ಶುದ್ಧಪ್ರಸಾದದಿಂದ ಕಾಮಾದಿ ಅರಿಷಡ್ವರ್ಗಗಳು ತೊಲಗುವವು. ಸಿದ್ಧಪ್ರಸಾದದಿಂದ ಶಿವಜ್ಞಾನೋದಯುವಾಗುವದು.

ಪ್ರಸಿದ್ಧಪ್ರಸಾದದಿಂದ ಶಿವೋಹಂಭಾವ ನಿಶ್ಚಲವಾಗುವದು.

ಕ್ರಿಯಾರ್ಪಣದ ಎಲ್ಲ ವಿವರಗಳನ್ನು ಕೆಳಗಿನ ಪಟ್ರಿಯಲ್ಲಿ ಸಂಗ್ರಹಿಸಲಾಗಿದೆ—

ಮೂರು ಶರೀರಗಳಲ್ಲಿ	ಮೂವರು ಜೀವರು	ಮೂರು ಅವಸ್ಥೆಗಳಲ್ಲಿ	ಮೂರು ಬಗೆಯ ದ್ರವ್ಯಗಳನ್ನು
೧ ಬಹಿರಂಗ ಸ್ಥೂಲಶರೀರ	ಜೀವಾತ್ಮನು ವಿಶ್ವಜೀವನು	ಜಾಗ್ರತ	ಸ್ಥೂಲ ಸ್ವರೂಪದ ರೂಪ
೨ ಅಂತರಂಗ ಸೂಕ್ಷ್ಮಶರೀರ	ಅಂತರಾತ್ಮನು ತೈಜಸಜೀವನು	ಸ್ವಪ್ನ	ಸೂಕ್ಷ್ಮಸ್ವರೂಪದ ರುಚಿ
೩ ಆತ್ಮಾಂಗ ಕಾರಣಶರೀರ	ಪರಮಾತ್ಮನು ಪ್ರಾಜ್ಞಜೀವನು	ಸುಷುಪ್ತಿ	ಆನಂದ ಸ್ವರೂಪದ ತೃಪ್ತಿ

ಮೂರು ಬಗೆಯ ತಿಳುವಳಿಕೆಯಿಂದ	ಮೂರು ಲಿಂಗಗಳಿಗೆ ಅರ್ಪಿಸಿ	ಮೂರು ಪ್ರಥಮಾ ವರಣಗಳಿಗೆ ಅರ್ಪಿಸಿ	ಮೂರು ಬಗೆಯ ಪ್ರಸಾದ ಸೇವಿಸಿ	ಮೂರು ಬಗೆಯ ಪರಿಣಾಮ ಹೊಂದುವದು.
೧. ವಸ್ತುಗಳೆಲ್ಲ ಶಿವಸ್ವರೂಪಗಳೇ	ಇಷ್ಟ	ಗುರು	ಶುದ್ಧ	ಕಾಮಕ್ರೋಧಾದಿ ಅರಿ ಷಡ್ವರ್ಗಗಳ ದೂರೀಕರಣ
೨. ಜ್ಞಾನವು ಶಿವನ ಅಂಶಿಕವೇ	ಪ್ರಾಣ	ಲಿಂಗ	ಸಿದ್ಧ	ಶಿವಜ್ಞಾನೋದಯವಾಗುವಿಕೆ
೩. ಶಿವಸುಖವನಲ್ಲದೆ ಅನ್ಯಸುಖಕ್ಕೆ ಎಳಸೆನು.	ಭಾವ	ಜಂಗಮ	ಪ್ರಸಿದ್ಧ	ಶಿವೋಹಂ ಭಾವದ ನಿಶ್ಚಲತೆ

೨. ಜ್ಞಾನಾರ್ಪಣ ಮತ್ತು ಅದರ ಪ್ರಕಾರಗಳು.

ಎಲ್ಲ ಇಂದ್ರಿಯಗಳ ಮುಖದಿಂದ ಉಪಭೋಗಕ್ಕಾಗಿ ಬರುವ ಸರ್ವದ್ರವ್ಯಗಳ ವಿಷಯ ಸಂಬಂಧದ ದೋಷನಿವೃತ್ತಿಗಾಗಿ ಅವಶ್ಯವಿರುವ ಹಾಗು ಸ್ವಾನುಭವದಿಂದ ತಿಳಿಯಲು ಸಾಧ್ಯವಿರುವ ಜ್ಞಾನಾರ್ಪಣ ಕ್ರಮವು ಹೀಗಿರುವದು :

ಕರ್ಮಕಾಂಡಿಗಳು ಯಜ್ಞದಲ್ಲಿ ಹವಿಃಶೇಷವನ್ನು ಭುಂಜಿಸುವರು. ವೀರ ಶೈವರು ಗುರುಲಿಂಗಜಂಗಮಾರ್ಪಿತವಾದ ಪ್ರಸಾದವನ್ನು ಕ್ರಿಯಾ-ಜ್ಞಾನರೂಪ ಸಂಬಂಧದಿಂದ ಭುಂಜಿಸಬೇಕೆಂದು ಶೃತಿಪ್ರಮಾಣವುಂಟು. ಅಲ್ಲಿ ವೀರಶೈವನು ಗುರುಲಿಂಗಜಂಗಮರೂಪನಾದ ಶಿವನು ಉಂಡುದನ್ನು ಉಣ್ಣುವನು, ಮೂಸಿದು ದನ್ನು ಮೂಸುವನು; ಕುಡಿದುದನ್ನು ಕುಡಿಯುವನು ಎಂಬರ್ಥದ ವಾಕ್ಯಗಳುಂಟು.

ಷಟ್‌ಸ್ಥಲ ಮಾರ್ಗದಿಂದ ಪ್ರಸಾದ ಭೋಗ

ಭಕ್ತಾದಿ ಷಟ್‌ಸ್ಥಲರೂಪದಿಂದ ಆಯಾಸ್ಥಲಕ್ಕೆ ಸಂಬಂಧಿಸಿದ ಇಂದ್ರಿಯ ಸ್ಥಾನಗಳಲ್ಲಿ ನೆಲಿಸಿರುವ ಆಚಾರಾದಿ ಲಿಂಗಮುಖದಿಂದ ಅರ್ಪಿತವಾಗಿ ಸ್ವತಃ ಸಿದ್ಧವಾದ ಪ್ರಸಾದವನ್ನು ಆತ್ಮನು ಆತ್ಯಾದರದಿಂದ ಉಪಭೋಗಿಸುವನು.

ಹಿಂದೆ ವಿವರಿಸಿದಂತೆ ಸರ್ವಾಂಗದಲ್ಲಿಯೂ ಪ್ರತಿಷ್ಠಿತವಾಗಿರುವ ಷಡಕ್ಷರಾ ತ್ಮಕವಾದ ಲಿಂಗದಲ್ಲಿಯೇ ಸರ್ವಪದಾರ್ಥಗಳು ಅರ್ಪಿತವಾಗುವವೆಂದು ಶೃತಿ ಪ್ರಮಾ ಣವಿದೆ. ವೀರಶೈವನಿಗೆ ಆ ಜ್ಞಾನ (ತಿಳುವಳಿಕೆ) ಇರುವದು.

ಷಡಕ್ಷರ ಮಂತ್ರದಲ್ಲಿ ಅರ್ಪಣ ಸದ್ಭಾವ

ಷಡಕ್ಷರ ಮಂತ್ರದ ಅರ್ಥವು ಅರ್ಪಣಸದ್ಭಾವದ ಪರವಾಗಿಯೇ ಇರುವದು.

'ಓಂ' ಇದು ಅಖಿಲ ಜಗದ್ವಾಚಕವಾಗಿದೆ.

'ನಮಃ' ಇದು ಈ ಅಖಿಲವು ನನ್ನದಲ್ಲ ಎಂದು ಬೋಧಿಸುವದಾಗಿದೆ.

'ಶಿವಾಯ' ಇದು ಶಿವನದಾಗಿದೆ ಎಂದು ಹೇಳುವದಾಗಿದೆ. ಅಂದರೆ ಉಪ ಭೋಗ್ಯವಾದ ಅಖಿಲವಸ್ತುಮಯವಾದ ಜಗತ್ತೆಲ್ಲವು ನನಗಲ್ಲವು, 'ಶಿವನ ಉಪ ಭೋಗಕ್ಕಾಗಿರುವದು.' ಎಂದು ತಿಳಿದು ಸಮಸ್ತವನ್ನು ಶಿವನಿಗೆ ಅರ್ಪಣಮಾಡು ಅರ್ಥವನ್ನು ದೃಢವಾಗಿ ಬೋಧಿಸುತ್ತಿರುವ ಮಂತ್ರರಾಜನೆನಿಸುತ್ತಿರುವ 'ಷಡ ಕ್ಷರ ಮಂತ್ರ'ವು ಸರ್ವೋತ್ಕೃಷ್ಟವಾಗಿ ವರ್ತಿಸುತ್ತಿದೆ.

ಈ ಷಡಕ್ಷರ ಮಂತ್ರದಲ್ಲಿಯ ಎರಡು ಮಾತ್ರೆಗಳ 'ಮಃ' ಎಂಬುದು ಒಂದು ಮ ಕಾರ ಕಳಚಿ ಉಳಿದದ್ದೆಂದು ತಿಳಿಯಬೇಕು. ಅಂದರೆ ಮಃ ಎಂಬಲ್ಲಿ ಮಮ (ನನ್ನದು) ಎಂದಿರುವದೆಂದು ಭಾವಿಸಬೇಕು. ಹೀಗಾದರೆ:

ಓಂ ಎಲ್ಲ ಜಗತ್ತು, ನಮಮ– ನನ್ನದಲ್ಲ, ಶಿವಾಯ–ಶಿವನದು. ಹೀಗೆ ಅರ್ಥ ಹೊರಡುವದೆಂದು ವ್ಯಾಕರಣದ ತಾತ್ಪರ್ಯ.

ವೀರಶೈವರ ಉಪಾಸನ ಮಂತ್ರವೆಂದರೆ ಷಡಕ್ಷರ ಮಂತ್ರವೇ! ಷಡಕ್ಷರ ಮಂತ ಮೂರ್ತಿಯಾದ ಶಿವನನ್ನು ಆ ಮಂತ್ರದಿಂದ ಜಪಿಸಿ, ಇಷ್ಟಸಿದ್ಧಿಯನ್ನು ಹೊಂದುವ

ದಾಗಬೇಕಿದ್ದಿರೆ ಆ ಮಂತ್ರದ ಮೇಲೆ ವಿವರಿಸಿದ ಅರ್ಥವು ತಿಳಿಯಬೇಡವೇ? ವೀರಶೈವನು ಶಿವನಿಗೋಸ್ಕರವಾಗಿರುವ ಭೋಗ್ಯ ಜಗದ್ವಸ್ತುಗಳನ್ನು ಶಿವನಿಗೆ ಅರ್ಪಿಸಿ ಶಿವಭೋಗೋಪಭೋಗಿಯಾದರೆ ತನ್ನ ಇಷ್ಟ ಸಿದ್ಧಿಯಾಯಿತೆಂದು ಆಚರಿಸತಕ್ಕದ್ದು. ಈ ಜ್ಞಾನಯುಕ್ತ ಆಚಾರವೇ ಈ ಮತದ ಮೂಲಮಂತ್ರದಲ್ಲಿ ಅಡಕವಾಗಿದೆ. ಇದರಲ್ಲಿಯೇ ಕ್ರಿಯಾರ್ಪಣ ಜ್ಞಾನಾರ್ಪಣಗಳ ಅಭ್ಯಾಸದ ಸಾರವಿದೆ.

ಲಿಂಗಾರ್ಪಿತವಾಗುವ ಆರು ಪದಾರ್ಥಗಳು.

ಲಿಂಗಾರ್ಪಿತವಾಗುವ ಆರು ಪದಾರ್ಥಗಳು. ಗಂಧ, ರಸ, ರೂಪ, ಸ್ಪರ್ಶ ಶಬ್ದ, ಪರಿಣಾಮ ಎಂಬ ಆರು ಪದಾರ್ಥಗಳು ಸರ್ವಕಾಲದಲ್ಲಿಯೂ ಇರತಕ್ಕವುಗಳಾಗಿವೆ. ಗಂಧಾದಿ ಐದು, ಪೃಥ್ವಿ ಆದಿಯಾದ ಐದು ಭೂತಗಳಿಗೆ ತನ್ಮಾತ್ರೆಗಳಾಗಿರುವವು. ತನ್ಮಾತ್ರೆಗಳೇ ಜೀವನ ಪಂಚ ಭೋಗ್ಯ ವಿಷಯಗಳು. ಈ ಒಂದೊಂದು ವಿಷಯವು ನಾನಾ ಪದಾರ್ಥಗಳಲ್ಲಿ ನೆಲಿಸಿ ವ್ಯವಹರಿಸುತ್ತಿರುವವು. ಒಂದೊಂದು ವಿಷಯಕ್ಕೆ ಸಂಬಂಧಿಸಿದ ವಸ್ತುಗಳ ಒಂದೊಂದು ವರ್ಗವಾಗಿರುವದು. ಹೇಗೆಂದರೆ, ಗಂಧವು ಚಂದನ ಪುಷ್ಪ ಇತ್ಯಾದಿ ವಸ್ತುಮಯವಾಗಿರುವದು. ಅಂತಹ ವಸ್ತುಗಳದೊಂದು ಗುಂಪು. ಇದರಂತೆ ರಸವು ಮಧುರಾದಿ ವಸ್ತುಮಯವಾಗಿರುವದು. ರೂಪವು ವರ್ಣಯುಕ್ತ ವಸ್ತುಮಯವಾಗಿರುವದು. ಸ್ಪರ್ಶವು ಮೃದುಕಠಿಣಾದಿ ವಸ್ತುಮಯವಾಗಿರುವದು. ಶಬ್ದವು ಕೋಮಲ ಇಂಪು ಇತ್ಯಾದಿ ನಾದಮಯವಾಗಿರುವದು. ಒಂದಕ್ಕಿಂತ ಹೆಚ್ಚು ವಿಷಯಗಳು ಒಂದು ವಸ್ತುಮಯವಾಗಿರುವದೂ ಉಂಟು, ಈ ಐದು ವಿಷಯ (ಪಂಚ ತನ್ಮಾತ್ರೆಗಳ) ಪದಾರ್ಥಗಳೂ ಏಕರೂಪವಾಗಿ ಪರಿಣಾಮಪದಾರ್ಥಸ್ವರೂಪವನ್ನು ಹೊಂದುವವು ಆರನೆಯ ಪರಿಣಾಮವು ಸುಖಾದಿಮಯವಾಗಿರುವದು. ಸಕಲ ಪದಾರ್ಥಗಳಲ್ಲಿಯೂ ಆತ್ಮನು ಲಿಂಗಾರ್ಪಣ ಬುದ್ಧಿಯಿಂದ (ತತ್ಸಂಬಂಧದ ನಿಶ್ಚಿತವಾದ ಜ್ಞಾನದಿಂದ) ಸರ್ವದಾ ಪ್ರಸಾದ ಸುಖವನ್ನು ಅನುಭವಿಸುತ್ತಿರುವನು.

ಇದರ ವಿವರ ಹೀಗೆ: ಆತ್ಮನು, ಭಕ್ತಾದಿ ಆರು ಅಂಗಸ್ಥಲಗಳಲ್ಲಿ, ಶ್ರದ್ಧಾದಿ ಆರು ಬಗೆಯ ಭಕ್ತಿಯುಕ್ತನಾಗಿ, ಸುಚಿತ್ತಾದಿ ಆರು ಹಸ್ತಗಳಿಂದ, ಗಂಧಾದಿ ಆರು ಬಗೆಯ ಪದಾರ್ಥಗಳನ್ನು, ಕ್ರಮವಾಗಿ, ಕ್ರಿಯಾದಿ ಆರುಬಗೆಯ ಶಕ್ತಿಯುಕ್ತಗಳಾದ, ಆಚಾರಾದಿ ಆರು ಲಿಂಗಗಳಿಗೆ, ನಾಶಿಕಾದಿ ಆರು ಮುಖಗಳಲ್ಲಿ ಅರ್ಪಿಸಿ ಗಂಧಪ್ರಸಾದಾದಿ ಆರು ಬಗೆಯ ಪ್ರಸಾದಗಳನ್ನು ಸೇವಿಸಿ ಆನಂದಿಸುವನು,

ಈ ಜ್ಞಾನಾರ್ಪಣ ವಿವರಗಳ ಪಟ್ಟಿಯನ್ನು ಮುಂದೆ ಗ್ರಂಥದ ಕೊನೆಯಲ್ಲಿ ಕೊಟ್ಟಿದೆ.

ಅಂಗ-ಲಿಂಗ, ಭಕ್ತಿ- ಶಕ್ತಿ, ಹಸ್ತ- ಮುಖ, ಪದಾರ್ಥ- ಪ್ರಸಾದ ಈ ಅಷ್ಟ ವಿಧಗಳು (ಅಷ್ಟವಿಧಸಕೀಲಗಳು) ಪ್ರತಿಯೊಂದು ಸ್ಥಲಕ್ಕೂ ಕ್ರಮವಾಗಿ ಸಂಬಂಧಿಸಿವೆ

ಸಚ್ಚಿದಾನಂದ ಸ್ವರೂಪ

ಅಂಗಲಿಂಗಗಳು ಸದ್ರೂಪವಾಗಿ,

ಭಕ್ತಿ-ಶಕ್ತಿಗಳು ಚಿದ್ರೂಪವಾಗಿ,

ಅರ್ಪಣ ಪ್ರಸಾದಗಳು ಆನಂದರೂಪವಾಗಿ ಇರುವವು.

ಗಾಯತ್ರಿ ಮಂತ್ರವು ಲಿಂಗಾಂಗಸಂಯೋಗ ಪರವು.

ವಿದ್ಯೆಗಳಲ್ಲಿ ವೇದವು ಶ್ರೇಷ್ಠವು. ವೇದದಲ್ಲಿ ಶ್ರೀರುದ್ರವು ಶ್ರೇಷ್ಠವು. ಅದು ವೇದಸಾರವೇ ಆಗಿರುವದು. ಶ್ರೀರುದ್ರದಲ್ಲಿ ಹೇಳಲ್ಪಟ್ಟ ಶಿವಪಂಚಾಕ್ಷರಿಯೂ ವೇದದ ಸಾರವೇ! ಇದು ವೀರಶೈವರಿಗೆ ಉಪದೇಶಮಂತ್ರವಾಗಿರುವದು. ಇಂತಹ ವೇದ ಸಾರವಾದ ಶಿವಪಂಚಾಕ್ಷರಿ (ಶಿವ) ಮಂತ್ರವು ಲಿಂಗಾಂಗ ಸಂಯೋಗಪರವಾಗಿದೆ ಯೆಂದು ಇದುವರೆಗೆ ಅನೇಕ ಬಗೆಯಿಂದ ನಿರ್ದೇಶಿಸಲ್ಪಟ್ಟಿದೆ.

ಹಾಗೆಯೇ ಗಾಯತ್ರಿಯು ಲಿಂಗಾಂಗಸಂಯೋಗ ಪರವಾಗಿದೆ. ಗಾಯತ್ರಿ ಯಲ್ಲಿಯೂ

'ಸವಿತುಃ' ಎಂಬುದು ಜೀವ (ಲಿಂಗ) ವಾಚಕ

'ಭರ್ಗಃ' ಎಂಬುದು ಶಿವ (ಲಿಂಗ) ವಾಚಕ

'ಧೀಮಹಿ' ಎಂಬುದು ಸಂಬಂಧ(ಸಂಯೋಗ) ವಾಚಕ

ಆಗಿರುವವು. ಇದರಿಂದ 'ಸವಿತುಃ ಭರ್ಗಃ ಧೀಮಹಿ' ಎಂಬ ಪದಗಳು ಕ್ರಮವಾಗಿ 'ಜೀವಶಿವರ ಐಕ್ಯ' ವನ್ನು ಬೋಧಿಸುತ್ತವೆ.

ಸೂರ್ಯಪ್ರಕಾಶದಿಂದಲೇ ಸಕಲ ಜೀವವ್ಯವಹಾರವೂ, ಆ ವ್ಯವಹಾರಕ್ಕೆ ಸಾಧನವಾಗಿರುವ ಸೃಷ್ಟಿಯೂ ಸಿದ್ಧಿಸುವವು. 'ಸ್ಥಾವರ ಜಂಗಮಾತ್ಮಕವಾದ ಸೃಷ್ಟಿಗೆ ಸೂರ್ಯನು ಆತ್ಮನಹನು' ಎಂದು ವೇದಮುಕ್ಕು ಹೇಳುವ ಅರ್ಥವು ಇದೇ! ಅದನ್ನೇ ಸೂರ್ಯ (ಸವಿತುಃ) ಶಬ್ದವು ಜೀವವಾಚಕ ಎಂದು ಆಗಮಗಳು ವಿವರಿಸುತ್ತವೆ. ಭರ್ಗಃ ಶಬ್ದವು ಶಿವವಾಚಕವೆಂದು ಶಬ್ದಕೋಶವು ಪ್ರಸಿದ್ಧವಾಗಿ ತೋರಿಸುತ್ತಿದೆ. ಧೀಮಹಿ ಶಬ್ದವು ಜ್ಞಾನವಾಚಕವಾಗಿ ಜೀವಶಿವರ ಸಂಬಧದ ಜ್ಞಾನವನ್ನು ತೋರಿ ಸುತ್ತದೆ. ಈ ವಿವರದಿಂದ ಗಾಯತ್ರಿಯು ಲಿಂಗಾಂಗ ಸಂಯೋಗ ಪರವಾದುದೆಂಬದು ಸ್ಪಷ್ಟವಾಗುವದು.

ಅರ್ಪಣದಲ್ಲಿ ಜೀವಶಿವರ ತಾದಾತ್ಮ್ಯ

ಪದಾರ್ಥರೂಪವೇ ಜೀವನು
ಪ್ರಸಾದ ರೂಪವೇ ಶಿವನು
ಅರ್ಪಣವೇ ಜೀವಶಿವರ ತಾದಾತ್ಮ್ಯವು.

ಆತ್ಮನು ಪದಾರ್ಥರೂಪನಾಗಿರುವನು. ಇವನು ಶಿವನಿಗೆ ಅರ್ಪಿಸಲ್ಪಟ್ಟಾಗ ಪ್ರಸಾದವಾಗುವನು. ಅಂದರೆ ಪರಮಾತ್ಮನೇ ಆಗುವನು. ಅರ್ಪಣದಿಂದ ಪದಾರ್ಥವು ಪ್ರಸಾದವಾಗುವಂತೆ ಆತ್ಮ-ಪರಮಾತ್ಮರ ಅಭೇದ ಜ್ಞಾನದಿಂದ ಆತ್ಮನು ಪರಮಾತ್ಮನಾಗುವನು. ಇದರಿಂದ ಅರ್ಪಣವು ಅಭೇದ ಜ್ಞಾನಾತ್ಮಕವಾಗಿರುವದೆಂದು ಸ್ಪಷ್ಟವಾಗುವದು. ಈ ಅರ್ಪಣ ಜ್ಞಾನದ ತತ್ವವನ್ನರಿತ ವೀರಶೈವನು ಭೋಗ್ಯವಸ್ತುಗಳನ್ನೆಲ್ಲ ಲಿಂಗಕ್ಕರ್ಪಿಸಿ ಲಿಂಗಭೋಗೋಪಭೋಗಿಯಾಗಿ ಆ ಪ್ರಸಾದ ಪ್ರಭಾವವೋ ಎನ್ನುವಂತೆ ಜ್ಞಾನಪೂರ್ಣದಲ್ಲಿ 'ತಾನು' ಎಂಬ ಪದಾರ್ಥವನ್ನೇ ಶಿವನಿಗೆ ಅರ್ಪಿಸಿ ತಾನೇ ಪ್ರಸಾದ (ಶಿವ) ರೂಪನಾಗಿ ಬೆಳಗುವನು. ಇದೇ ಕ್ರಿಯಾರ್ಪಣ-ಜ್ಞಾನಾರ್ಪಣಗಳ ಮುಖ್ಯ ತತ್ವವು.

ಕರ್ಮದ ನಿರ್ಲೇಪತ್ವ

ಒಂದಾದ ಪರಲಿಂಗವು ೧, ೩, ೬, ೯ ಪ್ರಕಾರವಾಗಿ ಆತ್ಮನ ಸರ್ವಾಂಗಗಳಲ್ಲಿಯೂ ಬೆಳಗುತ್ತಿರುವನು. ಈ ಲಿಂಗಭೇದವನ್ನು ಲಿಂಗಮುಖಗಳನ್ನು ಅರ್ಪಣ ವಿಧಾನವನ್ನು ತಿಳಿಯದಿದ್ದರೆ, ಆತ್ಮನಿಗೆ ಇಂದ್ರಿಯ ಕರ್ಮಗಳ ನಿರ್ಲೇಪತ್ವ ಉಂಟಾಗಲಾರದು. ಲಿಂಗ ಮುಂತಾದ ತತ್ವಜ್ಞಾನವನ್ನು ತಿಳಿಯದವನನ್ನು ಯಾವಾಗಲೂ ಕರ್ಮಲೇಪವು ಬಿಡುವದಿಲ್ಲ. ಆ ತತ್ವಜ್ಞನನ್ನು ಕರ್ಮವು ಸ್ಪರ್ಶಿಸಲಾರದು. ಮುಟ್ಟಿದರೆ ತಗಲಿಕೊಳ್ಳುವ ಕಾಡಿಗೆ (ಕಪ್ಪು) ಕಣ್ಣಿನ ಒಳಗುಡ್ಡಿಗೆ ಅಂಟಿಕೊಳ್ಳದು. ಅಜ್ಞಾನಿಗೆ ಅಂಟುವ ಶುಭಾಶುಭ ಕರ್ಮಫಲವು ಷಟ್‌ಸ್ಥಲ ತತ್ವಜ್ಞಾನಿಯನ್ನು ಹೊದ್ದಲಾರದು

ದಾಸೋಹಂ ಭಾವವು

ವೀರಶೈವನು 'ಸೋಹಮಸ್ಮಿ, (ಅಂದರೆ ಪರಶಿವನೇ ನಾನಿದ್ದೇನೆ.) ಸ್ವಮತದ ಮೂಲ ತತ್ವವೆಂಬ ಜ್ಞಾನವುಳ್ಳವನು. ಆದರೂ ಶರೀರಾದಿ ಸರ್ವ ಪದಾರ್ಥಗಳನ್ನು ಶಿವನಿಗೆ ಅರ್ಪಿಸುವ ಅರ್ಪಣ ಕ್ರಿಯೆಯಲ್ಲಿ ಮಾತ್ರ 'ದಾಸೋಹಂ (ನಾನು ಶಿವನ ದಾಸನು.) ಎಂದು ಸರ್ವಾಚರಣೆಯನ್ನು ನೆರವೇರಿಸಬೇಕಾಗುತ್ತದೆ ಇಂದ್ರಿಯ ಮುಖದಿಂದ ದೊರೆಯುವ ಕಿಂಚಿತ್ತಾದ ಸುಖವೆಲ್ಲವನ್ನು ಆ ಇಂದ್ರಿಯ ಮುಖದಿಂದ (ಅವುಗಳಲ್ಲಿ ನೆಲೆಸಿದ ಆಯಾ ಲಿಂಗಗಳ ರೂಪದ) ತನ್ನ ಸ್ವಾಮಿಯಾದ ಶಿವನಿಗ ಅರ್ಪಿಸಿ ಆ ಪ್ರಸಾದವನ್ನು ಭುಂಜಿಸುವದು ದಾಸೋಹಂ ಭಾವವು.

'ದಾಸೋಹಂ' ಭಾವದ ಪೂರ್ಣತ್ವವೇ ಸೋಽಹಮಸ್ಮಿ' ಶಿವೋಽಹಂ, ತತ್ತ್ವಮಸಿ; ಆದ್ದರಿಂದ ವೀರಶೈವಾಚರಣೆಯಲ್ಲಿ ದಾಸೋಹ' ದಾಸೋಗ ಎಂದು ಬಳಕೆಯಲ್ಲಿರುವ 'ದಾಸೋಹಂ, ಕ್ಕೆ ಬಹಳ ಪ್ರಾಧಾನ್ಯತೆಯಿದೆ.

ದಾಸೋಹಂ ಭಾವದಿಂದ ಶಿವನೊಡನೆ ಭೋಗ

ದಾಸೋಹಂ ಆಚರಣೆಯಲ್ಲಿ ತುದಿಗೆ ಸರ್ವವೂ ತಾನೂ (ಆತ್ಮನೂ) ಶಿವನಿಗೆ ಅರ್ಪಿಸಲ್ಪಡುವದರಿಂದ ಉಳಿದುದು ಏನೂ ಇರುವದಿಲ್ಲ. ಈ ರೀತಿಯಾಗಿ ಸರ್ವವೂ ಲಿಂಗಾರ್ಪಿತವಾದುದೆಂದು ಯಾವನು ನಿಜದಿಂದ ತಿಳಿಯುವನೋ ಅಂತಹ ಜ್ಞಾನಿಯು ಪರಶಿವನಿಂದ ಬೇರೆಯಾಗಿರುವದಿಲ್ಲವಾದ್ದರಿಂದ ಸಕಲ ಭೋಗಗಳನ್ನು ಪರಶಿವನೊಡನೆಯೇ ಭೋಗಿಸುವನು. ಆ ಜ್ಞಾನಿಯು ಲಿಂಗದೇಹಿಯು, ಲಿಂಗಾಚಾರನು' ಶಿವಾತ್ಮರೂಪನು! ಲೌಕಿಕನಾಗಲಾರನು. ಲಿಂಗಮಯವಾಗಿಯೇ ಕಾಣುವ ಸರ್ವವನ್ನೂ ಲಿಂಗನೊಡನೆಯೇ ಭೋಗಿಸುವನು. ಸರ್ವದಾ ಲಿಂಗಪ್ರಸಾದವು ತೃಪ್ತಿಮಯವಾಗಿಯೇ ಬೆಳಗುವದು. ಆ ಮಹಿಮನ ಅಂಗವೆಲ್ಲ ಲಿಂಗವೇ! ಇದುವೇ ಲಿಂಗಾಂಗಸಂಯೋಗ ಸಿದ್ಧಿಯು.

ಇಂತು ನಿರೂಪಿಸಿದ ಅರ್ಪಣಸದ್ಭಾವಜ್ಞಾನವು ಗುರೂಪದೇಶದಿಂದಲೇ ಸಾಧ್ಯವು! ಕೇವಲ ಶಾಸ್ತ್ರಗಳಿಂದ ಸಾಧ್ಯವಲ್ಲವು.

ಕರ್ಮದ ನಿರ್ಲೇಪತ್ವಸಿದ್ಧಿಗಾಗಿ, ಅರ್ಪಣ ಸದ್ಭಾವ, ಅರ್ಪಿತಪ್ರಸಾದ ಭೋಗ ಇವುಗಳ ಪಾರಮಾರ್ಥಿಕ ಸ್ವರೂಪವನ್ನು ಈ ಅಧಿಕರಣದಲ್ಲಿ ವಿವರಿಸಿದ್ದನ್ನು ಗಮನಿಸಬೇಕು.

ಶಿವಾದ್ವೈತ ವಿದ್ಯೆಯನ್ನು ತಿಳಿದ ಪ್ರಭುವು ಅಜ್ಞಾನ ಗ್ರಂಥಿಯನ್ನು ಭೇದಿಸುವನು.

---

೮. ಕ್ರಿಯಾ ವಿಶ್ರಾಂತಿ ನಿರೂಪಣ.

ಇದುವರೆಗೆ ವಿವರಿಸಲ್ಪಟ್ಟ ಷಟ್‌ಸ್ಥಲಾತ್ಮಕ ಕ್ರಿಯೆಯ ಅಂತಿಮ ಧ್ಯೇಯವಾದ ಕ್ರಿಯಾ ವಿಶ್ರಾಂತಿಯ ಸ್ವರೂಪ, ಅನುಭವ, ನಿಲುಗಡೆ ಮುಂತಾದುದನ್ನು ಇಲ್ಲಿ ವಿವರಿಸಲಾಗಿದೆ.

ಕ್ರಿಯಾವಿಶ್ರಾಂತಿ ಸ್ವರೂಪ

ವೀರಶೈವಾಚಾರವೆಂದರೆ ಷಟ್‌ಸ್ಥಲಾಚಾರವು. ಆದರಲ್ಲಿಯ ಕ್ರಿಯೆಗಳೆಲ್ಲವೂ ಲಿಂಗಾರ್ಪಿತವಾಗಿಯೇ ಇರುವವು. ಅಂಗನಿಗೆ ಅವುಗಳ ಶುಭಾಶುಭ ಫಲಗಳ ಸೋಂಕು ಇರುವದಿಲ್ಲ. ಅವು ಒಂದೇ ಒಂದಾಗಿರುವ ಸುಖದ ಲಕ್ಷಣದಿಂದ ಲಕ್ಷಿತವಾದ ವಿಶ್ರಾಂತಿಯನ್ನು ತಾವಾಗಿಯೇ ಹೊಂದುವವು. ಈ ವಿಶ್ರಾಂತಿಯೇ ಕ್ರಿಯಾವಿಶ್ರಾಂತಿ!

ಸಮ್ಯಗ್‌ಜ್ಞಾನ-ಅದರ ಸ್ವರೂಪ

ಇಂತಹ ಕ್ರಿಯಾ ವಿಶ್ರಾಂತಿಯೇ ಅಂದರೆ ಅಖಂಡಸುಖಾನುಭವವೇ ಶ್ರೇಷ್ಠವಾದ ಜ್ಞಾನವೆಂದು ಹೇಳಲ್ಪಟ್ಟದೆ. ಇದರಲ್ಲಿ ಸಂಶಯುವಾದರೂ ಏನು? ನಾನು [ಆತ್ಮನು] ಸಾಕ್ಷಾತ್ ಶಿವನೇ ಎಂದು ತಿಳಿದು ಆ ಶಿವನೊಡನೆ ಅಭಿನ್ನ ಭಾವನಾಗುವದು ಸಮ್ಯಗ್‌ಜ್ಞಾನದ ಸ್ವರೂಪವಾಗಿದೆ. ಈ ತಿಳುವಳಿಕೆಯಿಂದಲೇ ಆತ್ಮನು ಆಪ್ತಕಾಮನಾಗಿ [ಇಷ್ಟಾರ್ಥಸಿದ್ಧಿಯನ್ನು ಹೊಂದಿದವನಾಗಿ] ಸುಖಿಯಾಗುವನು.

ಆಪ್ತಕಾಮನಾದ ಶರಣನ ಲಕ್ಷಣ

ಆಪ್ತಕಾಮನು ನಿತ್ಯಸುಖಿಯು. ಅವನಿಗೆ ಲೌಕಿಕಗಳಾದ ಯಾವ ಬಾಹ್ಯ ಪ್ರವೃತ್ತಿಗಳೂ ಇರುವದಿಲ್ಲ. ಅವು ಆತ್ಮನಲ್ಲಿ ಲಯಗೊಂಡಿರುವವು. ಆಸಕ್ತಿಯೂ ಪ್ರವೃತ್ತಿಯೂ ಇಲ್ಲ. ಆಚಾರವು ಲೀಲೆಯೆನಿಸುವದು. ಸಾಮಾನ್ಯರು ಇದಕ್ಕೆ ಬೇಕಾದರೆ ಹುಚ್ಚು ಅಥವಾ ಸ್ವೇಚ್ಛಾಚಾರವೆನ್ನಬಹುದು. ಹೀಗೆ ಪ್ರವೃತ್ತಿಗಳು ನಷ್ಟವಾದ ಆಪ್ತಕಾಮನ ಲೀಲಾಮಾತ್ರವಾದ ಸ್ವೇಚ್ಛಾಚಾರಗಳೆಲ್ಲ ಶಿವಾರ್ಚನಾರೂಪ ವಾಗಿರುವವು. ಆತನು ಭೋಗಿಸುವದೆಲ್ಲವೂ ಶಿವಾರ್ಪಿತವಾದುದೇ (ಪ್ರಸಾದವೇ) ಆಗಿರುವದು. ಆತನ ಕಣ್ಣಿಗೆ ಸಕಲವೂ ಶಿವರೂಪವಾಗಿ ತೋರುವದು. ಇದುವೇ ಸಮ್ಯಗ್‌ಜ್ಞಾನದ ಗುರುತು.

ಆಪ್ತಕಾಮನಾದ ಶರಣನಿಗೆ ನಾನೇ ಶಿವನೆಂಬ ಸಮ್ಯಗ್‌ಜ್ಞಾನೋದಯ ವಾಗಲು, ಅವನ ಶಿವಾರ್ಚನೆಗೆ ಯಾವ ನಿಬಂಧನೆ (ಕಟ್ಟಳೆ) ಗಳೂ ಇರುವ ದಿಲ್ಲ. ಸ್ವೇಚ್ಛಾಚಾರವೇ ಆ ನಿಬಂಧನೆಯಾಗಿಬಿಟ್ಟಿರುವದು. ತಾನೇ ಸಚ್ಚಿದಾನಂದ ರೂಪ ಶಿವನಾಗಿ ಬೆಳಗುತ್ತಿರುವಾಗ ತನಗನ್ಯವಾಗಿ ಏನೂ ತೋರದು; ಇರದು.

ಈ ಶರಣನಿಗೆ ಶರೀರದಿಂದುಂಟಾಗುವ ಬಂಧವೂ ಇಲ್ಲ, ಮೋಕ್ಷವೂ ಇಲ್ಲ. ಯಾಕಂದರೆ ಶರಣನು ಯಾವದನ್ನೂ ಕಳೆದುಕೊಳ್ಳುವದು [ಬಿಡುವದು], ಅಥವಾ ಯಾವದನ್ನೂ ಹೊಸದಾಗಿ ಸಂಪಾದಿಸುವದು (ಬಂಧವು) ಇರುವದಿಲ್ಲ. ಮುಕ್ತಿ-ಬಂಧಗಳು ಹಗಲು-ರಾತ್ರಿಗಳಂತೆ ಪರಸ್ಪರ ವಿರುದ್ಧ ಪರಿಣಾಮದವು. ಇವು ಒಂದು ಇದ್ದರೆ ಇನ್ನೊಂದು ಇರುವದಿಲ್ಲ; ಒಂದು ಇಲ್ಲದಿದ್ದರೆ ಇನ್ನೊಂದು ಇದ್ದೇ ಇರು ತ್ತದೆ. ಆದರೆ ಸೂರ್ಯನಿಗೆ ಹಗಲು-ರಾತ್ರಿಗಳಿಲ್ಲದಂತೆ ಶರಣನಿಗೆ ಬಂಧ-ಮುಕ್ತಿ ಗಳೆರಡೂ ಇಲ್ಲ. ಇದೇ ವೀರಶೈವ ಮತತತ್ವವೈಶಿಷ್ಟ್ಯವು. ಪರಸ್ಪರ ಅನುಬಂಧಗ ಳಾದ ಬಂಧಮೋಚನಗಳ ಭಾವವೇ ಶೂನ್ಯವಾದುದರಿಂದ [ಇಲ್ಲವಾದುದರಿಂದ] ನಿರಂಕುಶವಾದ ಭಕ್ತಿಯೊಂದೇ ತೋರುತ್ತಿರುವದು.

ಶರಣನ ಭಕ್ತಿ

ಶರಣನ ಷಟಸ್ಥಲಾಚರಣೆಯು ಮಾಯಾರಹಿತವಾದ ಶಿವಮಾರ್ಗವು. ಇದರಲ್ಲಿ ಯೋಗವೂ ತಪಸ್ಸೂ ಅರ್ಚನಾಕ್ರಮವೂ ಮತ್ತಾವುದೂ ಒಂದು ತೋರುವದಿಲ್ಲ. ಭಕ್ತಿಯೊಂದೇ ಸದಾ ಪ್ರಕಾಶಿಸುತ್ತಿರುವದು. ಭಕ್ತಿಯೊಂದೇ ಶಿವಮಾರ್ಗದ ಸರ್ವಸ್ವವು.

ಭಕ್ತಿಯ ಪ್ರಶಸ್ತಿ

ಭಕ್ತಿಯು ಸತ್ವ, ರಜ, ತಮೋ ಗುಣಗಳಿಗೆ ಸಂಬಂಧಿಸಿದುದು, ಅಂದರೆ ಆ ಗುಣಗಳ ಯೋಗದಿಂದ ಉತ್ಪನ್ನವಾದುದಾಗಿದ್ದರೂ ಅದು ಸ್ವಭಾವದಿಂದ ಗುಣರಹಿತವಾಗಿರುವದು. ಪರಮಭಕ್ತಿಯು ಶಿವಾರ್ಪಿತಸ್ವರೂಪದಲ್ಲಿ ಬಂಲು ಶುದ್ಧಿಯನ್ನು ಹೊಂದುವದು. ತ್ರಿಗುಣಗಳ ಮೂಲಸಂಬಂಧವನ್ನು ಕಳೆದುಕೊಳ್ಳುವದು. ಆಗ ಅದು ಸ್ವಾತಂತ್ರ್ಯದಿಂದ ವರ್ತಿಸುತ್ತದೆ. ತನ್ನ ವಿಶುದ್ಧತೆಯಿಂದ ಮೂರು ಗುಣಗಳನ್ನು ಅತಿಕ್ರಮಿಸಿ ಏಕಾಕಾರಗೊಳಿಸುವದು. ಅಂದರೆ ಅವುಗಳನ್ನು ತನ್ನಲ್ಲಿ ಲಯಗೊಳಿಸುವದು. ಆಗೆ ಭಕ್ತಿಯಲ್ಲಿ ಸಾತ್ವಿಕಾದಿ ಗುಣಗಳು ಸಿಲ್ಲಲಾರವು-

ಸಿದ್ಧರಸವು ಬೆಳ್ಳಿ, ತಾಮ್ರ, ಕಬ್ಬಿಣಗಳನ್ನು ಸೋಂಕಿ ಷೋಡಶವರ್ಣಯುಕ್ತವಾದ ಸುವರ್ಣವನ್ನು ಮಾಡುವದು. ಹಾಗೆಯೇ ಈ ಮೂಬಗೆಯ ಧಾತುಗಳಂತಿರುವ ಸತ್ವ-ರಜ-ತಮೋ ಗುಣಗಳನ್ನು ಶುದ್ಧವಾದ ಶಿವಭಕ್ತಿಯು ಅವುಗಳನ್ನು ಶುದ್ಧಗೊಳಿಸಿ ಎಲ್ಲವನ್ನೂ ಶಿವಮಯವಾದ ಒಂದೇ ಸ್ವರೂಪಕ್ಕೆ ತರುವದು.

ಸತ್ವ, ರಜ, ತಮ ಗುಣಗಳು ಕ್ರಮವಾಗಿ ಹಿಮ, ಕುಂಕುಮ, ಕಸ್ತೂರಿಗಳಂತೆ ಬಿಳಿ, ಕೆಂಪು, ಕರಿಯ ಬಣ್ಣವುಳ್ಳವಾಗಿವೆ, ಈ ಗುಣಗಳಲ್ಲಿ ಶಿವಾತ್ಮಕವಾದ ಭಕ್ತಿಯು ಸಮಾವೇಶವಾಗಲು ಗುಣಗಳ ಬಣ್ಣವಡಗುವವು. ಸದ್ಭಾವದಿಂದ ಕೂಡಿದ ಭಕ್ತಿಯು ಸ್ವಸ್ವರೂಪದಿಂದ ಗುಣರಹಿತವಾಗಿ ಪರಮಪದದಲ್ಲಿ ತಾನೇತಾನಾಗಿ ಸದಾ ಸರ್ವೋತ್ಕೃಷ್ಟವಾಗಿ ಬೆಳಗುತ್ತಿರುವದು. ಅಂದ ಮೇಲೆ ಭಕ್ತಿಯ ಯೋಗವನ್ನೆಷ್ಟು ಬಣ್ಣಿಸಲಾದೀತು!

ಕಾಂಡತ್ರಯ

ಧರ್ಮಾಧರ್ಮ ಕರ್ಮಗಳನ್ನು ಮಾಡುವವನೂ ಅವುಗಳ ಫಲಗಳನ್ನು ಅನುಭವಿಸುವವನೂ ನಾನೇ, ಅಂದರೆ ಕರ್ತೃ ನಾನೇ ಎಂಬ ಅಭಿಮಾನದಿಂದ ಪೂರ್ಣವಾದುದು ಕರ್ಮಕಾಂಡವೆನಿಸುವದು.

ಈ ಧರ್ಮಾಧರ್ಮ ಕರ್ಮಗಳಿಗೆಲ್ಲ ನಾನು ಕರ್ತನಲ್ಲ. ಇದಕ್ಕೆನು ಸಾಕ್ಷಿಯಾಗಿರುವೆನು. ಎಂಬ ಅಭಿಮಾನದಿಂದ ಕೂಡಿಕೊಂಡಿರುವದು ಜ್ಞಾನಕಾಂಡವು.

ನಾನು ಧರ್ಮಕರ್ಮಗಳಿಗೆ ಕರ್ತನೂ ಅಲ್ಲ, ಸಾಕ್ಷಿಯೂ ಅಲ್ಲ; ಎಲ್ಲದಕ್ಕೂ ಶಿವನೇ ಕರ್ತನೂ ಸಾಕ್ಷಿಯೂ ಇರುವನು, ಎಂದು ಆ ಕರ್ತೃತ್ವ, ಸಾಕ್ಷಿತ್ವಗಳ ಅಭಿಮಾನವನ್ನು ಪೂರ್ಣವಾಗಿ ಬಿಟ್ಟಿರುವದೇ ಭಕ್ತಿಕಾಂಡವು.

ಇವುಗಳಲ್ಲಿ ಕರ್ಮಸ್ಥಾನವು ಮುತ್ತಿನ ಚಿಪ್ಪಿನಂತೆಯೂ, ಜ್ಞಾನಸ್ಥಾನವು ತಾವರೆಯ ಎಲೆಯಂತೆಯೂ, ಭಕ್ತಿಸ್ಥಾನವು ಕಾದ ಕಬ್ಬಿಣದ ಪಿಂಡದಂತೆಯೂ ಇರುವವು. ನೀರ ಹನಿಯು ಮುತ್ತಿನ ಚಿಪ್ಪಿನಲ್ಲಿ ಬಿದ್ದರೆ ಮುತ್ತಾಗುವದು. ಅಂದರೆ ಅದು ಸಫಲವಾಗುವದು. ಎಲೆಯ ಮೇಲೆ ಬಿದ್ದರೆ ಮುತ್ತಿನಂತೆ ತೋರುವದು ಮಾತ್ರ, ಮುತ್ತಾಗದು. ಅಂದರೆ ವಿಫಲ (ನಿಷ್ಫಲ) ವಾಗುವದು. ಕಾದ ಕಬ್ಬಿಣ ಪಿಂಡದ ಮೇಲೆ ಬಿದ್ದರೆ ಅದರ ನಾಶವೇ ಸಂಭವಿಸುವದು; ನೀರೆಂಬ ಹೆಸರು ಕೂಡ ಮಾಯವಾಗುವದು. ಇದು ಪ್ರಸಿದ್ಧವಷ್ಟೆ? ಹಾಗೆಯೇ ಕರ್ಮಸ್ಥಾನದಲ್ಲಿ ಸಂಸಾರ ಬಂಧದ ಸಫಲತ್ವವು (ಸಂಸಾರ ಬಂಧನ ಸಿದ್ಧಿಯು), ಜ್ಞಾನಸ್ಥಾನದಲ್ಲಿ ಸಂಸಾರ ಬಂಧದ ನಿಷ್ಫಲತ್ವವು (ಸಂಸಾರ ಬಂಧದ ತೋರಿಕೆ ಮಾತ್ರ), ಭಕ್ತಿಸ್ಥಾನದಲ್ಲಿ ಸಂಸಾರ ಬಂಧನ ನಾಶ ಉಂಟಾಗುವವು. ಈ ಮೂರು ಕಾಂಡಗಳಲ್ಲಿ ಶಿವಾತ್ಮಕವಾದ ಭಕ್ತಿಕಾಂಡವು ಶ್ರೇಷ್ಠವು.

ಲೇಖತ್ರಯದ ಇನ್ನೊಂದು ದೃಷ್ಟಾಂತ.

ಕರ್ಮ-ಜ್ಞಾನ-ಭಕ್ತಿಗಳು ಕ್ರಮವಾಗಿ ಶಿಲಾಲೇಖ, ಸ್ಥಲಲೇಖ, ಜಲಲೇಖ ಗಳಂತೆ ಇರುವವು. ಶಿಲಾಲೇಖವು ಅಚ್ಚಳಿಯದಿರುವದು. ಸ್ಥಲಲೇಖವನ್ನು ಬರೆದು ಅಳಿಸಲಿಕ್ಕೆ ಬರುವದು. ಜಲಲೇಖವು ಹೇಳಲಿಕ್ಕೆ ಮಾತ್ರ! ಜಲದಲ್ಲಿ ಲೇಖವುಂಟಾ ಗುವದೇ ಇಲ್ಲ. ಅಳಿಸುವಿಕೆಯೂ ಇಲ್ಲ. ಹಾಗೆಯೇ ಸಂಸಾರಬಂಧನವು ಕರ್ಮದಲ್ಲಿ ನೆಲೆಯಾಗುವದು. ಜ್ಞಾನದಲ್ಲಿ ಇದ್ದಂತೆ ತೋರಿದರೂ ಇಲ್ಲವಾಗಿರುವದು. ಭಕ್ತಿ ಯಲ್ಲಿ ಅದು ಉಂಟಾಗುವದೇ ಇಲ್ಲ.

ಕರ್ಮಚತುಷ್ಟಯ

ಅಶುಭ (ಪಾಪ) ಕರ್ಮದಿಂದ ನರಕವು, ಶುಭ (ಪುಣ್ಯ) ಕರ್ಮದಿಂದ ಸ್ವರ್ಗ ಭೋಗವು ಲಭಿಸುವವು. ಇವೆರಡೂ ಸಕಾಮಕರ್ಮಗಳನ್ನು ಬಿಟ್ಟು, ಜ್ಞಾನಿಯಾ ದರೆ ಮೂರನೆಯ ಆ ಜ್ಞಾನರೂಪಕರ್ಮದಿಂದ ಮೋಕ್ಷವು ಸಿದ್ಧಿಸುವದು. ಪಾಪ, ಪುಣ್ಯ, ಜ್ಞಾನ ಈ ಮೂರು ಬಗೆಯ ಕರ್ಮಗಳನ್ನೂ ಬಿಟ್ಟು ಶಿವಪ್ರಸಾದವನ್ನು ಸಂಪಾದಿಸಿದರೆ, ನಾಲ್ಕನೆಯ ಆ ಪ್ರಸಾದಕರ್ಮದಿಂದ ವೀರಶೈವರ ಅತ್ಯಂತಿಕ ಪರಮ ಪದವಾಗಿರುವ ಭಕ್ತಿಯು ಲಭಿಸುವದು. ಆದ್ದರಿಂದ ವೀರಶೈವರ ಕರ್ಮವು ಪ್ರಸಾದ ಕರ್ಮವಾಗಿರತಕ್ಕದ್ದು.

ಪ್ರಸಾದವೂ-ಭಕ್ತಿಯೂ,

ಶಿವಪ್ರಸಾದದಿಂದ ಶಿವಭಕ್ತಿಯೂ, ಶಿವಭಕ್ತಿಯಿಂದ ಶಿವಪ್ರಸಾದವೂ ಉಂಟಾ ಗುವವು. ಇವೆರಡಕ್ಕೂ ಬೀಜಾಂಕುರದಂತೆ ಪರಸ್ಪರ ಜನ್ಯ-ಜನಕ ಭಾವವಿರುವದು.

ಶಿವಾನುಗ್ರಹವಿಲ್ಲದೆ ಭಕ್ತಿಮಾರ್ಗವು ಸಮನಿಸದು. ಶಿವಭಕ್ತಿಮಾರ್ಗದಿಂದಲೇ ಶಿವ ಪ್ರಸಾದವು ಉಂಟಾಗುವದು.

ಮೊಗ್ಗೆಯ ಮಾಯಿದೇವ ಪ್ರಭುಗಳು (ಈ ಸೂತ್ರಕಾರರು) ತಮ್ಮ ಶತಕತ್ರ ಯದ ಶಿವಾಧವಶತಕದಲ್ಲಿ ಈ ಮೇಲಿನ ತತ್ವಾಭಿಮತವನ್ನು ಸುಲಲಿತವಾಗಿ ಹೇಳಿದ ಪದ್ಯವನ್ನು ನೆನೆದು ಹರ್ಷಪುಳಕಿತನಾಗಿ ಅದನ್ನು ಇಲ್ಲಿ ಕೊಡುವೆನು.

ಉ. ಮಾ. ಭಕ್ತಿ ಶಿವಪ್ರಸಾದ ಜನನೀಭವನಂ, ಶಿವನಪ್ರಸಾದವಾ
ಭಕ್ತಿಗೆ ಜನ್ಮಭೂಮಿ, ವಿಮಲಾಂಕುರ ಬೀಜದವೊಲ್ ಪರಸ್ಪರಂ
ವ್ಯಕ್ತಮಿದಿಂತು ನೋಳ್ಪೊಡದು ತಾನೆ ನಿರಂತರಮುಪ್ಪ ಮುಕ್ತಿಯಾ
ಮುಕ್ತಿಯೆ ಶುದ್ಧ ನಿಷ್ಕಲ ನಿಜೈಕ್ಯಪದಂ ಪರಮಂ ಶಿವಾಧವಾ

ಜ್ಞಾನ-ಭಕ್ತಿಗಳು.

ಜ್ಞಾನವು ಮೊದಲು ಶಿವಜೀವರ ಭೇದ+ಅಭೇದವನು ಹೇಳಿಕೊಡುವದು. ಅನಂತರದಲ್ಲಿ (ಅದರ ಹಿಂದೆ ಹಿಂದೆಯೇ ಅಥವಾ ಅದರೊಡನೆಯೇ) ಭಕ್ತಿಯು ಶಿವಜೀವರ ಭೇದ+ಅಭೇದವನ್ನು ಕಾರ್ಯಗತಗೊಳಿಸಿ ಕಾಣಿಸುವದು. ಅಂದಮೇಲೆ ಜ್ಞಾನಕ್ಕಿಂತ ಭಕ್ತಿಯೇ ಪರವಾದುದು

ಭಕ್ತಿಯ ಕಾರ್ಯ

ಭಕ್ತಿಯು ಅಂಗನ ಉಪಾಸನಾ ಮಾರ್ಗದಲ್ಲಿ ಮೊದಲು ಆತ್ಮನನ್ನು ಶಿವನಿಂದ ಬೇರ್ಪಡಿಸಿ, ಕಡೆಗೆ ಶಿವನಲ್ಲಿ ಕೂಡಿಸುವದು. ಶಿವಸಾಮರಸ್ಯರೂಪವಾದ ಅಮೃತತ್ವದ ಅಂದರೆ ಕೂಡುವಿಕೆಯ ಅನುಭವದ ಆನಂದವನ್ನು ಉಂಟುಮಾಡುವದು. ಹಾಲಿ ನಲ್ಲಿಯ ತುಪ್ಪದಂತೆ, ಕಟ್ಟಿಗೆಯಲ್ಲಿಯ ಅಗ್ನಿಯಂತೆ, ಪ್ರವಾಹದಲ್ಲಿಯ ನೀರಿನಂತೆ ಶಿವನಲ್ಲಿ ಆತ್ಮನು ಅಡಕವಾಗಿ, ಅಭೇದರೂಪನಾಗಿದ್ದರೂ ಹಾಲಿನಿಂದ ತುಪ್ಪವನ್ನು ಕಟ್ಟಿಗೆಯಿಂದ ಬೆಂಕಿಯನ್ನು; ಪ್ರವಾಹದಿಂದ ನೀರನ್ನು ಬೇರ್ಪಡಿಸುವಂತೆ, ಭಕ್ತಿಯು ಶಿವನಿಂದ ಜೀವಾತ್ಮನನ್ನು ಬೇರ್ಪಡಿಸಿ ಶಿವನನ್ನು ಉಪಾಸ್ಯನನ್ನಾಗಿಯೂ ಜೀವ ನನ್ನು ಉಪಾಸಕನನ್ನಾಗಿಯೂ ಮಾಡಿ ಕೊನೆಕೊನೆಗೆ ತನ್ನ ಪ್ರಭಾವದಿಂದ ಉಪಾ ಸನೆಯ ಘನತೆಯನ್ನು ಹೆಚ್ಚಿಸಿ, ಅದನ್ನು ತನ್ನ ಸ್ವರೂಪದಲ್ಲಿಯೇ ಲೀನಗೊಳಿಸಿ ಶಿವಜೀವರ ಐಕ್ಯವನ್ನು ಉಂಟುಮಾಡುವದು. ಇದುವೇ ವೀರಶೈವರ ಭಕ್ತಿಯ ಕಾರ್ಯವು. ಈ ಕಾರ್ಯವೇ ದ್ವೈತಾದ್ವೈತ ಸಿದ್ಧಾಂತದ ತಳಗಟ್ಟು.

ಅದ್ವೈತ ಭಕ್ತಿ.

ಶಕ್ತಿವಿಶಿಷ್ಟನಾದ ಶಿವನು ಲಿಂಗಾಂಗರೂಪದಿಂದ ದ್ವಿವಿಧವಾಗಿ ಕಡೆಗೆ ಏಕ ರೂಪನಾಗುವನು. ಶಿವಗತಶಕ್ತಿ (ಭಕ್ತಿ) ಯೇ ಈ ಭೇದಾಭೇದ ಕಾರ್ಯಮಾಡು ವದು. ಹೀಗೆ ಶಿವಜೀವರನ್ನು ಮೊದಲು ಬೇರ್ಪಡಿಸಿದರೂ ಕೊನೆಗೆ ಸಮರಸಗೊಳಿ

ಸುವದೇ ಶಕ್ತಿರೂಪವಾದ ಭಕ್ತಿಯ ಅಂತಿಮವಾದ ಮುಖ್ಯ ಕಾರ್ಯ. ಆದ್ದರಿಂದ ಇದಕ್ಕೆ ಅದ್ವೈತಭಕ್ತಿಯೆಂತಲೂ ಅನ್ನುವರು. ಒಂದು ಅಖಂಡವಾದ ವಸ್ತುವನ್ನು ನೋಡುವವನು ತನ್ನ ನೇತ್ರಗಳನ್ನು ಸಂಕೋಚಗೊಳಿಸಿ (ಚೂರ್ಚಮಾಡಿ) ನೋಡಿದರೆ ಆ ವಸ್ತುವು ಖಂಡಖಂಡವಾಗಿ ಕಾಣುವದು. ಪುನಃ ಅದೇ ಮನುಷ್ಯನು ನೇತ್ರಗಳನ್ನು ಸಮಗೊಳಿಸಿ ನೋಡಿದರೆ, ಆ ವಸ್ತುವಿನ ನಿಜವಾದ ಅಖಂಡರೂಪವು ಕಂಡು ಬರುವದು. ಹಾಗೆಯೇ ಈ ಅದ್ವೈತ ಭಕ್ತಿಯಿಂದ ಮೊದಮೊದಲು ಉಪಾಸ್ಯ-ಉಪಾಸಕ ಭೇದ ತೋರಿದರೂ ಸರ್ವತೋಮುಖವಾದ ಶಿವಪ್ರಸಾದವು ಈ ಅದ್ವೈತ ಭಕ್ತಿಯಿಂದ ಸಿದ್ಧಿಸಿದ ನಂತರದಲ್ಲಿ ಸರ್ವವೂ ಏಕಾತ್ಮರೂಪದಲ್ಲಿಯೇ ಬೆಳಗುವದು.

ಶಿವಪ್ರಸಾದದ ಕುರುಹು

ಆತ್ಮನಿಗೆ ಶಿವಪ್ರಸಾದಮಹಿಮೆಯಿಂದ ಸರ್ವವೂ ತಾನಾಗಿ ಅಂದರೆ ಶಿವಾಕಾರವಾಗಿ ಕಾಣುವದು. ಪ್ರತಿಯೊಂದು ಕಾರ್ಯವೂ ಅದನ್ನು ಮಾಡುವವನೂ ಮಾಡಿಸುವವನೂ, ಸಾಧನಗಳೂ ತನ್ನ (ಆತ್ಮ) ರೂಪಾಗಿಯೇ ತೋರುವವು. ಭೋಗವೂ ಭೋಗಿಸುವವನೂ, ಭೋಗಸಾಧನಗಳೂ ಆತ್ಮರೂಪದಿಂದಲೇ ಪ್ರಕಾಶಿಸುವವು. ಗ್ರಾಹಕನೂ ಗ್ರಾಹ್ಯವೂ ಗ್ರಹಣವೂ ತನ್ನ ರೂಪದಿಂದಲೇ ವಿರಾಜಿಸುವವು. ಜೀವಾತ್ಮ-ಪರಮಾತ್ಮರೂ, ಅವರ ಭೇದವೂ, ಭೇದ ಮಾಡತಕ್ಕವನೂ, ತಾನೇ ಎಂದು ತೋರುವದು. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರಗಳೂ ಆತ್ಮನೆಂದೇ ಕಾಣುವವು. ವಿಧಿ ನಿಷೇಧಗಳೂ, ನಿಷಿದ್ಧ ಕಾರಣಗಳೂ ತಾನೇ! ಕಾಮಕ್ರೋಧಾದಿಗಳೂ, ಶಾಂತಿಯೂ ತಾನೇ ತಾನಾಗಿ ಸರ್ವತ್ರ ತೋರಿಸಿಕೊಳ್ಳುವನು. ಆದುದರಿಂದ ಸರ್ವವೂ ಆತ್ಮರೂಪದಿಂದ ಅಂದರೆ ಶಿವಾಕಾರದಿಂದ ಬೆಳಗುವಂತೆ ಮಾಡುವದೇ ಶಿವಾನುಗ್ರಹವು, ಅಥವಾ ಶಿವಪ್ರಸಾದವು. ಈ ಶಿವಪ್ರಸಾದದ ಕುರುಹನ್ನು ಅಂಗೈಯ ಬಿಲ್ವದಂತೆ ತನಗೆ ತಂದುಕೊಡುವ ಪರಮ ಸಿದ್ಧಿಪ್ರದವಾದ ಅದ್ವೈತ ಭಕ್ತಿಯನ್ನೇ ವೀರಶೈವನು ಆಶ್ರಯಿಸತಕ್ಕದ್ದು.

ದ್ವೈತಭಕ್ತಿ-ಅದ್ವೈತಭಕ್ತಿ

ದ್ವೈತಭಕ್ತಿಯಲ್ಲಿ ಕೊನೆಯ ವರೆಗೂ ಭೇದವು ಇದ್ದೇ ಇರುವದು. ಪೂಜ್ಯ ಪೂಜಕರುಗಳಿಗೆ ಐಕ್ಯವೇ ಇಲ್ಲ. ಕಡೆತನಕ ಒಂದು ಮತ್ತೊಂದನ್ನು ಪ್ರಾರ್ಥಿಸಿಕೊಂಡೇ ಇರಬೇಕು. ಇದರಲ್ಲಿ ಸಾಮರಸ್ಯವಿಲ್ಲದಿರುವದರಿಂದ ಸಂಸಾರ ಬಂಧ ವಿಮೋಚನೆಯೇ ಇಲ್ಲ, ಅದನ್ನೇ ಮತ್ತಿಷ್ಟು ಬಲಪಡಿಸುವದು. ಅಂದರೆ ಪೂಜಾಫಲಗಳು ಭೋಗವನ್ನು ಬೆಳೆಸುವವು. ಇದನ್ನು ವೀರಶೈವನು ಆಶ್ರಯಿಸುವದಿಲ್ಲ; ಆಶ್ರಯಿಸಬಾರದು.

ಸಾಮರಸ್ಯರೂಪಕವಾದ ಅದ್ವೈತಭಕ್ತಿಯು ನಿರ್ವಿಕಲ್ಪಕವಾದುದರಿಂದ ಸಂಸಾರ ಬಂಧವನ್ನು ಹರಿಸುವದು. ಆದುದರಿಂದ ಅದ್ವೈತಭಕ್ತಿಯು ದ್ವೈತಭಕ್ತಿಗಿಂತ ಶ್ರೇಷ್ಠವಾದುದು.

ಅದ್ವೈತಭಕ್ತಿಯುಕ್ತನಾದ ಯೋಗಿಯು

ಅದ್ವೈತಭಕ್ತಿವೈಭವವುಳ್ಳ ಶಿವಯೋಗಿಯ ಸಕಲ ಕ್ರಿಯೆಗಳು ಸುಟ್ಟಬಟ್ಟೆಯು ಹಾಗಿರುವವು. ಸುಡದ ಬಟ್ಟೆಯು ಹೊದಿಕೆಗೂ ಕಟ್ಟಲಿಕ್ಕೂ ಬರುವದು. ಆದರೆ ಸುಟ್ಟ ಬಟ್ಟೆಯು ಬಟ್ಟೆಯಂತೆ ತೋರುವದು ಮಾತ್ರ! ಅದರಿಂದ ಯಾವ ಫಲವೂ ಇಲ್ಲ. ಅದರಂತೆ ಶಿವಯೋಗಿಯ ಯಾವ ಕ್ರಿಯೆಗಳೂ ಫಲಜನಕವಾಗಿರುವದಿಲ್ಲ. ಫಲೇಚ್ಛೆಯಿಂದ ಮಾಡುವ ಕರ್ಮವು ಪ್ರತಿಬಂಧಕವು; ಅದು ಕೂಡದು. ಕೇವಲ ಕ್ರಿಯೆಯು ಅಂದರೆ ಫಲಾಪೇಕ್ಷೆಯಿಲ್ಲದ ಶುದ್ಧ ಕ್ರಿಯೆಯು ಬಾಧಕವಲ್ಲ. ಚಿತ್ರಪಟವು ಹಲವು ವಸ್ತುಗಳನ್ನು ತೋರಿಸುತ್ತಿದ್ದರೂ ಆ ವಸ್ತುಗಳಿಂದ ಯಾವಫಲವೂ ಇಲ್ಲ. ಅದ್ವೈತಕ್ರಿಯೆಗೂ ಜನನಮರಣಾದಿ ಫಲವಿಲ್ಲವು. ಹುರಿದ ಬೀಜವನ್ನು ಬಿತ್ತಿದರೂ ಅದು ಮೊಳೆಯದಂತೆ ಅದ್ವೈತಭಕ್ತಿಯುಕ್ತನಾದ ಶಿವಯೋಗಿಯ ಯಾವ ಕ್ರಿಯೆಗೂ ಫಲವು ಜನಿಸಲಾರದು.

ಕ್ರಿಯೆಗೆ ಫಲವಿಲ್ಲದಿದ್ದರೂ ನಿಷ್ಫಲತೆಯಿಲ್ಲ.

ಅದ್ವೈತಭಕ್ತಿಯುಕ್ತಯೋಗಿಯ ಕ್ರಿಯೆಗೆ ಫಲವಿಲ್ಲವಾದರೆ ನಿಷ್ಫಲತೆಯಾದರೂ ಇದೆಯೆಂದು ತಿಳಿಯಬಾರದು. ದೊರೆಯತಕ್ಕ ಫಲವು ಕೈತಪ್ಪಿದರೆ ನಿಷ್ಫಲವಾಯಿತೆನ್ನಬಹುದು. ಆತನ ಕ್ರಿಯೆಯಲ್ಲಿ ಫಲದ ಪ್ರಶ್ನೆಯೇ ಇಲ್ಲದಿರುವಾಗ ಫಲವೆಲ್ಲಿ? ನಿಷ್ಫಲವೆಲ್ಲಿ? ಅದ್ವೈತಕ್ರಿಯೆಗೆ ನಿಷ್ಫಲ ಸಫಲತ್ವಗಳನ್ನು ಹೇಳುವದು ಕೇವಲ ಭ್ರಾಂತಿ! ಆ ಕ್ರಿಯೆ ಕೇವಲ ಅದ್ವೈತಭಕ್ತಿ ರೂಪದಿಂದಲೇ ಬೆಳಗುತ್ತಿರುವದು. ಅದ್ವೈತಭಕ್ತಿಯನ್ನೊಳಗೊಂಡಿರದ ಕ್ರಿಯೆಗಳಿಗೆ ತಕ್ಕ ಫಲಾಫಲಗಳು ಇದ್ದೇ ಇರುವವು. ಅದ್ವೈತಭಕ್ತಿಯುಳ್ಳ ಶಿವಯೋಗಿಯ ಕ್ರಿಯೆಗೆ ಫಲವೂ ಇಲ್ಲ, ನಿಷ್ಫಲವೂ ಇಲ್ಲ. ಚಿತ್ರಪಟದಲ್ಲಿ ಸ್ತ್ರೀವ್ಯಕ್ತಿಯ ನಾಭಿ, ಕುಚ ಇತ್ಯಾದಿ ಅಂಗಾಂಗಗಳು ತಗ್ಗಾಗಿ ಉಬ್ಬಾಗಿ (ನಿಮ್ನೋನ್ನತವಾಗಿ) ಕಾಣುವವು. ಕೈಯಿಂದ ಸವರಿ ನೋಡಿದರೆ ಎಲ್ಲವೂ ಸಮನಾಗಿಯೇ ಇರುವದು. ಶಿವಯೋಗಿಯ ಅದ್ವೈತಕ್ರಿಯೆಯ ಫಲಾಫಲಗಳು ಸಮನಾಗಿಯೇ ಇರುವವು. ಭ್ರಾಂತನಲ್ಲದ ಅವನಿಗೆ ಸಮನಾಗಿಯೇ ಕಾಣುವವು.

ಹಲವು ಬಗೆಯ ಹೊಳೆಗಳೂ ಹಳ್ಳಗಳೂ ತಮ್ಮ ತಮ್ಮ ಸ್ಥಳಗಳಲ್ಲಿ ಬೇರೆ ಬೇರೆಯಾಗಿ ಕಂಡರೂ ಸಾಗರವನ್ನು ಸೇರಿದಾಗ ಅವೆಲ್ಲ ಒಂದೇ ಸ್ವರೂಪ ಒಂದೇ ಆಕಾರವಾಗಿ ಕಾಣುವವು. ಶಿವಯೋಗಿಯ ನಾನಾವಿಧ ಕ್ರಿಯೆಗಳೂ ಭಿನ್ನ ಭಿನ್ನವಾಗಿ ತೋರಿದರೂ ಅದ್ವೈತಭಕ್ತಿಯನ್ನು ಹೊಂದಲಾಗಿ ಆ ಭಕ್ತಿರೂಪದಿಂದಲೇ ಕಂಡುಬರುವವು.

ಇನ್ನು ಶಿವಯೋಗಿಯ ಕ್ರಿಯೆಯಾದರೂ ಕ್ರಿಯೆಯಲ್ಲ. ಅದು ಅವನ ಲೀಲೆ! ಜನರ ಕಣ್ಣಿಗೆ ಮಾತ್ರ ಕ್ರಿಯೆಯಂತೆ ಕಾಣುತ್ತಿರುವದು. ಶಿವಯೋಗಿಯ ಆ

ಲೀಲೆಯು ಅದ್ವೈತಭಕ್ತಿಯ ರೂಪದಿಂದ, ಅಥವಾ ಶಿವಾರ್ಚನೆ ಶಿವಾರ್ಪಣೆಗಳ ರೂಪದಿಂದ ಬೆಳಗುತ್ತಿರುವದು; ಕ್ರಿಯಾರೂಪದಿಂದಲ್ಲ.

ಅದ್ವೈತ ಭಕ್ತಿದೇವತೆಯ ಲೀಲೆ

ಅದ್ವೈತಭಕ್ತಿಯು ತಾನು ಲೀಲೆಯಿಂದ ಸಕಲಾಕಾರವನ್ನು ಧರಿಸಿ ಕ್ರೀಡಿಸುವದು. ತನ್ನನ್ನು ಶಿವಾರ್ಪಿತಗೊಳಿಸಿ ಆ ಶಿವಾರ್ಪಿತವಾದದನ್ನೇ ತಾನೂ ಭೋಗಿಸುತ್ತಿರುವದು. ಅದ್ವೈತದಲ್ಲಿ ಭೋಕ್ತೃ, ಭೋಗ, ಭೋಗ್ಯಗಳಲ್ಲಿ ಭೇದವಿಲ್ಲವು.

ವಿಶುದ್ಧವೂ ಜ್ಞಾನಮಯವೂ ಆಗಿರುವ ಅದ್ವೈತ ಭಕ್ತಿಯಲ್ಲಿ ಪ್ರಪಂಚ ವಿಷಯಗಳನ್ನು ಅನುಲಕ್ಷಿಸಿ ಅನುರಾಗಪರ, ವಿರಾಗಪರ ಎಂದು ಎರಡು ಭೇದಗಳನ್ನು ಮಾಡಿರುವರು. ಆದರೂ ಆ ಭಕ್ತಿಯು ಮಾತ್ರ ಅನುರಾಗ-ವಿರಾಗಗಳಿಂದ ನಿರ್ಲಿಪ್ತವಾಗಿರುವದು. ಅಂತರ್ಲೇಪ-ಬಹಿರ್ಲೇಪಗಳಲ್ಲಿಯೂ ತ್ಯಾಗ-ಗ್ರಹಣಗಳಲ್ಲಿಯೂ, ವಿಷಯಿ-ವಿಷಯಗಳಲ್ಲಿಯೂ, ಅನುರಾಗಿ ವಿರಾಗಿಗಳಲ್ಲಿಯೂ ಆ ಭಕ್ತಿಯು ಅವುಗಳ ಸೋಂಕಿಲ್ಲದೆ ಇರುವದು. ಅಂದರೆ ಅವೆಲ್ಲದರಲ್ಲಿಯೂ ಅದು ಸಮನಾಗಿಯೇ ಇರುವದು. ಆದ್ದರಿಂದ ಅದ್ವೈತಭಕ್ತಿಯು ಯಾವದೇ ವಸ್ತುವನ್ನು ಅನುರಾಗದಿಂದ ಗ್ರಹಿಸುವದಿಲ್ಲ; ವಿರಾಗದಿಂದ ತ್ಯಜಿಸುವದಿಲ್ಲ. ಬೆಳಕು ಕತ್ತಲೆಗಳಿಂದ ಕೂಡಿದ ಆಕಾಶವು ಅವುಗಳ ಸೋಂಕಿಲ್ಲದೆ ತಾನು ಶುದ್ಧವಾಗಿರುವಂತೆ ಭಕ್ತಿಯು ಅನುರಾಗ ವಿರಾಗದಿಂದ ಕೂಡಿದ್ದರೂ ತಾನು ಅವುಗಳ ಲೇಪವಿಲ್ಲದಿರುವದು.

ಕರ್ಮಮತ ಭಕ್ತಿಮತ

ಪಾಪಪುಣ್ಯಗಳ ಪ್ರಸಕ್ತಿಯು ಕರ್ಮಮತದಲ್ಲಿರುವದು; ಶಿವಭಕ್ತಿ ಮತದಲ್ಲಿಲ್ಲವು. ಕತ್ತಲೆ-ಬೆಳದಿಂಗಳುಗಳ ಪ್ರಸಕ್ತಿಯು ರಾತ್ರಿಯಲ್ಲಿ ಮಾತ್ರವಲ್ಲದೆ ಹಗಲಿನಲ್ಲಿಲ್ಲವು. ಕತ್ತಲೆ ಬೆಳದಿಂಗಳು ಎರಡೂ ಇಲ್ಲದ ಹಗಲಿನಲ್ಲಿ ಸೂರ್ಯನ ತೇಜಸ್ಸೊಂದೇ ಪ್ರಕಾಶಿಸುತ್ತಿರುವದು. ಹಾಗೆ ಪಾಪ-ಪುಣ್ಯಗಳ ಲೇಪವಿಲ್ಲದ ಭಕ್ತಿಮತದಲ್ಲಿ ಶಿವತೇಜಸ್ಸೊಂದೇ ಬೆಳಗುತ್ತಿರುವದು. ಹಗಲಲ್ಲಿ ಉಷ್ಣಲಕ್ಷಣದ ಬಿಸಲು ಇರುವಂತೆ ಭಕ್ತಿಮತದಲ್ಲಿ ಜ್ಞಾನಲಕ್ಷಣದ ಶಿವತೇಜಸ್ಸಿರುವದು. ಹಗಲಲ್ಲಿ ಸುರ್ಯನು ಪ್ರಕಾಶಿಸುತ್ತಿರುವನು. ಭಕ್ತಿಮತದಲ್ಲಿ ಶಿವನು ಪ್ರಕಾಶಿಸುತ್ತಿರುವನು ರಾತ್ರಿಯಲ್ಲಿ ಕತ್ತಲೆ ಬೆಳದಿಂಗಳು ಎರಡೂ ಇರಬಹುದಾದ್ದರಿಂದ ರಾತ್ರಿಯಲ್ಲಿ ಆ ಕತ್ತಲೆ ಬೆಳದಿಂಗಳುಗಳಿಗೆ ಗೆಳೆತನ ಇರಬಹುದಾಗಿದೆ. ಹಾಗೆ ಅಜ್ಞಾನ ವಿಶಿಷ್ಟವಾದ ಕರ್ಮಮತದಲ್ಲಿ ಪಾಪ-ಪುಣ್ಯಗಳ ಮೈತ್ರಿ ಇರುವದೆಂದು ಹೇಳಬಹುದು. ಸೂರ್ಯಪ್ರಕಾಶಯುಕ್ತವಾದ ಹಗಲಿನಂತೆ ಶಿವತೇಜಸ್ಸಿನಿಂದ ಕೂಡಿದ ಭಕ್ತಿಮತದಲ್ಲಿ ಪಾಪ-ಪುಣ್ಯಗಳ ಸಂಬಂಧವಿಲ್ಲವೆಂಬುದು ಸಿದ್ಧಾಂತವೇ ಸೈ! ಅದ್ವೈತ ಭಕ್ತಿಗೆ ಶುಭಾಶುಭ ಕರ್ಮದ ಲೇಪವಿಲ್ಲವೆಂಬುದು ತಾನಾಗಿಯೇ ಸಿದ್ಧವಾಗುವದು.

ಶಿವಭಕ್ತಿಯು ಪಂಚಮಪುರುಷಾರ್ಥವು.

ಶಿವನ ಪ್ರಸಾದದಿಂದ ಶಿವಜ್ಞಾನೋದಯವಾಗುವದು. ಶಿವಜ್ಞಾನದಿಂದ ಮೋಕ್ಷವು ಸಿದ್ಧಿಸುವದು ಇವೆಲ್ಲವನ್ನು ಸ್ವ-ಸ್ವರೂಪದಲ್ಲಿ ಸಾಧಿಸಿದ ಶಿವಭಕ್ತಿಯು ಮೋಕ್ಷಸಿದ್ಧಿಯನಂತರದಲ್ಲಿಯೂ ಇರತಕ್ಕದ್ದೇ ಆಗಿದೆ. ಅದು ಮೋಕ್ಷಸ್ಥಾನದ ಮೇಲೆ ಸ್ವತಂತ್ರವಾದ ಲೀಲೆಯಿಂದ ಬೆಳಗುತ್ತಿರುವದು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಲ್ಲಿ ಮೋಕ್ಷವು ನಾಲ್ಕನೆಯ ಪುರುಷಾರ್ಥವು! ಮೋಕ್ಷವನ್ನು ಮೀರಿ ಅದಕ್ಕೂ ಹೆಚ್ಚಾಗಿ ಮೇಲೆನಿಸುವ ಈ ಸನಾತನ ಶಿವಭಕ್ತಿಯು ಐದನೆಯ ಪುರುಷಾರ್ಥವು. ಈ ಭಕ್ತಿಯು ಉತ್ತರೋತ್ತರವಾಗಿ ತನಗಿಂತ ಶ್ರೇಷ್ಠವಾದುದಿಲ್ಲದಿರುವದರಿಂದ ತಾನು ನಿರುತ್ತರವಾಗಿಯೂ ಪರಿಪೂರ್ಣವಾಗಿಯೂ ಇರುವದು.

ಈ ಪಂಚಮ ಪುರುಷಾರ್ಥವೆನಿಸಿದ ಭಕ್ತಿಯು ಇಹಲೋಕದಿಂದ ಪರಲೋಕಕ್ಕೆ ಹೋಗಿ ಬರುವ, ಇಲ್ಲವೆ ಉಭಯ ಲೋಕಗಳ ಸುಖದ ತೊಡಕಿಲ್ಲದೆ ತನ್ನಷ್ಟಕ್ಕೆ ಸಂಪೂರ್ಣವಾದ ಸ್ವತಂತ್ರವಾದ ವೈಭವವುಳ್ಳದ್ದಾಗಿದೆ. ತನ್ನನ್ನು ಆಶ್ರಯಿಸಿದವರ ಭಾವನೆಗೆ ಅನುಕೂಲವಾದ ಸಿದ್ಧಿಯನ್ನು ಉಂಟುಮಾಡುವಂತಹದು ಆಗಿದೆ.

ಇಂತಹ ಭಕ್ತಿಯಿಂದ ಕೂಡಿದ ಶಿವಶರಣರಲ್ಲಿ ಕೆಲವರು ತಮ್ಮ ಪ್ರಾಣಸಹಿತವಾಗಿ, ಕೆಲವರು ಸ್ಥೂಲಶರೀರ ಸಹಿತವಾಗಿ ಕೆಲವರು ಸತಿಸುತ ಬಂಧುಬಳಗಗಳೊಡನೆ ಮತ್ತೆ ಕೆಲವರು ಗ್ರಾಮ, ದೇಶಕೋಶ, ಪರಿಜನರನ್ನು ಸಹಿತ ಕೂಡಿಕೊಂಡು ಶಿವಸನ್ನಿಧಿಯನ್ನು ಸೇರಿರುವರು. ಆದರೆ ಕೆಲವರು ಎಲ್ಲರನ್ನೂ ಬಿಟ್ಟು ತಾವು ಮಾತ್ರ ಹೋಗಿರುವರು. ಹೀಗಾಗುವದಕ್ಕೆ ಪ್ರಪಂಚವಿಷಯುಗಳಲ್ಲಿಯ ಅನುರಾಗ-ವಿರಾಗಗಳೇ ಕಾರಣವು ಪ್ರಾಣಾದಿ ವಸ್ತು ವಿಷಯುಗಳಲ್ಲಿ ಅನುರಾಗವುಳ್ಳ ಭಕ್ತರು ಅವುಗಳೊಡನೆಯೇ ಶಿವೈಕ್ಯರಾಗಿರುವರು. ಪಂಚಮ ಪುರುಷಾರ್ಥವೆನಿಸುವ ಈ ಶಿವಭಕ್ತಿಯು ಪರಮಾರ್ಥದಾಯಿನಿ, ಪರತತ್ವವೇದಿನಿ, ಭವದೋಷಹಾರಿಣಿ, ಎಂಬಲ್ಲಿ ಸಂದೇಹವುಂಟೇ ?

ಷಟ್‌ಸ್ಥಲಜ್ಞನಾದ ವೀರಶೈವನು

ಮೇಲೆ ಹೇಳಿದಂತೆ ಭಕ್ತಿಯ ಮಹಿಮೆಯನ್ನು ತಿಳಿದ ವೀರಶೈವನು ಶಿವಾದ್ವೈತಪರಾಯಣನಾಗಿರುವನು. ಭಕ್ತಿವಿಲಾಸ ವೈಭವದಲ್ಲಿ ಮೈಮರೆಯುವನು. ನಿಜೈಕ್ಯಸುಖಪ್ರದವಾದ ಶಿವಪ್ರಸಾದವನ್ನು ಹೊಂದಿ ಆನಂದವನ್ನು ಅನುಭವಿಸುವನು. “ನಾನು ಅನಾತ್ಮವಸ್ತುವಲ್ಲ. ಸರ್ವಕ್ಕೂ ಸಾಕ್ಷೀಭೂತನಾದ ಶಿವಾತ್ಮನೇ

ನಾನು; ಆತ್ಮಪ್ರಭುವಾದ ಶಿವನ ದಾಸನು ನಾನು; ದಾಸೋಹಂ, ದಾಸೋಹಂ' ಎಂದು ಸ್ವಲೀಲೆಯಿಂದ ಶಿವನನ್ನು ಅನಂತವಾಗಿ ಕೊಂಡಾಡುತ್ತ ಆಚರಿಸುತ್ತಿರುವನು. ಷಟ್‌ಸ್ಥಲಜ್ಞನಾದ ವೀರಶೈವನೆಂದರೆ ಈತನೇ !

ವೇದೋಪನಿಷತ್ತುಗಳು ಪರಬ್ರಹ್ಮನಾದ ಷಟ್‌ಸ್ಥಲಾತ್ಮಕ ಪರಶಿವನಿಗೆ ಜಗತ್ತಿನ ಜನನ–ಶಾಸನ–ಪಾಲನ ಶಕ್ತಿವಿಶಿಷ್ಟತ್ವವನ್ನು ಹೇಳಿರುವವು. ಈ ಶಕ್ತಿಯು ಶಿವನ ಸ್ವಭಾವಭೂತವಾಗಿರುವದು. ಇದನ್ನೇ ಆ ಪರಶಿವನ ವಿಮರ್ಶಾಶಕ್ತಿಯೆನ್ನುವರು. ಈ ಶಕ್ತಿಯೊಂದಿಲ್ಲದಿದ್ದರೆ ಶಿವನಿಗೆ ಸರ್ವಜ್ಞತ್ವ, ಸರ್ವಶಕ್ತಿಮತ್ವ, ಸರ್ವಕಾರಣತ್ವ, ಸರ್ವನಿಯಂತ್ರತ್ವ. ಸರ್ವೋಪಾಸ್ಯತ್ವ, ಸರ್ವಾನುಗ್ರಹತ್ವ, ಸರ್ವ ಪುರುಷಾರ್ಥ ಹೇತುತ್ವ, ಮೊಲಾದವು ಸಂಭವಿಸುತ್ತಿರಲಿಲ್ಲ. ಆಲೋಚನೆಗೂ ಅಸಾಧ್ಯವಾದ ಮಹಿಮೆಯುಳ್ಳ ಈ ಶಿವಶಕ್ತಿಗೇ ವೀರಶೈವರು ಭಕ್ತಿಯೆಂದು ಕರೆದಿರುವರು. ಸರ್ವ ಪುರುಷಾರ್ಥಗಳಿಗೆ ಹೇತುವಾಗಿರುವದರಿಂದ ಈ ಭಕ್ತಿಯನ್ನು ಪಂಚಮ ಪುರುಷಾರ್ಥವೆಂದು ಕರೆಯುವರು. ವೀರಶೈವರು ತಮ್ಮ ಷಟ್‌ಸ್ಥಲಾಚರಣೆಯಿಂದ ಈ ಭಕ್ತಿಯನ್ನು ಅಪೇಕ್ಷಿಸುವರಲ್ಲದೆ ಮುಕ್ತಿಯನ್ನು ಅಪೇಕ್ಷಿಸುವದಿಲ್ಲ. ಮುಕ್ತಿಯು ಈ ಭಕ್ತಿಯಲ್ಲಿ ಅಡಗಿರುವದು. ಅಂದರೆ ಅದರ ಅಂಶವಾಗಿರುವದು. ಆದ್ದರಿಂದ ಷಟ್‌ಸ್ಥಲಾಚರಣೆಗೆ ಈ ಪರಮಭಕ್ತಿಯೇ ಅಂತಿಮ ಧ್ಯೇಯವಾಗಿರುವದು. ಭಕ್ತಿಗೆ ಸ್ವಸ್ವರೂಪವೇ [ಭಕ್ತಿಯ ಸ್ವರೂಪವೇ] ಫಲವಾಗಿರುವದು.

ಇಂತಹ ಭಕ್ತಿಸಾಧಕವಾದ ಷಟ್‌ಸ್ಥಲಕ್ರಿಯೆಯ ತತ್ವವನ್ನು ಅರಿತು ಆಚರಿಸುವವನು ಒಂದೇ ಜನ್ಮದಲ್ಲಿ ಮುಕ್ತನಾಗುವ ವೀರಶೈವನೆಂದು ಆಗಮವಚನವಿದೆ. ಗುರುವಿನಿಂದ ಶಿವದೀಕ್ಷಾ ಸಂಸ್ಕಾರದ ಮೂಲಕವಾಗಿ ಷಟ್‌ಸ್ಥಲ ಜ್ಞಾನ ಸಂಪಾದನೆಗೆ ತಕ್ಕ ಅಧಿಕಾರವನ್ನು ಪಡೆದ ಪ್ರತಿಯೊಬ್ಬ ವೀರಶೈವನೂ ಈ ಅದ್ವೈತಭಕ್ತಿ ವೈಭವ ಸಂಪನ್ನನಾಗಿ ಜನ್ಮಸಾರ್ಥಕತೆಯನ್ನು ಶಿವೈಕ್ಯತೆಯನ್ನು ಪಡೆಯುವನು.

ಷಟ್‌ಸ್ಥಲವಿದ್ಯೆಯನ್ನು ಶಿವಪದದಲ್ಲಿ ಭಕ್ತಿಯುಳ್ಳವನಿಗೆ ಗುರು ಬೋಧಿಸತಕ್ಕದ್ದು.

ಈ ಶಿವಾದ್ವೈತ ಸಿದ್ಧಾಂತ ತತ್ವವನ್ನರಿತು ಆಚರಿಸುವ ಮಹಾಪ್ರಭುವು ಅಜ್ಞಾನಗ್ರಂಥಿಯನ್ನು ಭೇದಿಸುವನು.

× × × × ×

ಶಿವಾನುಭವ ವಿಶಿಷ್ಟನೂ ಮಹಾತ್ಮನೂ ಆದ ಮಾಯಿದೇವ ಪ್ರಭುವು ನಿರೂಪಿಸಿದ ವಾತುಲಾಗಮೋತ್ತರ ತಂತ್ರಸಾರವಾದ ಶಿವಾನುಭವಸೂತ್ರದ ಸರಳಗದ್ಯಾನುವಾದ ವಿದಕ್ಕೆ

ಶುಭಂ ಮಂಗಲಂ

ಶುದ್ಧಪಡಿ

ಪುಟ	ಸಾಲು	ತಪ್ಪು	ಒಪ್ಪು
೩	೧೪	ಪರಬ್ರಹ್ಮದೆಂದು	ಪರಬ್ರಹ್ಮವೆಂದು
೨	೧೭	ಸುತ್ರಾದಿ	ಸೂತ್ರಾದಿ
೫	೨೪	ಆಭರಣವಾಗಿ ಪರಿಣಮಿಸುವದು.	ಆಭರಣವಾಗಿ ಪರಿಣಮಿಸಿದಂತೆ ಪರಿಣಮಿಸುವನು.
೮	೬	ಭಕ್ತಿಗೆ	ಶಕ್ತಿಗೆ
೧೦	೧	ಶಿವನಿಗವ	ಶಿವನಿಗೂ
೨೦	೨೧	ಕ್ತಿಗಳಾಗಿ	ಶಕ್ತಿಗಳೇ ಸರ್ವಜ್ಞತ್ವಾದಿ ಶಕ್ತಿಗಳಾಗಿ.
೨೧	ಕೊನೆ	ಎಂದ	ಎಂದು
೨೨	ಕೊನೆ	ಅರ್ಥ	ಅರ್ಥ
೨೩	೧೮	ಪ್ರಾಣಗಳ	ಪ್ರಾಣಿಗಳ
೨೪	೧೬	ಒಳಗೊಂಡು	ಒಳಗೊಂಡು
೨೫	೧೬	ಕ್ರಿಯಾದೀ	ಕ್ರಿಯಾದೀಕ್ಷೆ
೨೬	೨೪	ಕಿಂಚಿಜ್ಞದ್ತ್ವ	ಕಿಂಚಿಜ್ಞತ್ವ
೨೭	೬	ಅಗನೆಂದು	ಅಂಗನೆಂದು
,,	ಕೊನೆ	ಕವ್ಯಗಳನ	ಕವ್ಯಗಳನ್ನು
೨೯	೨೨	ಶ್ರಧಾ	ಶ್ರದ್ಧಾ
೩೫	೨೦	ಕಂದ	ಕಂಠ
೩೭	೪	ತಗ್ಮುಖ	ತ್ವಗ್ಮುಖ
೩೮	೧೨	ಸುವಾಸಸೆ	ಸುವಾಸನೆ
೩೯	೭	ದವ್ಯಗಳು	ದ್ರವ್ಯಗಳು.
,,	೨೬	ಆದರೆ	ಅಂದರೆ
೪೩	ಕೊನೆ	ಮುಂದೆ ಗ್ರಂಥದ ಕೊನೆಯಲ್ಲಿ	ಹಿಂದೆ ೩೬,೩೭ನೆಯ ಪುಟಗಳಲ್ಲಿ
೪೮	೩	ಒಂದು	ಒಂದೂ
,,	ಕೊನೆ	ಇದಕ್ಕೆನು	ಇದಕ್ಕೆ ನಾನು

ನಿರ್ಣಯ ಪರಮಾವತಾರಿಗಳೆಂದೂ ಜಗದ್ವಿಖ್ಯಾತರಾದ ಅಣ್ಣ ಬಸವಣ್ಣನವರ ಸರ್ವತೋಮುಖ ಏಳ್ಗೆಗಾಗಿ ಅಕ್ಕನಾಗಮ್ಮನವರು ತಮ್ಮ ಜೀವನವನ್ನು ಅರ್ಪಿಸಿದರು; ಅಲ್ಲದೆ ಜ್ಞಾನನಿಧಿ ಷಟ್‌ಸ್ಥಲಚಕ್ರವರ್ತಿ ಚೆನ್ನಬಸವಣ್ಣನವರಿಗೆ ಜನ್ಮವಿತ್ತ ಮಹಾಮಾತೆ. ಶ್ರೀ ಶಿರಹಟ್ಟಿಯವರು ಅಕ್ಕನಾಗಮ್ಮನವರ ಪತಿ ಶಿವಸ್ವಾಮಿಯ ವಿಷಯ ತಿಳಿಸಿ ತಮ್ಮ ಸಮಯೋಚಿತ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸಿರುವರು. ....ಸಂದರ್ಭಾನುಸಾರವಾಗಿ ವಿಷಯ ವಿವೇಚನೆಗೆ ಬಳಸಿಕೊಂಡಿರುವ ನಾಗಮ್ಮನವರ ವಚನಗಳು ಗ್ರಂಥದ ವಿಷಯ ಸಂಪತ್ತಿಗೆ ಪೋಷಕವಾಗಿವೆ.....

ಮುದ್ದಾದ ಮುದ್ರಣ ಉತ್ತಮ ಕಾಗದಗಳ ಬಳಕೆ ಸುಂದರ ರಕ್ಷಾಕವಚಗಳಿಂದ ಗ್ರಂಥ ಶೋಭೆಗೊಂಡಿದೆ. ಪ್ರತಿಯೊಂದು ವಾಚನಾಲಯದಲ್ಲಿ ಅವಶ್ಯವಾಗಿ ಇರಬೇಕಾದ ಈ ಮಹತ್ವದ ಗ್ರಂಥವನ್ನು ರಾಯಚೂರ ಶಿವಶಕ್ತಿಪ್ರಕಾಶನದವರು ಪ್ರಕಟಿಸಿ ನಾಡಿನ ಸಾಹಿತ್ಯಕ್ಕೆ ಉಪಕಾರ ಮಾಡಿದ್ದಾರೆಂದು ಹೇಳಬಹುದು.

(ಎಸ್. ಎಸ್. ಭೂಸರಡ್ಡಿ) ಪರಂಜ್ಯೋತಿ, ಹುಬ್ಬಳ್ಳಿ

ಶ್ರೀ ಲಕ್ಕಪ್ಪ ಶಿರಹಟ್ಟಿಯವರು ‘ಬಸವರಾಜ ದೇವರು’ ಎಂಬ ತಮ್ಮ ಕೃತಿಯಿಂದ ಕನ್ನಡ ನಾಡಿಗೆ ಸುಪರಿಚಿತರಾಗಿದ್ದಾರೆ. ಆ ಕಾದಂಬರಿಯ ವಿಷಯಸಂಗ್ರಹಕಾಲಕ್ಕೆ ಅವರಿಗೆ ಬಸವಣ್ಣನವರ ಜೀವನದಲ್ಲಿ ಹಾಸುಹೊಕ್ಕಾಗಿದ್ದ ಅಕ್ಕನಾಗಮ್ಮನವರ ಚರಿತ್ರೆಯನ್ನು ಬರೆಯಬೇಕೆಂಬ ಬಯಕೆ ಮೂಡಿತು. ಬಸವಣ್ಣನವರ ಜೀವನಮುದ್ದಕ್ಕೂ ಅವರಿಗೆ ಸ್ಫೂರ್ತಿಪ್ರದಳಾಗಿ, ಅವರ ಬಾಳನೌಕೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಬಂದ ಅಕ್ಕನಾಗಮ್ಮನವರ ಜೀವನ ತ್ಯಾಗಮಯವಾಗಿದೆ. ಆದರ್ಶಮಯವಾಗಿದೆ. ಇಂತಹ ಮಾತಾಯಿಯ ಬಗೆಗೆ ಬರೆದು ಆಕೆಯ ಉಜ್ವಲ ಜೀವನದ ಪರಿಚಯ ವಾಚಕರಿಗೆ ಮಾಡಿಕೊಟ್ಟು, ಶ್ರೀ ಶಿರಹಟ್ಟಿಯವರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ,...................

ಕಲ್ಯಾಣಕ್ರಾಂತಿಯ ನಂತರವೂ ನಾಗಮ್ಮನವರ ಜೀವವು ವೀರಶೈವ ಧರ್ಮದ ಪ್ರಚಾರಕ್ಕಾಗಿ ಪರಿತಪಿಸುತ್ತಿದ್ದಿತು............ತಾವು ಬದುಕಿದಷ್ಟು ದಿನವೂ ಅಧ್ಯಾತ್ಮ ಪ್ರಚಾರದಲ್ಲಿಯೇ ಸಮಯ ಕಳೆದವರು ನಾಗಮ್ಮ! ಬಸವಣ್ಣ ಚೆನ್ನಬಸವಣ್ಣರನ್ನು ತ್ಯಾಗಪೂರ್ವಕ ಪ್ರೀತಿಯಿಂದ ನೋಡಿಕೊಂಡು ಲೋಕಕ್ಕೆ ನೀಡಿದವರು ನಾಗಮ್ಮ! ಇವರ ಚರಿತ್ರೆ ನಾರಿಯರಿಗೆಲ್ಲ ಆದರ್ಶವಾಗಿದೆ. ಇಂಥ ಮಹಾತಾಯಿಯರಿಂದಲೇ ಭಾರತದ ಹಿರಿಮೆ ಇನ್ನೂ ಉಳಿದುಕೊಂಡಿದೆ,

ಶ್ರೀ ಶಿರಹಟ್ಟಿಯವರ ಈ ನಾಗಮ್ಮ ಚರಿತ್ರೆಯನ್ನು ಓದಲು ತೊಡಗಿದರೆ ಮುಗಿಸದೆ ಕೆಳಗಿಡಲು ಮನಸ್ಸಾಗುವದಿಲ್ಲ. ಅಷ್ಟೊಂದು ಆಕರ್ಷಕವಾಗಿದೆ ಅವರ ಶೈಲಿ! ಘಟನೆಗಳ ಜೋಡಣೆ. ಹೃದಯಸ್ಪರ್ಶಿ ವಿವರಣೆ! ಇಂಥ ಅನೇಕ ಕೃತಿಗಳನ್ನು ಶ್ರೀ ಲಕ್ಕಪ್ಪನವರು ನೀಡಲಿ ಎಂದು ಹಾರೈಸುತ್ತೇವೆ.

ಪ್ರಕಾಶಕರಾದ ಜುಕ್ತಿಬಂಧುಗಳು ತಮ್ಮ ಅಜ್ಜಿಯ ಲಿಂಗೈಕ್ಯ ದಿನಾಚರಣೆಯ ಅಂಗವಾಗಿ ಈ ಗ್ರಂಥವನ್ನು ಬೆಳಕಿಗೆ ತಂದಿರುವದು ಅವರ ಸದ್ಭಾವದ ಕುರುಹ.

(ದ. ಲ. ಕೆ.) ಸಂಯುಕ್ತಕರ್ನಾಟಕ ೨೭-೩-೭೧

ಶ್ರೀ ಲಕ್ಕಪ್ಪ ಶಿರಹಟ್ಟಿ ಅವರ ಕೃತಿಗಳು

ಕಾವ್ಯ :

೧] ನೀತಿ ಮುಕ್ತಾವಲಿ (ನೈತಿಕ ಖಂಡಕಾವ್ಯ)

೨] ನೂರೊಂದು ನೆಲೆಯ ನಿಲವು (ಷಟ್‌ಸ್ಥಲ ತತ್ವಕಾವ್ಯ)

೩] ಲಿಂಗರಾಜ (ಚಾರಿತ್ರಿಕ ಕಾವ್ಯ)

ಐತಿಹಾಸಿಕ ಕೃತಿಗಳು :

೪] ಚಿತ್ತೂರಿನ ಪುನರುದ್ಧಾರ (ಕತೆ)

೫] ಕನ್ನಡಿಗನ ಕಲಿತನ (ನಾಟಕ)

೬] ಬಯಲಾದ ಸಂಚು (ನೀಳ್ಗತೆ)

ಪ್ರಕಾಶನ : ಅರವಿಂದ ಗ್ರಂಥ ಮಾಲೆ, ಚಡಚಣ

ಮಹಾತ್ಮರ ಜೀವನ ಚರಿತ್ರೆ :

೭] ಶ್ರೀ ಸಿದ್ಧರಾಮೇಶ್ವರ ಚರಿತ್ರೆ

ಪ್ರಕಾಶನ : ಶ್ರೀ ಸಿದ್ಧೇಶ್ವರ ಸಂಸ್ಥೆ, ವಿಜಾಪುರ

೮] ಯೋಗಿರಾಜ ವಿಜಯ

ಪ್ರಕಾಶನ ಹಾಲಕೇರಿಯ ವಿರಕ್ತಮಠ

೯] ಬಸವರಾಜ ದೇವರು

ಪ್ರಕಾಶನ: ಶ್ರೀ ಶಿ. ಸ್ವಾ. ಬಸವೇಶ್ವರ ಲಿಂ. ಜಾ. ಸಂಸ್ಥೆ, ವಿಜಾಪುರ

೧೦] ಕ್ರಾಂತಿ ಗಂಗೋತ್ರಿ

ಪ್ರಕಾಶನ : ಶಿವಶಕ್ತಿ ಪ್ರಕಾಶನ, ರಾಯಚೂರ

೧೧] ಕಾಯಕ ವೀರ

ಪ್ರಕಾಶನ : ಅರುಣೋದಯ ಪ್ರಕಾಶನ, ವಿಜಾಪುರ

ಅನುವಾದ :

೧೨] ಶಿವಾದ್ವೈತಸಿದ್ಧಾಂತ

ಪ್ರಕಾಶನ : ಅರುಣೋದಯ ಪ್ರಕಾಶನ, ವಿಜಾಪುರ